ಓಂ ನಮಃ ಸುಖಾಯ　　　　　　　　ಓಂ ನಮೋ ನಾನವೇ

ಪೂಜ್ಯಶ್ರೀ ಗುರುದೇವ ಆತ್ಮಾನಂದ ಮಹಾಸ್ವಾಮಿಗಳು

ಮನಿಹಾಳ - ಸುರೇಬಾನ

ಇವರ ಇಂಗ್ಲೀಷ್ ಬಿಡಿ ಟಿಪ್ಪಣಿಗಳ ಕನ್ನಡ ಅನುವಾದದ ಗ್ರಂಥಗಳು

# ಆತ್ಮಸಾಕ್ಷಾತ್ಕಾರ, ಪ್ರಥಮಾನುಭೂತಿ, ಶಾಶ್ವತ ಶಾಂತಿ

# ಗಾಢ ನಿದ್ರೆ ಮತ್ತು ಸಮಾಧಿ,

# ಅವಿದ್ಯೆಯು ಅನಾದಿ ಅನಂತವಲ್ಲ, ಅದು ಸಾದಿ ಸಾಂತವು.




ಸಂಗ್ರಹಕಾರರು :

**ಪ್ರೊ. ಎಸ್. ಎಸ್. ಕುರುಬರ**

ಪೂಜ್ಯಶ್ರೀ ಗುರುದೇವ ಆತ್ಮಾನಂದ ಆಶ್ರಮ,

ಸಾ. ಹಂಗರಕಿ, ಪೋ. ಗರಗ, ತಾ. ಜಿ. ಧಾರವಾಡ



ಗ್ರಂಥ ಪೋಷಕರು :

**ಶ್ರೀ ಸಂಪತ್ಕುಮಾರ ರುದ್ರಪ್ಪ ದೇಸಾಯಿ**

ನಿವೃತ್ತ ಕಮಾಂಡರ, ಭಾರತೀಯ ನೌಕಾಪಡೆ,

ಸಾ. ಹಂಗರಕಿ, ತಾ. ಜಿ. ಧಾರವಾಡ

**ಶ್ರೀ ಆತ್ಮಾನಂದ ಅಧ್ಯಾತ್ಮ ಪ್ರಕಾಶನ**

ಸಾ. ಹಂಗರಕಿ, ಪೋ. ಗರಗ, ತಾ. ಜಿ. ಧಾರವಾಡ

ಓಂ ನಮಃ ಸುಖಾಯ

ಓಂ ನಮೋ ನಾನವೇ



**ಪೂಜ್ಯಶ್ರೀ ಗುರುದೇವ ಆತ್ಮಾನಂದ ಮಹಾಸ್ವಾಮಿಗಳು**

**ಮನಿಹಾಳ - ಸುರೇಬಾನ**

**ಇವರ ಇಂಗ್ಲೀಷ್ ಬಿಡಿ ಟಿಪ್ಪಣಿಗಳ ಕನ್ನಡ ಅನುವಾದದ ಗ್ರಂಥಗಳು**

# ಆತ್ಮಸಾಕ್ಷಾತ್ಕಾರ, ಪ್ರಥಮಾನುಭೂತಿ, ಶಾಶ್ವತ ಶಾಂತಿ
# ಗಾಢ ನಿದ್ರೆ ಮತ್ತು ಸಮಾಧಿ,
# ಅವಿದ್ಯೆಯು ಅನಾದಿ ಅನಂತವಲ್ಲ, ಅದು ಸಾದಿ ಸಾಂತವು


ಸಂಗ್ರಹಕಾರರು :

**ಪ್ರೊ. ಎಸ್. ಎಸ್. ಕುರುಬರ**

ಪೂಜ್ಯಶ್ರೀ ಗುರುದೇವ ಆತ್ಮಾನಂದ ಆಶ್ರಮ,

ಸಾ. ಹಂಗರಕಿ, ಪೋ. ಗರಗ, ತಾ. ಜಿ. ಧಾರವಾಡ

ಗ್ರಂಥ ಪೋಷಕರು :

**ಶ್ರೀ ಸಂಪತ್ಕುಮಾರ ರುದ್ರಪ್ಪ ದೇಸಾಯಿ**

ನಿವೃತ್ತ ಕಮಾಂಡರ, ಭಾರತೀಯ ನೌಕಾಪಡೆ,

ಸಾ. ಹಂಗರಕಿ, ತಾ. ಜಿ. ಧಾರವಾಡ



**ಶ್ರೀ ಆತ್ಮಾನಂದ ಅಧ್ಯಾತ್ಮ ಪ್ರಕಾಶನ**

**ಸಾ. ಹಂಗರಕಿ, ಪೋ. ಗರಗ, ತಾ. ಜಿ. ಧಾರವಾಡ**

ಪ್ರಕಾಶಕರು :

**ಶ್ರೀ ಆತ್ಮಾನಂದ ಆಧ್ಯಾತ್ಮ ಪ್ರಕಾಶನ**

ಸಾ. ಹಂಗರಕಿ, ಪೋ. ಗರಗ, ತಾ. ಜಿ. ಧಾರವಾಡ

ಎರಡನೇಯ ಮುದ್ರಣ ೨೦೦೭

ಒಂದು ಸಾವಿರ ಪ್ರತಿಗಳು

ಎಲ್ಲಾ ಹಕ್ಕುಗಳು ಸಂಗ್ರಹಕಾರರು ಮತ್ತು ಪ್ರಕಾಶಕರಿಂದ ಕಾಯ್ದಿರಿಸಲ್ಪಟ್ಟಿವೆ.

ಬೆಲೆ 10-00 ರೂಪಾಯಿ

ಓಂ ನಮಃ ಸುಜಾಯ ಓಂ ನಮೋ ನಾನವೆ



# ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಮಹಾಸ್ವಾಮಿಗಳು

M.A.

ಮನಿಹಾಳ – ಸುರೇಬಾನ

ತಾ: ರಾಮದುರ್ಗ ಜಿ: ಬೆಳಗಾವಿ

# ಪೂಜ್ಯ ಶ್ರೀ ಸದ್ಗುರು ಆತ್ಮಾನಂದರ ಸಂಕ್ಷಿಪ್ತ ಪರಿಚಯ

ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು 1904ರಲ್ಲಿ ಪರಮ ತಪಸ್ವಿಗಳೂ, ಅವತಾರಿ ಪುರುಷರೂ ಆದ ಪೂಜ್ಯ ಶ್ರೀ ಸದ್ಗುರು ಶಿವಾನಂದರ (ನಾಗನೂರ-ಗದಗ) ಏಕಮೇವ ಮಾನಸ ಮತ್ತು ಔರಸ ಪುತ್ರರಾಗಿ ಜನಿಸಿದರು. ಬಾಲ್ಯದಿಂದಲೇ ಅವರಿಗೆ ಅಧ್ಯಾತ್ಮ ವಿಚಾರದ ಕಡೆಗೆ ಒಲವು ಇತ್ತು. ಪೂಜ್ಯ ಶ್ರೀ ಸದ್ಗುರು ಶಿವಾನಂದರು ಅಧ್ಯಾತ್ಮ ಬೋಧನೆಗಾಗಿಯೇ ತಮ್ಮ ಜೀವನವನ್ನು ಮುಡುಪಿಟ್ಟರು. ಆತ್ಮಾನಂದರು ತಮ್ಮ ತಂದೆಯವರ ವಿಶೇಷ ಪೋಷಣೆಯಲ್ಲಿಯೇ ಬೆಳೆದರು. ಅವರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಪೂಜ್ಯ ಶ್ರೀ ಸದ್ಗುರು ಶಿವಾನಂದರು ತುರ್ಯಸ್ಥಿತಿಯನ್ನು ಹೊಂದುತ್ತಿದ್ದರು. ಅದು ಎರಡು-ಮೂರು ದಿನಗಳವರೆಗೆ ಇರುತ್ತಿತ್ತು. ಆಗ ಆತ್ಮಾನಂದರು ಪೂಜ್ಯ ಶ್ರೀ ಸದ್ಗುರು ಶಿವಾನಂದರ ತುರ್ಯಸ್ಥಿತಿಯನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿ ಅದರ ಗೂಢಾರ್ಥವನ್ನು ತಿಳಿದುಕೊಂಡರು. ಅವರು 1932ರಲ್ಲಿ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ಎಂಬ ವಿಷಯವನ್ನು ತೆಗೆದುಕೊಂಡು ಬನಾರಸ ಹಿಂದೂ ವಿಶ್ವವಿದ್ಯಾಲಯದ ಎಂ.ಎ. ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ನಂತರ ತಮ್ಮ ತಂದೆಯವರ ವಿಶೇಷ ಮಾರ್ಗದರ್ಶನದಿಂದ ಮತ್ತು ತಮ್ಮ ಹಿಂದಿನ ಜನ್ಮದ ಆತ್ಮಾಭ್ಯಾಸದ ತೀವ್ರ ಸಂಸ್ಕಾರದಿಂದ ತುರ್ಯ ಸ್ಥಿತಿಯನ್ನು ಹೊಂದಿಯೇ ತೀರಬೇಕೆಂದು ನಿಶ್ಚಯಿಸಿದರು. ಎಲ್ಲ ಅಧಿಕಾರ, ಸಂಪತ್ತು, ಐಷಾರಾಮದ ಜೀವನ ಮತ್ತು ಲೋಕ ಪ್ರಸಿದ್ಧಿಯನ್ನು ನಿರ್ಲಕ್ಷಿಸಿದರು. ಆಗ ಅವರು ಕೆಲವು ಕಾಲದವರೆಗೆ ಸಂಚಾರವನ್ನು ಕೈಕೊಂಡರು. ಆಗ ಅವರು ಸ್ವರೂಪಾವಸ್ಥಿತಿಯನ್ನು ಹೊಂದುವ ಸತತ ಅಭ್ಯಾಸದಲ್ಲಿ ತೊಡಗಿ ಅಲ್ಪಕಾಲದಲ್ಲಿಯೇ ಆತ್ಮಜ್ಞಾನಿಗಳಾದರು. ಅವರು ಪ್ರಾರಬ್ಧಕ್ಕನುಸಾರವಾಗಿ 1936ರಲ್ಲಿ ದೇವಕಿ ಎಂಬ ನೀತಿ ಸಂಪನ್ನಳಾದ ಸ್ತ್ರೀಯನ್ನು ಮದುವೆಯಾದರು. ದೇವಕಿಯವರು ತಮ್ಮ ಪತಿಯವರಿಗೆ ಅವರಿಚ್ಛೆಯಂತೆ ಎಲ್ಲ ರೀತಿಯಿಂದಲೂ ಸಹಕರಿಸಿದರು. ಅವರಿಗೆ ಇಬ್ಬರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು ಇದ್ದರು. ಅವರ ಎರಡನೇ ಮಗನು ಕಾಲೇಜ ವಿದ್ಯಾರ್ಥಿಯಾಗಿದ್ದಾಗ ವಿಷಮ ಜ್ವರದ ಭಯಂಕರ ಬಾಧೆಯಿಂದ ದೇಹ ಬಿಟ್ಟನು. ಈಗ ಅವರ ಒಬ್ಬ ಮಗ ಮತ್ತು ಇಬ್ಬರು ಹೆಣ್ಣುಮಕ್ಕಳು ನೀತಿ ನಿಷ್ಠೆಯಿಂದ ತಮ್ಮ ಗೃಹಸ್ಥ ಜೀವನವನ್ನು ಸಾಗಿಸುತ್ತಿದ್ದಾರೆ. ಈಗ ಅವರ ಸುಪುತ್ರರಾದ ಪೂಜ್ಯ ಶ್ರೀ ನಿರಂಜನ ಸ್ವಾಮಿಗಳು ತಮ್ಮ ತಂದೆಯವರಂತೆ ಅಧ್ಯಾತ್ಮ ಸಂಪ್ರದಾಯವನ್ನು ಮುಂದುವರಿಸುತ್ತಿದ್ದಾರೆ.

ಪೂಜ್ಯ ಶ್ರೀ ಸದ್ಗುರು ಶಿವಾನಂದರು ಮತ್ತು ಅವರ ಪುತ್ರರಾದ ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ವ್ಯಾಸ, ಶುಕದೇವ ಮುನಿಗಳಂತೆ ಇದ್ದರು. ಪ್ರವಚನ ಹೇಳುವ ಕಾಲಕ್ಕೆ ಅನೇಕ ಸಲ ತುರ್ಯಸ್ಥಿತಿಯನ್ನು ಹೊಂದಿದ ಧೀರರಿವರು. ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ತಾವು ಪಡೆದ ಪರಮೋನ್ನತ ಶಾಂತಿಯನ್ನು ಇನ್ನುಳಿದ ಜೀವಿಗಳು ಪಡೆದು ಸುಖಿಯಾಗಲಿ ಎಂದು ವೈಯ್ಯಾಕರಣಿಯ ಸ್ಥಿತಿಯಿಂದ ಅವರಿವರೆನ್ನದೆ ಭುವನದ ಮಾನವರೆಲ್ಲರಿಗೂ 45 ವರ್ಷಗಳವರೆಗೆ ಅಧ್ಯಾತ್ಮ ಜ್ಞಾನವನ್ನು ಬೋಧಿಸಿದರು. ಮಧ್ಯಂತರದಲ್ಲಿ ಪ್ರಾರಬ್ಧಕ್ಕನುಸಾರವಾಗಿ ಕೆಲವು ಕಾಲ ಮನಿಹಾಳ ಗ್ರಾಮದ (ತಾ. ರಾಮದುರ್ಗ) ಪಾಟೀಲರಾಗಿ ಮತ್ತು ರಾಮದುರ್ಗ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು.

ಎಲ್ಲ ಜೀವಿಗಳಿಗೆ ಬೇಕಾದದ್ದು ಶಾಶ್ವತ ಸುಖವು. ಅದು ರೂಪರಹಿತವಿದೆ. ಆದರೆ ಅಜ್ಞಾನಿ ಜೀವಿಗಳು ರೂಪಗಳಲ್ಲಿಯೇ ಸುಖವನ್ನು ಹುಡುಕುತ್ತಾರೆ ಮತ್ತು ಕಲ್ಪಿತ ರೂಪಗಳಿಗಾಗಿ ಜಗಳಾಡುತ್ತಾರೆ. ಆದ್ದರಿಂದ ಜೀವಿಗಳು ವ್ಯರ್ಥವಾಗಿ ರೂಪಗಳಲ್ಲಿ ಸುಖವನ್ನು ಹುಡುಕದೆ ಮತ್ತು ಕಲ್ಪಿತ ರೂಪಗಳಿಗಾಗಿ (ಶಿವ, ಪಾರ್ವತಿ, ವಿಷ್ಣು, ಲಕ್ಷ್ಮಿ ಮುಂತಾದವುಗಳು) ಜಗಳಾಡದೆ ರೂಪರಹಿತ ಸುಖವನ್ನು ನೆನಪಿಗೆ ತಂದುಕೊಳ್ಳುವದಕ್ಕಾಗಿ ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ಓಂ ನಮಃ ಸುಖಾಯ ಎಂಬ ಮಂತ್ರವನ್ನು ಹೇಳಿರುವರು.

ಅದರಂತೆ ಅಜ್ಞಾನಿ ಜೀವರು ಸುಖವನ್ನು ತಮ್ಮ ನಿಜ ಸ್ವರೂಪದ ಹೊರಗೆ ಹುಡುಕಿ ಬಳಲುತ್ತಾರೆ. ಹೀಗೆ ಅವರು ವ್ಯರ್ಥ ಬಳಲದೆ, ತಮ್ಮ ನಿಜಸ್ವರೂಪವೇ ಸುಖವೆಂದು ತಿಳಿದು, ಕೇವಲ ತಮ್ಮ ಸುಖಮಯ ನಿಜಸ್ವರೂಪವನ್ನೇ ನೆನಪಿಗೆ ತಂದುಕೊಳ್ಳಲು ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ಓಂ ನಮೋ ನಾನವೆ ಎಂಬ ಮಂತ್ರವನ್ನು ಹೇಳಿರುವರು.

ಜೀವಿಗಳಿಗೆ ಆನಂದದ ಗುರುತು ಭಾವ ಉದಯವಾದಾಗಿನಿಂದಲೇ ಇದೆ. ಅದೇ ಪ್ರಥಮಾನುಭೂತಿ, ಅದನ್ನು ಮರೆತಂತಾಗಿದೆ. ಪ್ರಥಮಾನುಭೂತಿಯನ್ನು ನೆನಪಿಸಿಕೊಂಡು ಆನಂದನಿಷ್ಠರಾಗಲು ಘಂಟಾಘೋಷವಾಗಿ ಶ್ರೀಗಳವರು ತಿಳಿಸಿದರು.

ಬ್ರಹ್ಮಚರ್ಯಾಶ್ರಮ (ಬ್ರಹ್ಮವಿದ್ಯೆಯ ಅಭ್ಯಾಸ) ಗೃಹಸ್ಥಾಶ್ರಮ (ವಿಷಯ ಭೋಗದ ವ್ಯವಹಾರವು ನಡೆದಾಗಲೆಲ್ಲ ಅದರಲ್ಲಿ ಸುಖವಿದೆಯೋ ಅಥವಾ ದುಃಖವಿದೆಯೋ ಎಂಬುದನ್ನು ವಿಚಾರ ಮಾಡುವದು) ವಾನಪ್ರಸ್ಥಾಶ್ರಮ (ಮನೆತನದ ವ್ಯವಹಾರವನ್ನು ಕೈ ಬಿಟ್ಟು ಆತ್ಮ ವಿಚಾರದಲ್ಲಿ ತೊಡಗುವುದು) ಇವು ಪುನಃ ಪ್ರತಿಷ್ಠಾಪನೆಯಾಗದ ಹೊರತು ಸಮಾಜದಲ್ಲಿ ಸುಖ ಶಾಂತಿಗಳು ನೆಲೆಸಲಾರವು ಎಂದು ಪೂಜ್ಯ ಆತ್ಮಾನಂದ ಗುರುಗಳು ತಿಳಿಸಿದರು.

ನೀತಿ ವೈರಾಗ್ಯ, ತುರ್ಯಸ್ಥಿತಿ (ಆತ್ಮಜ್ಞಾನ)ಯನ್ನು ಪಡೆಯದೆ ಮೋಕ್ಷ



ವಿಲ್ಲವೆಂದು ಘಂಟಾಘೋಷವಾಗಿ ತಿಳಿಸಿದರು. ಅವರು ಇಡೀ ವಿಶ್ವದ ದಾರ್ಶನಿಕ ಶಾಸ್ತ್ರದ ಸಾರವನ್ನೇ ಅರ್ಥಾತ್ ತಮ್ಮ ಅನುಭವವನ್ನೇ ನೀಡಿದರು.

ಲೋಕದಲ್ಲಿ ಜನಿಸಿದ ಪ್ರತಿಯೊಂದು ಜೀವಿ ಅಂದರೆ ಪಶು ಪಕ್ಷಿ, ಕೀಟಕಾದಿ ಮೊದಲುಗೊಂಡು ಮಾನವನವರೆಗೆ ಬೇಕಾದುದು ಏನು? ಬೇಕಾದುದು ಸುಖ. ಸುಖ ಹೇಗೆ ದೊರಕುತ್ತದೆ? ತನ್ನ ನಿಜದ ಎಚ್ಚರಿಕೆಯಲ್ಲಿ ಇದ್ದಾಗ. ಅಂದರೆ ನಿದ್ರೆಯಲ್ಲಿ ಹೇಗೆ ಆಶೆ ಆಮಿಷ ರೋಷ ಇತ್ಯಾದಿ ಎಲ್ಲವನ್ನು ಮರೆತು ನಿಜವಾದ ನಿದ್ರಾ ಸುಖವನ್ನು ಹೇಗೆ ಅನುಭವಿಸುತ್ತೀರೋ ಹಾಗೆ ಜಾಗ್ರದ ಅವಸ್ಥೆಯಲ್ಲಿ ಇದ್ದಾಗ ಎಲ್ಲವನ್ನು ಮಾಡಿದರೂ ಮಾಡದವನಂತೆ ತನ್ನ ನಿಜದ ಅರುವಿನಲ್ಲಿ ಇದ್ದದ್ದಾದರೆ ನಿಜವಾದ ಸುಖವನ್ನು ಹೊಂದುವಿರಿ ಎಂದು ಪೂಜ್ಯ ಆತ್ಮಾನಂದ ಗುರುಗಳು ತಿಳಿಸಿದರು.

ಪಾಪ ಕರ್ಮಗಳನ್ನು ಮಾಡಬಾರದು. ಅವುಗಳನ್ನು ಮಾಡಿದರೆ ಅವುಗಳ ಫಲವಾದ ದುಃಖವನ್ನು ಉಣ್ಣಲೇಬೇಕಾಗುವದು. ಪಾಪಾ ಮಾಡಬೇಡ ತಮ್ಮಾ, ಲತ್ತಿ ತಿಂದಿ ಎಲ್ಲಿ, ಯಮನವರಲ್ಲಿ. ಯಮನಭಟರು ಕರುಣಾ ರಸಮಯರೇ, ಮರವೆಯೆ ಚಿತ್ರಗುಪ್ತರಿಗೆ. ನೀನು ಮಾಡಿದ ಕರ್ಮದ ಫಲ ನಿನಗೆ ಬಂದೇ ತೀರುವದು. ನಿಮ್ಮಪ್ಪ ಸತ್ತು, ನಿಮ್ಮವ್ವ ಗೂಟಕ್ಕೆ ಕೂತರೂ ಆ ಕರ್ಮದ ಫಲ ನಿನಗೇ ಬರುವದು, ಎಂದು ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ತಿಳಿಸಿದರು.

ಮಾನವನು ನೀತಿಯಿಂದ ನಡೆದರೆ ಸಮಾಜದಲ್ಲಿ ಇದ್ದ ಜೀವಿಗಳ ವ್ಯವಹಾರವು ಸುಗಮವಾಗಿ ನಡೆಯುವದು. ನೀತಿಹೀನ ವ್ಯವಹಾರವನ್ನು ಸಾಗಿಸುವದರಿಂದ ಮಾನವನು ಅತಿ ದುಃಖಕ್ಕೀಡಾಗುತ್ತಾನೆಂದು ಪೂಜ್ಯ ಗುರುಗಳು ತಿಳಿಸಿದರು.

ಅಧ್ಯಾತ್ಮದ ತತ್ವಗಳನ್ನು ಯಾವುದೇ ಕ್ಲಿಷ್ಟತೆಗಳಿಲ್ಲದೆ, ಶಾಸ್ತ್ರೀಯ ಪ್ರಕ್ರಿಯೆಗಳಿಲ್ಲದೆ ಸಾಮಾನ್ಯ ಜನರಾಡುವ ಸರಳ ಭಾಷೆಯಲ್ಲಿ ಬೋಧಿಸಿದರು. ಅವರು ಬೋಧಿಸಿದ ತತ್ವಗಳು ತ್ರಿಕಾಲಾಭಾದಿತ ಸತ್ಯವಾಗಿವೆ ಮತ್ತುಅನುಭವಾನುಸಾರಿಯಾಗಿವೆ.

ಅವರದು ಅತಿ ಸಾದಾ ಸರಳ ಜೀವನ. ಮೈಮೇಲೆ ತೊಡಲು ಒಂದು ಜೋಡಿ ಹತ್ತಿಯ ಧೋತರ, ಒಂದು ಜೋಡಿ ಹತ್ತಿಯ ಅಂಗಿ, ಮತ್ತು ತಲೆಯ ಮೇಲೆ ಒಂದು ಟಾವೆಲ, ಮಧ್ಯಾಹ್ನ ಒಂದು ಗಂಟೆಗೆ ಊಟ, ರಾತ್ರಿ ೯-೩೦ ಘಂಟೆಗೆ ಸ್ವಲ್ಪ ಹಣ್ಣು ಹಾಲು. ಪೂಜ್ಯರು ಅತೀ ನಿರಭಿಮಾನಿಗಳು ಮಾನವರನ್ನು ಕುರಿತು "ನೀವೇ ದೇವರು, ನಾನೇ ಪೂಜಾರಿ, ನೀವೇ ಗುರುಗಳು, ನಾನೇ ಶಿಷ್ಯ" ಎಂದು ಬೋಧಿಸುತ್ತಿದ್ದರು.

ಅವರ ಒಂದು ದಿನದ ದಿನಚರಿಯು ಕೆಳಗಿನಂತಿದೆ. ಮುಂಜಾನೆ ಬ್ರಾಹ್ಮಿ ಮುಹೂರ್ತದಲ್ಲಿ ೪ ಘಂಟೆಗೆ ಎದ್ದು ಮುಖ ಮಾರ್ಜನ ಮಾಡಿಕೊಂಡು ಹೊರಗಡೆ ಅಡ್ಡಾಡಲಿಕ್ಕೆ ಹೋಗುತ್ತಿದ್ದರು. ಅಲ್ಲಿ ಲಘು ಶೌಚ ಮತ್ತು ದೀರ್ಘ

ಶೌಚಾದಿಗಳನ್ನು ಮುಗಿಸಿಕೊಂಡು ಐದುವರೆ ಘಂಟೆ ಸುಮಾರಿಗೆ ಮರಳುತ್ತಿದ್ದರು. ಐದುವರೆಯಿಂದ ಏಳುವರೆವರೆಗೆ ಅವರಿವರೆನ್ನದೆ ಭುವನದ ಮಾನವರೆಲ್ಲರಿಗೂ ಸಾರ್ವತ್ರಿಕ ಅನುಭವಾನುಸಾರಿಯಾದ ಅಧ್ಯಾತ್ಮ ತತ್ತ್ವಗಳನ್ನು ಬೋಧಿಸುತ್ತಿದ್ದರು. ಏಳುವರೆಯಿಂದ ಎಂಟು ಗಂಟೆಯವರೆಗೆ ಸ್ನಾನ. ಎಂಟು ಗಂಟೆಯಿಂದ ಸುಮಾರು ಹನ್ನೊಂದು, ಹನ್ನೆರಡು ಗಂಟೆಯವರೆಗೆ ಸ್ವರೂಪದ ಅನುಷ್ಠಾನದಲ್ಲಿ ಮಗ್ನರಾಗುತ್ತಿದ್ದರು. ನಂತರ ಒಂದು ಗಂಟೆಯವರೆಗೆ ದರ್ಶನಾರ್ಥಿಗಳ ಕೂಡ ಸಂಭಾಷಣೆ ಮತ್ತು ಅವರ ಪೀಡೆ ಪಿಶಾಚಿಗಳನ್ನು ನಿವಾರಣೆ ಮಾಡುತ್ತಿದ್ದರು. ಮಧ್ಯಾಹ್ನ ಒಂದು ಗಂಟೆಗೆ ಊಟ. ಊಟದಲ್ಲಿ ಅರ್ಧ ರೊಟ್ಟಿ, ಸ್ವಲ್ಪ ಸಜ್ಜಕ, ಸ್ವಲ್ಪ ಕಾಯಿ ಪಲ್ಲೆ. ತೊಪ್ಪಲ ಪಲ್ಲೆ. ಸ್ವಲ್ಪ ಹಾಲು ಹಣ್ಣು ಇರುತ್ತಿದ್ದವು. ಎರಡು ಗಂಟೆಯಿಂದ ಮೂರುವರೆ ಗಂಟೆಯವರೆಗೆ ವಿಶ್ರಾಂತಿ. ಮೂರುವರೆಯಿಂದ ಐದುವರೆ ಗಂಟೆಯವರೆಗೆ ಅಲ್ಲಿದ್ದ ಸದ್ಭಕ್ತರಿಗೆ ಅಧ್ಯಾತ್ಮ ಬೋಧ. ಐದುವರೆಯಿಂದ ಏಳು ಗಂಟೆಯವರೆಗೆ ಅಡ್ಡಾಡಲಿಕ್ಕೆ ಹೋಗುತ್ತಿದ್ದರು. ಏಳರಿಂದ ಒಂಭತ್ತು ಗಂಟೆಯವರೆಗೆ ಅಧ್ಯಾತ್ಮ ಪ್ರವಚನ, ಒಂಭತ್ತರಿಂದ ಹತ್ತು ಗಂಟೆಯವರೆಗೆ ಜೀವಿಗಳ ಸುಖ ದುಃಖ ಕುರಿತು ವಿಚಾರಿಸುತ್ತಿದ್ದರು. ರಾತ್ರಿ ಹತ್ತರಿಂದ ಬೆಳಗು ಮುಂಜಾನೆ ನಾಲ್ಕು ಗಂಟೆಯವರೆಗೆ ವಿಶ್ರಾಂತಿ. ನಮಗೆ ಅವರು ವಿಶ್ರಾಂತಿಗೈಯ್ಯುತ್ತಾರೆಂದು ಅನಿಸಿದರೂ ಅವರು ತಮ್ಮ ಸ್ವರೂಪಾವ ಸ್ಥಿತಿಯಲ್ಲಿಯೇ ಉಳಿಯುತ್ತಿದ್ದರು.

ಅವರಿಗೆ ೭೦ ಎಕರೆ ಜಮೀನು ಇದ್ದರೂ ಅವರು ಒಕ್ಕಲುತನವನ್ನು ಮಾಡಿಸಲಿಲ್ಲ. ಯಾರೋ ಬಿತ್ತಿ ಬೆಳೆದದ್ದರಲ್ಲಿ ಅಲ್ಪ ಸ್ವಲ್ಪ ಇವರಿಗೆ ಕೊಡುತ್ತಿದ್ದರು. ಇವರು ಹಣವನ್ನಂತೂ ಯಾರಿಂದಲೂ ತೆಗೆದುಕೊಳ್ಳಲಿಲ್ಲ. ಜನರಿಂದ ಯಾವುದೇ ಕೀರ್ತಿ ಪ್ರತಿಷ್ಠೆ. ಮಾನ ಮರ್ಯಾದೆಗಳನ್ನು ಬಯಸಲಿಲ್ಲ. ಹೀಗೆ ಸುಮಾರು ೪೪ ವರ್ಷಗಳ ಕಾಲ ನಿರಂತರ ಮಾನವ ಮಾತ್ರರಿಗೆಲ್ಲಾ ಅಧ್ಯಾತ್ಮ ತತ್ತ್ವಗಳನ್ನು ಬೋಧಿಸಿದರು. ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ಆತ್ಮನಿಷ್ಠರಿದ್ದದ್ದರಿಂದ ಅವರ ಪಾದದಡಿಯಲ್ಲಿ ಅಣಿಮಾದಿ ಸಿದ್ಧಿಗಳು ಉರುಳಾಡುತ್ತಿದ್ದವು. ಅವರ ಪ್ರವಚನಗಳ ಶ್ರವಣದಿಂದ ಶಾಂತಿ ಪಡೆದವರು, ಅವರ ದರ್ಶನ, ಸ್ಪರ್ಶನ, ಆಶೀರ್ವಾದದಿಂದ ರೋಗಗಳಿಂದ ಮುಕ್ತರಾದವರು ಮತ್ತು ಅವರ ಸನ್ನಿಧಿ ಮಾತ್ರದಿಂದ ರಾಕ್ಷಸ, ಪಿಶಾಚಿಗಳ ಭಯಂಕರ ಪೀಡೆಯಿಂದ ಮುಕ್ತರಾದವರು ಅಸಂಖ್ಯರು.

ಪೂಜ್ಯರು 1983 ಡಿಸೆಂಬರ 19 ರಂದು ಲೌಕಿಕ ದೇಹವನ್ನು ತ್ಯಾಗ ಮಾಡಿ ಭಾವರಹಿತ ಪರಮಾತ್ಮರಾದರು.

**ಪ್ರೊ. ಸುರೇಂದ್ರ ಎಸ್. ಕುರಬರ**
ಪೂಜ್ಯ ಶ್ರೀ ಆತ್ಮಾನಂದ ಆಶ್ರಮ
ಸಾ. ಹಂಗರಕಿ, ಪೋ. ಗರಗ, ತಾ.ಜಿ. ಧಾರವಾಡ



ದಿ. ಶ್ರೀಮಂತ ಶ್ರೀ ರುದ್ರಪ್ಪ ಕರಬಸಪ್ಪ ದೇಸಾಯಿ



ದಿ. ಶ್ರೀಮತಿ ಗಂಗಮ್ಮನವರು ರುದ್ರಪ್ಪ ದೇಸಾಯಿ

ಸಾ. ಹಂಗರಕಿ (ತಾ. ಮತ್ತು ಜಿ. ಧಾರವಾಡ)

ಇವರ ಸ್ಮರಣಾರ್ಥ ಈ ಗ್ರಂಥವು ಪ್ರಕಟಿಸಲ್ಪಟ್ಟಿದೆ

# ಗ್ರಂಥ ಪೋಷಕರ ಪರಿಚಯ

ಶ್ರೀಮಂತ ಶ್ರೀ ಸಂಪತ್ಕುಮಾರ ರುದ್ರಪ್ಪ ದೇಸಾಯಿ ಸಾ. ಹಂಗರಕಿ, ತಾ. ಮತ್ತು ಜಿ. ಧಾರವಾಡ ಇವರು, ಈ ಗ್ರಂಥದ ಪೋಷಕರು. ಇವರು ಸುಪ್ರಸಿದ್ಧ ಹಂಗರಕಿ ದೇಸಾಯಿ ಮನೆತನದವರು. ಈ ಮನೆತನದ ಶ್ರೀಮಂತ ಶ್ರೀ ಅಯ್ಯಪ್ಪ ದೇಸಾಯಿ ಇವರು ಗರಗದ ಶ್ರೀ ಮಡಿವಾಳೇಶ್ವರ ಸ್ವಾಮಿಗಳಿಗೆ ಆಶ್ರಯವನ್ನು ಕೊಟ್ಟವರು. ಮಹಾತ್ಮರಿಗೆ, ತಪಸ್ವಿಗಳಿಗೆ ಆಶ್ರಯ ಕೊಡುವದು ಈ ಮನೆತನದ ಸಂಪ್ರದಾಯ. ಇದೇ ಸಂಪ್ರದಾಯವು ಈ ಮನೆತನದಲ್ಲಿ ಮುಂದುವರೆದದ್ದನ್ನು ನಾವು ಕಾಣುತ್ತೇವೆ. ಶ್ರೀಮಂತ ಶ್ರೀ ಬಸವರಾಜ ದೇಸಾಯಿಯವರು ೧೯೬೬ರಲ್ಲಿ ಪೂಜ್ಯ ಶ್ರೀ ಗುರುದೇವ ಆತ್ಮಾನಂದರಿಗೆ ಆಶ್ರಯವಿತ್ತು, ತಮ್ಮ ಮಾವಿನ ತೋಟದಲ್ಲಿ ಆಶ್ರಮವನ್ನು ಕಟ್ಟಿಸಿದರು. ತದನಂತರ ಅವರ ಚಿರಂಜೀವಿಯವರಾದ ಶ್ರೀಮಂತ ಶ್ರೀ ಎ.ಬಿ. ದೇಸಾಯಿಯವರು ಆಶ್ರಮವನ್ನು ವಿಸ್ತೀರ್ಣಗೊಳಿಸಿದರು, ಅಲ್ಲದೆ ಕಾಮದಹನ ಗ್ರಂಥದ ಆಶ್ರಯದಾತರಾದರು. ಶ್ರೀಮಂತ ಶ್ರೀ ಸಂಪತ್ಕುಮಾರ ದೇಸಾಯಿಯವರ ಅಣ್ಣಂದಿರಾದ ಶ್ರೀಮಂತ ಶ್ರೀ ಫಾಲಾಕ್ಷ ದೇಸಾಯಿಯವರು ತಮ್ಮ ಧರ್ಮಪತ್ನಿಯವರಾದ ಉಮಾದೇವಿಯವರ ಪ್ರೇರಣೆಯಂತೆ ಈಗಿನ ಮರಡಿಯ ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಆಶ್ರಮದ ಆವರಣದಲ್ಲಿ ಸದ್ಭಕ್ತರ ಅನುಕೂಲಕ್ಕಾಗಿ ಒಂದು ಬಾವಿಯನ್ನು ಕಡಿಸಿ, ಕಟ್ಟಿಸಿದರು.

ಶ್ರೀಮಂತ ಶ್ರೀ ಸಂಪತ್ಕುಮಾರ ರುದ್ರಪ್ಪ ದೇಸಾಯಿಯವರು ಭಾರತೀಯ ನೌಕಾಪಡೆಯಲ್ಲಿ ಕಮಾಂಡರರಾಗಿ ಸೇವೆಯನ್ನು ಸಲ್ಲಿಸಿದವರು. ಈಗ ಅವರು ಆ ಸೇವೆಯಿಂದ ನಿವೃತ್ತಿಯನ್ನು ಹೊಂದಿ ತಮ್ಮ ಸ್ವರೂಪದ ಅಭ್ಯಾಸದಲ್ಲಿಯೇ ಕಾಲಕಳೆಯುತ್ತಿದ್ದಾರೆ. ಅವರು ಅತ್ಯಂತ ವಿನಯಶೀಲರು, ಆರ್ಜವ ವೃತ್ತಿಯವರು ಮತ್ತು ನಿರಭಿಮಾನಿಗಳಿದ್ದು, ಎಲ್ಲ ಜೀವಿಗಳನ್ನು ತನ್ನಂತೆ ಎಂದು ತಿಳಿದುಕೊಂಡು ಪರಹಿತ ಕಾರ್ಯಗಳಲ್ಲಿ ತೊಡಗಿದ್ದಾರೆ. ಅವರು ಈ ಹಿಂದೆ ಕಾಮದಹನ, ನಿಜಸುಖ ಮಾರ್ಗ ಪ್ರದೀಪ, ಸ್ವರೂಪ ಮಾರ್ಗದರ್ಶಕ, ಪುನರ್ಜನ್ಮ, ಪೂಜ್ಯಶ್ರೀ ಸದ್ಗುರು ಆತ್ಮಾನಂದ ಸ್ವಾಮಿಗಳ ಪ್ರವಚನ ಸಂಗ್ರಹ ಮುಂತಾದ ಗ್ರಂಥಗಳ ಪ್ರಕಟಣೆಗಳಿಗೆ ಆಶ್ರಯದಾತರಾದವರು. ಈಗ ಮತ್ತೆ ಅವರು 'ಪೂಜ್ಯಶ್ರೀ ಆತ್ಮಾನಂದ ಸ್ವಾಮಿಗಳ ಇಂಗ್ಲೀಷ ಬಿಡಿ ಟಿಪ್ಪಣಿಗಳ ಕನ್ನಡ ಅನುವಾದದ ಗ್ರಂಥಗಳು', ಈ ಪುಸ್ತಕದ ಪೋಷಕರಾಗಿದ್ದಾರೆ.

ಕೆಡುವ ಶರೀರದ ಸಫಲತೆ ಯಾವದು ಪರಹಿತ. ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ, ಕೊಟ್ಟಿದ್ದು ಕೆಟ್ಟಿತೆನಬೇಡ, ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ ಎಂಬ

ಉಕ್ತಿಯಂತೆ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. A king must be a philosopher or the philosopher must be a king. ಎಂಬ ಪ್ಲೇಟೊ ಮಹಾತ್ಮರ ಉಕ್ತಿಯಂತೆ ರಾಜರ, ಶ್ರೀಮಂತರ, ಸಜ್ಜನರ, ನೀತಿ- ನಿಷ್ಠರ ಆಶ್ರಯವಿದ್ದರೆ ಸಮಾಜದಲ್ಲಿರುವ ಜೀವಿಗಳ ವ್ಯವಹಾರವು ಸುಗಮವಾಗಿ ಸಾಗಲು ಅನುಕೂಲವಾಗುವದು, ವಿಶ್ವದಲ್ಲಿ ಶಾಂತಿ ಸಮಾಧಾನಗಳು ನೆಲೆಸುವವು. ಈ ಗ್ರಂಥವು ಶ್ರೀಮಂತ ಶ್ರೀ ಸಂಪತ್ಕುಮಾರ ರುದ್ರಪ್ಪ ದೇಸಾಯಿಯವರ ತಂದೆ ತಾಯಿಯವರಾದ ದಿ. ಶ್ರೀಮಂತ ಶ್ರೀ ರುದ್ರಪ್ಪ ಕರಬಸಪ್ಪ ದೇಸಾಯಿ ಮತ್ತು ಶ್ರೀಮತಿ ಗಂಗಮ್ಮನವರು ರುದ್ರಪ್ಪ ದೇಸಾಯಿ ಇವರ ಸ್ಮರಣಾರ್ಥವಾಗಿ ಪ್ರಕಟಿಸಲ್ಪಟ್ಟಿದೆ. ದಿ. ಶ್ರೀಮಂತ ಶ್ರೀ ರುದ್ರಪ್ಪ ದೇಸಾಯಿಯವರು ಕೊಡುಗೈ ದೊರೆಗಳಾಗಿದ್ದರು. ಹಂಗರಕಿ ದೇಸಾಯಿ ಮನೆತನದವರಿಂದ ಅನೇಕ ಸತ್ಕಾರ್ಯಗಳು ಜರುಗಿವೆ. ಇನ್ನು ಮುಂದೆ ಇವರಿಂದ ನಿರಂತರವಾಗಿ ಅನ್ನ ದಾಸೋಹ, ಜ್ಞಾನ ದಾಸೋಹ ಮುಂತಾದ ಪರಹಿತ ಕಾರ್ಯಗಳು ಜರುಗಲೆಂದು ನಾನು ಉತ್ಕಟವಾಗಿ ಭಾವಿಸುತ್ತೇನೆ. ಪೂಜ್ಯಶ್ರೀ ಗುರುದೇವ ಆತ್ಮಾನಂದರು, ಅನ್ನದಾತಾ ಸುಖೀಭವ, ಜ್ಞಾನದಾತಾ ಸುಖೀಭವ, ಎಂಬಂತೆ ಅವರಿಗೆ ಆಯುರಾರೋಗ್ಯ, ಭಾಗ್ಯಗಳನ್ನು ದಯಪಾಲಿಸಲೆಂದು ಕೋರುತ್ತೇನೆ.


ಪ್ರೊ. ಸುರೇಂದ್ರ ಎಸ್. ಕುರಬರ

ಪೂಜ್ಯ ಶ್ರೀ ಆತ್ಮಾನಂದ ಆಶ್ರಮ

ಸಾ. ಹಂಗರಕಿ, ಪೋ. ಗರಗ

ತಾ.ಜಿ. ಧಾರವಾಡ




# ಆತ್ಮ ಸಾಕ್ಷಾತ್ಕಾರ

ಮಾನವನಿಗೆ ಸುಖದ ಬಯಕೆ ಸ್ವಾಭಾವಿಕ ಇದೆ. (ಈ ಸುಖದ ಬಯಕೆ ಮಾನವನೊಳಗೇ ಇದೆ.) ಮಾನವನಿಗೆ ಸುಖವನ್ನು ಬೇಡು ಎಂದು ಯಾರೂ ಕಲಿಸಿಲ್ಲ. ಅಂತರ್ಬಾಹ್ಯ ಭಾವದುದಯಕ್ಕಿಂತ ಮೊದಲೇ, ಸುಖದ ಬಯಕೆ ಉದಯವಾಗುವದಕ್ಕಿಂತ ಮೊದಲೇ ಮಾನವನಿಗೆ ಸುಖದ ಗುರುತು ಇದೆ. ವ್ಯಾವಹಾರಿಕವಾಗಿ ಸಚ್ಚಿದಾನಂದಾದ್ವಯ ಆಧಾರದಿಂದಲೇ ಮಾನವನೊಳಗೊಂಡು ಎಲ್ಲ ಜೀವಿಗಳು ಉದಯವಾಗಿವೆ. ಆದರೆ ನಿಜವಾಗಿ ಸಚ್ಚಿದಾನಂದದಲ್ಲಿ ಏನೂ ಉದಯವಾಗುವದೂ ಇಲ್ಲ, ಅಡಗುವದೂ ಇಲ್ಲ. ಮಾನವನು ತನ್ನ ನಿಜಸ್ವರೂಪವನ್ನು ಮರೆತಿದ್ದಾನೆ, ಆದರೆ ಕಳೆದುಕೊಂಡಿಲ್ಲ. ಅವನು ತನ್ನ ನಿಜಸ್ವರೂಪವನ್ನು ಪ್ರಥಮಾನುಭೂತಿಯ ಮೂಲಕ ನೆನಪು ಮಾಡಿಕೊಳ್ಳಲು ಸಾಧ್ಯವಿದೆ.

ಮಾನವನಿಗೆ ಸುಖದ ತಿಳುವಳಿಕೆ ಇದೆ. ಈ ಸುಖದ ತಿಳುವಳಿಕೆಯು ಸ್ವಾಭಾವಿಕವಾಗಿಯೇ (ಮಾನವನೊಳಗೇ) ಇದೆ. ಇರುವು, ಅರುವು, ಆನಂದ ಎಂದರೆ ಒಂದೇ. ಅವು ಮಾನವನೊಳಗೇ ಇವೆ. ಯಾವದೇ ಬಾಹ್ಯ ಸಾಧನದಿಂದ ಮಾನವನು ಅವುಗಳನ್ನು ದೊರಕಿಸಿಲ್ಲ. ಇದೆಲ್ಲವನ್ನು ಮಾನವನು ಹೇಗೋ ಮರೆತಿದ್ದಾನೆ. ತನ್ನ ನಿಜಸ್ವರೂಪದಲ್ಲಿ ಈ ಮರವೆಯು ಇಲ್ಲೆಂಬುದನ್ನು ಮಾನವನ ಪ್ರಥಮಾನುಭೂತಿಯು ಸ್ಪಷ್ಟೀಕರಿಸುತ್ತದೆ. ಮಾನವನು ಪ್ರಥಮಾನುಭೂತಿಯ ತಿಳಿವಳಿಕೆಯನ್ನು ಅನುಭವದಿಂದಲೇ ಹೊಂದಿದ್ದಾನೆ. ಪ್ರಥಮಾನುಭೂತಿಯ ನೆನಪು ಯಾರಿಂದಾದರೂ ಕಲಿತುಕೊಂಡು ಅಥವಾ ಕೇಳಿಕೊಂಡದ್ದರಿಂದ ಬಂದದ್ದಲ್ಲ. ಆನಂದದ ನೆನಪು ತನ್ನ ಪ್ರಥಮಾನುಭೂತಿಯಿಂದಲೇ ಬಂದಿದೆ. ಮಾನವನು ಗಾಢನಿದ್ರೆಯಿಂದ ಎಚ್ಚೆತ್ತು ವ್ಯವಹಾರಿಕ ಜಾಗ್ರಕ್ಕೆ ಬಂದಾಗ ತಾನು ನಿದ್ರೆಯಲ್ಲಿ ಆನಂದದಿಂದ ಇದ್ದೆನು, ಮತ್ತು ತನಗೆ ಅಲ್ಲಿ ಮತ್ತೆ ಏನೂ ತಿಳಿಯಲಿಲ್ಲವೆಂಬುದನ್ನು ತನ್ನ ಗಾಢ ನಿದ್ರೆಯ ಸ್ಮೃತಿಜ್ಞಾನದಿಂದ ತಿಳಿಸುತ್ತಾನೆ. ಮಾನವನು ಇರುವು, ಅರಿವು, ಆನಂದವನ್ನು ತಿಳಿವಳಿಕೆಯಿಂದಲೇ ಅನುಭವಿಸಿದ್ದಾನೆ. ಅವನು ವ್ಯವಹಾರಿಕ ಜಾಗ್ರದಲ್ಲಿ ಆನಂದದ ಅನುಭವವನ್ನು ತಿಳಿವಳಿಕೆಯಿಂದಲೇ ವ್ಯಕ್ತಪಡಿಸುತ್ತಾನೆ. ಆದ್ದರಿಂದ ಮಾನವನು ತಿಳಿವಳಿಕೆಯಿಂದಲೇ ಆನಂದವನ್ನು ಅನುಭವಿಸಬೇಕೆಂದು ಬಯಸುತ್ತಾನೆ, ಅದರ ಬದಲಾಗಿ ನಿದ್ರೆ ಮತ್ತು ಗಾಂಜಾ, ಅಫೀಮು, ಎಲ್.ಎಸ್.ಡಿ. ಮುಂತಾದ ಅಮಲು ಪದಾರ್ಥಗಳ ಸೇವನೆಯಿಂದುಂಟಾದ ಅಜ್ಞಾನದ ಮೂಲಕ ಆನಂದವನ್ನು ಅನುಭವಿಸಬೇಕೆಂದು ಬಯಸುವದಿಲ್ಲ.

ಮಾನವನು ತನ್ನ ನಿಜಸ್ವರೂಪವನ್ನು ಮರೆತು ಅನೇಕ ರೀತಿಯಿಂದ ವಿಷಯೇಂದ್ರಿಯ ಸಂಪರ್ಕಭೋಗ ಮತ್ತು ಅಮಲು ಪದಾರ್ಥಗಳ ಸೇವನೆಯಿಂದ

ಸುಖಿಯಾಗಲು ಪ್ರಯತ್ನಿಸುತ್ತಾನೆ. ಇದಕ್ಕೆ ಬದಲಾಗಿ ಅತಿ ಹೆಚ್ಚಿನ ದುಃಖಕ್ಕೀಡಾಗುತ್ತಾನೆ. ಈ ಕ್ರಮದಿಂದ ತಾನು ಸುಖವನ್ನು ಹೊಂದದೆ ಅತಿ ದುಃಖಕ್ಕೀಡಾದೆನೆಂಬುದು ತಿಳಿಯುವದೂ ಅತಿ ವಿರಳ. ಆನಂದವು ಇಹ ಪರದ ಯಾವದೇ ಬಾಹ್ಯ ಉಪಾಧಿಗಳನ್ನು ಅವಲಂಬಿಸಿಲ್ಲ ಎಂಬ ತನ್ನ ಪ್ರಥಮಾನುಭೂತಿಯನ್ನು ಮಾನವನು ಮರೆತಿದ್ದಾನೆ.

ಸಾಮಾನ್ಯವಾಗಿ ಬಾಹ್ಯ ವಿಶ್ವದಿಂದ ಸುಖವನ್ನು ಹೊಂದಲು ಸಾಧ್ಯವಿದೆ ಎಂದು ಮಾನವನಿಗೆ ಅನಿಸುತ್ತದೆ. ವಿಶ್ವವು ಸೃಷ್ಟಿಯು, ಸ್ವತಃ ಸಿದ್ಧ ಇರುವಿಕೆಯಲ್ಲ ಎಂದು ಮಾನವನು ಒಪ್ಪಿಕೊಳ್ಳುತ್ತಾನೆ. ಅರಿವು ಅರಿವನ್ನು ಸೃಷ್ಟಿಸಲಾರದು, ಅರಿವನ್ನು ಬಿಟ್ಟು ಉಳಿದದ್ದೇನನ್ನಾದರೂ ಸೃಷ್ಟಿಸಬಹುದು. ದೇವರು ವಿಶ್ವವನ್ನು ಸೃಷ್ಟಿಸಿದನೆಂದು ಮಾನವನು ಹೇಳುತ್ತಾನೆ. ಆದ್ದರಿಂದ ಮಾನವನು ದೇವರಿಂದ ಸೃಷ್ಟಿಸಲ್ಪಟ್ಟ ವಿಶ್ವಕ್ಕಿಂತ ಮೊದಲು, ಅಷ್ಟೇ ಏಕೆ ದೇವರಿಗಿಂತ ಮೊದಲೇ ಇರಬೇಕಾಗುತ್ತದೆ. ಉದಾಹರಣೆ : ಪಾತ್ರೆ ತಯಾರು ಮಾಡುವವನು ಪಾತ್ರೆ ತಯಾರಿಸುವದಕ್ಕಿಂತ ಮೊದಲೇ ಇರುತ್ತಾನೆ. ಸೃಷ್ಟಿಸಲ್ಪಟ್ಟ ಪದಾರ್ಥವು ಜಡವೂ, ನಾಶವಂತವೂ, ದುಃಖಕರವೂ ಇರುತ್ತದೆ.

ಯಾರೇ ವಿಶ್ವವನ್ನು ಸೃಷ್ಟಿಸಿದರೂ, ಸೃಷ್ಟಿಕರ್ತನನ್ನು, ಸೃಷ್ಟಿಯನ್ನು ಮತ್ತು ಸೃಷ್ಟಿಯ ಘಟಕಗಳನ್ನು ತಿಳಿಯುವ ಸಾಕ್ಷೀ ಅರಿವು ಇವೆಲ್ಲವುಗಳಿಗಿಂತ ಮೊದಲೇ ಇರಬೇಕಾಗುತ್ತದೆ. ಸೃಷ್ಟಿಯಾಗಿದೆಯೆಂದು ಗ್ರಹಿಸಿದರೂ ಸೃಷ್ಟಿಸಿದವನು ಅರಿವಿನ, ಇರುವಿನ ಸ್ವರೂಪದವನಿರಬೇಕಾಗುತ್ತದೆ. ತನ್ನ ನಿಜವನ್ನು ತಾನು ಸೃಷ್ಟಿಸಲಾರನು. ಏನನ್ನಾದರೂ ಸೃಷ್ಟಿಸುವನೆಂದರೆ, ತನ್ನ ಸಚ್ಚಿದಾನಂದ ಸ್ವರೂಪವನ್ನು ಬಿಟ್ಟು ಉಳಿದದ್ದನ್ನೇ ಸೃಷ್ಟಿಸಬೇಕು. ಉದಾಹರಣೆಗೆ – ಪಾತ್ರೆಗಳ ತಯಾರಿಕನು ಅರಿವಿನ ಸ್ವರೂಪದವನಿದ್ದಾನೆ. ಅವನು ಜಡ ಪಾತ್ರೆಗಳನ್ನು ತಯಾರಿಸುತ್ತಾನೆ. ಜಡವು ಚೈತನ್ಯವನ್ನು ಸೃಷ್ಟಿಸಲಾರದು. ಪಾತ್ರೆಗಳ ತಯಾರಿಕನು ತನ್ನನ್ನು ತಾನೇ ಸೃಷ್ಟಿಸಲಾರನು. ನಾವು ಜಡ ವಸ್ತುಗಳನ್ನು ನಮ್ಮ ಎದುರಿಟ್ಟುಕೊಂಡು ಅವುಗಳನ್ನು ವಿಭಜಿಸಿ, ನಿರೀಕ್ಷಿಸಿ ಮತ್ತು ಅವುಗಳ ಘಟಕಗಳನ್ನು ಕಂಡು ಹಿಡಿದು ಮತ್ತು ಅವುಗಳನ್ನು ಆಯಾ ಪ್ರಮಾಣದಲ್ಲಿ ಮಿಶ್ರಮಾಡಿ ಪುನಃ ಆ ಜಡ ವಸ್ತುಗಳನ್ನು ತಯಾರಿಸುವೆವು. ಇದರಂತೆ ಅರುವು ಅರುವನ್ನು ಎದುರಿಟ್ಟುಕೊಂಡು ಅದನ್ನು ವಿಭಜಿಸಿ, ನಿರೀಕ್ಷಿಸಿ, ಅದರ ಘಟಕಗಳನ್ನು ಕಂಡು ಹಿಡಿದು ಮತ್ತು ಅವುಗಳನ್ನು ಆಯಾ ಪ್ರಮಾಣದಲ್ಲಿ ಮಿಶ್ರಮಾಡಿ, ಪುನಃ ಅರಿವನ್ನು ತಯಾರಿಸಲು ಬರುವದಿಲ್ಲ. ಅರಿವು ಅರುಹಿಸಿಕೊಳ್ಳಲಾರದು. ಅರಿವಿಗನ್ಯವಾಗಿ ಅರಿವು ಇಲ್ಲ. ಸಚ್ಚಿದಾನಂದವು ತನಗೆ ತಾನೇ ದೃಶ್ಯವಾಗಲಾರದು. ಸಚ್ಚಿದಾನಂದವು ಇಂದ್ರಿಯಗಮ್ಯವಲ್ಲ. ಸಚ್ಚಿದಾನಂದವನ್ನು ಯಾರೂ ಸೃಷ್ಟಿಸಿಲ್ಲ. ವಿಶ್ವವು ಜಡವಿದೆ. ಜಡವು ಆನಂದವನ್ನು ಕೊಡಲಾರದು. ಕಾರ್ಖಾನೆಯಲ್ಲಿ ವಸ್ತುಗಳನ್ನು ತಯಾರಿಸಿದಂತೆ , ಜಡವು ಚೈತನ್ಯವನ್ನು ತಯಾರಿಸಲಾರದು. ಅರಿವು



ಅವಿಕಾರಿ, ಅವಿನಾಶಿ. ಪ್ರಥಮಾನುಭೂತಿಯಲ್ಲಿ ಯಾವ ಶಾಸ್ತ್ರವೂ ಇಲ್ಲ. ಮಾನವನು ಪ್ರಥಮಾನುಭೂತಿಯ ಆನಂದದ ಆಧಾರದ ಮೇಲೆಯೇ ಸುಖವನ್ನು ಬೇಡುತ್ತಿದ್ದಾನೆ. ಯಾವದೇ ಬಾಹ್ಯಾಂತರ ಸಾಧನಗಳ ಆಧಾರದ ಮೇಲೆ ಸುಖವನ್ನು ಬೇಡುತ್ತಿಲ್ಲ. ಆದ್ದರಿಂದ ಮಾನವನು ಶಾಶ್ವತ ಸುಖ ಹೊಂದಲು ತನ್ನ ಪ್ರಥಮಾನುಭೂತಿಗೆ ಶರಣು ಹೋಗಬೇಕು. ಪ್ರಥಮಾನುಭೂತಿಯಲ್ಲಿ ಯಾವುದು ಇರಲಿಲ್ಲವೋ ಅದನ್ನು ಸುಖವನ್ನು ಪಡೆಯಲು ಮಾರ್ಗದರ್ಶನ ಅಥವಾ ಸಹಾಯ ಅಥವಾ ಪ್ರಮಾಣವೆಂದು ಇಟ್ಟುಕೊಳ್ಳಬಾರದು. ಪ್ರಥಮಾನುಭೂತಿಯಲ್ಲಿ ಶಬ್ದ, ಸ್ಪರ್ಶ,ರೂಪ, ರಸ, ಗಂಧ ಅಥವಾ ಮತ್ತೇನೂ ಇರದೆ ಬರೇ ಮಹಾಮೌನವೇ ಇತ್ತು. ಪ್ರಥಮಾನುಭೂತಿಯಲ್ಲಿ ಯಾವದು ಇರಲಿಲ್ಲವೋ ಅದು ಅನುಭವಕ್ಕೇನೂ ಉಪಯೋಗವಿಲ್ಲ. ಪ್ರಥಮಾನುಭೂತಿಯಲ್ಲಿ ಅನ್ಯ ಪ್ರಮಾಣ ವಿಲ್ಲ. ಆದ್ದರಿಂದ ಸೃಷ್ಟಿಸಲ್ಪಟ್ಟ ವಿಶ್ವದಿಂದ ಸುಖಹೊಂದುವ ಮಾನವನ ವಿಚಾರವು ಮಹಾಪರಾಧವಾಗಿದೆ.

ವಿಶ್ವದಲ್ಲಿ ಮತ್ತು ವಿಶ್ವದಿಂದ ಸುಖಹೊಂದಬೇಕೆಂಬ ಘೋರಪಾತಕವನ್ನು ಮಾಡಿ ಮಾನವನು ಅತಿ ಘೋರ ದುಃಖದಿಂದ ಬಳಲುತ್ತಿದ್ದಾನೆ. ಮಾನವನು ಸುಖಹೊಂದಲು ಬಾಹ್ಯಾಂತರ ವಿಶ್ವವಿಷಯದ ಆಸಕ್ತಿಯನ್ನು ಬಿಡಲೇಬೇಕು. ಆಗ ಮಾತ್ರ ಮಾನವನು ಸ್ವಯಂಸಿದ್ಧವಾದ ತನ್ನ ನಿಜಸ್ವರೂಪದಲ್ಲಿ ಶಾಶ್ವತ ಸುಖವನ್ನು ಹೊಂದಲು ಸಾಧ್ಯವಾಗುವದು. ಮಾನವನು ಸುಖಿಯಾಗಬೇಕಾದರೆ ವಿಶ್ವವಿಷಯವು ಸುಖದಾಯಕವಲ್ಲ, ಅದೆಲ್ಲವೂ ಚರಟವೆಂಬುದನ್ನು ತಿಳಿವಳಿಕೆಯಿಂದ ನಿಶ್ಚಯಿಸಿಕೊಂಡು ತನ್ನ ನಿಜಸ್ವರೂಪಕ್ಕೆ ಹಿಂತಿರುಗಬೇಕು. ವಿಶ್ವಕ್ಕೆ ಇರುವಿಕೆ ಇಲ್ಲ. ಮಾನವನು ತನ್ನ ನಿಜವನ್ನು ತಾನೇ ತಿಳಿದುಕೊಳ್ಳಬೇಕು. ಅಂದರೆ ತನ್ನ ನಿಜವೇ ಇರಬೇಕು. ಏಕೆಂದರೆ ತನ್ನ ನಿಜವನ್ನು ತಿಳಿಯುವದೆಂದರೆ ತನ್ನ ನಿಜವೇ ಇರುವದು. ಆದರೆ ಬಾಹ್ಯಾಂತರದ್ದು ಇನ್ನೇನಾದರೂ ಆಗಿ ಇರುವದಲ್ಲ. ಮನಸ್ಸಿನ ನಿಶ್ಚಲಸ್ಥಿತಿಯಲ್ಲಿ ಆನಂದಾನುಭವವಾಗುವದೆಂಬುದು ಮಾನವನಿಗೆ ಸುನಿಶ್ಚಿತವಿದೆ. ಮನಸ್ಸಿನ ನಿಶ್ಚಲಸ್ಥಿತಿಯೆಂದರೆ ಅರಿವು ಸಹಿತ, ಕಲ್ಪನಾರಹಿತ್ಯ ಪ್ರಥಮಾನುಭೂತಿಯ ಮಹಾಮೌನದ ಸ್ಥಿತಿಯು. ಶಾಶ್ವತಸುಖವನ್ನು ಹೊಂದಲು ಪ್ರಥಮಾನುಭೂತಿಯ ಮಹಾಮೌನಸ್ಥಿತಿಯನ್ನು ಪಡೆಯುವದು ಅತ್ಯವಶ್ಯವು. ಅಜ್ಞಾನದ ಉಪಾಧಿಯಿಂದ ನಮಗೆ ಅಂಟಿಕೊಂಡಿದ್ದೆಲ್ಲವನ್ನು ಕಳಚಿ ಒಗೆಯಬೇಕು. ವ್ಯವಹಾರಿಕ ಜಾಗ್ರದಲ್ಲಿದ್ದಾಗ ಅಜ್ಞಾನ ಮತ್ತು ಅಜ್ಞಾನದ ಕಾರ್ಯಗಳು ಮಾನವನನ್ನು ಬಾಧೆ ಪಡಿಸುತ್ತವೆ. ಆದರೆ ಮಾನವನ ನಿಜಸ್ವರೂಪಕ್ಕೆ ಯಾವ ಬಾಧೆಯೂ ಇಲ್ಲ. ಆಕಾಶವನ್ನು ನೋಡಲಿಕ್ಕೆ ಪರ್ವತಶಿಖರವನ್ನೇರುವ ಅವಶ್ಯಕತೆ ಇಲ್ಲ. ಯಾವದೇ ಸ್ಥಳದಲ್ಲಿದ್ದುಕೊಂಡು ಕಣ್ಣು ಪಿಳುಕಿಸದೆ ನಿಶ್ಚಲ ಮನಸ್ಸಿನಿಂದ ಆಕಾಶವನ್ನು ನೋಡಲು ಸಾಧ್ಯವಿದೆ. ಇದರಂತೆಯೇ

ನಿಶ್ಚಲಮನಸ್ಸಿನಿಂದ ಆನಂದವನ್ನು ಅನುಭವಿಸುವದು ಸಾಧ್ಯವಿದೆ. ಮಹಾಮೌನವನ್ನು ಸಾಧಿಸಲು ಮಾನವನು ಏನು ಮಾಡಬೇಕು ? ವಿಷಯಗಳನ್ನು ಹಿಂಬಾಲಿಸುವಂತೆ ಪ್ರವೃತ್ತಿಸುವ ವಿಷಯವಾಸನೆಗಳನ್ನು ಮಾನವನು ತೆಗೆದುಹಾಕಬೇಕು. ಮಹಾ ಮೌನವೇ ಮುಖ್ಯ ಸಾಧನ. ಸುಖವನ್ನು ಅನುಭವಿಸಲು ಮನಸ್ಸು ನಿಶ್ಚಲವಾಗಬೇಕು. ಉದಾಹರಣೆಗೆ: ಆಕಾಶವನ್ನು ನೋಡಬೇಕಾದರೆ ಕಣ್ಣು ಮಿಲುಕಿಸಬಾರದು. ಕಣ್ಣು ಮಿಲುಕಿಸಿದರೆ ಉಳಿದ ವಸ್ತುಗಳು ಗೋಚರವಾಗುತ್ತವೆ.

ಪ್ರತಿಯೊಬ್ಬರಿಗೂ ಮೌನದ ಗುರುತಿದೆ. ಮೌನವನ್ನು ತಿಳಿಯಪಡಿಸಲು ವಿದ್ವತ್ಪೂರಿತ ಭಾಷಣಗಳನ್ನೇನೂ ಮಾಡಬೇಕಾಗಿಲ್ಲ. ಮಾನವನಿಗೆ ಮೌನದ ಗುರುತು ಅನುಭವದಿಂದಲೇ ಇದೆ. ಎರಡು ಕಲ್ಪನೆಗಳ ನಡುವಿನ ಕಲ್ಪನಾರಾಹಿತ್ಯ ಸ್ಥಿತಿ (ಆನಂದವು) ಎಲ್ಲರಿಗೂ ಗುರುತಿದೆ. ಮೌನವೆಂದರೆ ಏನನ್ನಾದರೂ ಕಲಿಯುವದೂ ಅಲ್ಲ ಅಥವಾ ಮರೆಯುವದೂ ಅಲ್ಲ. ಮೌನದಿಂದಿರಲು ವ್ಯವಹಾರಿಕ ಜಾಗ್ರದಲ್ಲಿ ಅಜ್ಞಾನಿಗಳು ಸುಖವನ್ನು ಹೊಂದಲು ಸಾವಿರಾರು ವಿಷಯಗಳನ್ನು ಕಲಿಯುವಂತೆ ಹೊಸದಾಗಿ ಏನನ್ನೂ ಕಲಿಯಬೇಕಾಗಿಲ್ಲ ಅಥವಾ ನಿದ್ರೆಯಂತೆ ಸುಖ ಹೊಂದಲು ಏನನ್ನೂ ಮರೆಯಬೇಕಾಗಿಲ್ಲ. ಮೌನದಿಂದಿರುವದೆಂದರೆ ತನ್ನ ನಿಜಸ್ವರೂಪವೇ ಇರುವದು. ಆದರೆ ತನ್ನ ನಿಜವನ್ನು ಬಿಟ್ಟು ಮತ್ತೇನೂ ಆಗಬೇಕಾಗಿಲ್ಲ. ಮೌನವೇ ಸುಖವು. ಕಲಿತದ್ದನ್ನೆಲ್ಲ ತಿಳಿವಳಿಕೆಯಿಂದಲೇ ಕೈ ಬಿಡುವ ಅಭ್ಯಾಸವನ್ನು ಮಾಡಬೇಕು. ಆದರೆ ನಿದ್ರೆಯ ಹಾಗೆ ಕಲಿತದ್ದನ್ನೆಲ್ಲ ಮರವೆಯ ಮುಖಾಂತರ ಲಯಪಡಿಸುವದಲ್ಲ. ದಣಿವಿನಿಂದ ನಿದ್ರೆಯ ಮೌನವನ್ನು ಹೊಂದುವದೇ ಬೇರೆ, ಉದ್ದೇಶಪೂರ್ವಕವಾಗಿ ತಿಳಿವಳಿಕೆಯಿಂದ ಕಲಿತದ್ದನ್ನೆಲ್ಲ ಮರೆತು ಮಹಾಮೌನವನ್ನು ಹೊಂದುವದೇ ಬೇರೆ. ಯಾವಾಗಲೂ ಜೀವನು ಸಚ್ಚಿದಾನಂದನೇ ಇದ್ದಾನೆ. ತನ್ನ ನಿಜವನ್ನು ಆವರಿಸಿದಂತಿರುವ ಅಜ್ಞಾನವನ್ನು ತೆಗೆದುಹಾಕಿ ತನ್ನ ನಿಜದ ಬಗ್ಗೆ ಇರುವ ತಪ್ಪು ತಿಳುವಳಿಕೆಯನ್ನು ಕಳೆದುಕೊಳ್ಳಬೇಕು. ತನ್ನ ನಿಜವನ್ನು ತಿಳಿಯದ್ದರಿಂದ ಉಂಟಾದ ಅಜ್ಞಾನದ ಕಾರ್ಯಗಳಿಂದ ಬಾಧಿತನಾದಂತೆ ಅನಿಸುತ್ತದೆ.

ಶಾಶ್ವತ ಸುಖವನ್ನು ಹೊಂದಲು ಮಾನವನು ತನ್ನ ನಿಜಸ್ವರೂಪದ ಬಗ್ಗೆ ದೃಢವಾದ ತಿಳಿವಳಿಕೆಯನ್ನು ಹೊಂದಬೇಕಾಗುತ್ತದೆ. ಮಾನವನು ತನ್ನ ನಿಜಸ್ವರೂಪವನ್ನು ತಿಳಿದುಕೊಳ್ಳುವದಕ್ಕಾಗಿ ಪ್ರಯತ್ನ ಮಾಡಬೇಕು. ಮೊಟ್ಟಮೊದಲಿಗೆ ಇಹಲೋಕದ ಮತ್ತು ಪರಲೋಕದ ವಿಷಯವಸ್ತುಗಳ ಮತ್ತು ಉಪಾಧಿಗಳಿಂದ ಸುಖ ಹೊಂದಲು ವ್ಯವಹಾರಿಕ ಜಾಗ್ರದಲ್ಲಿ ಮಾಡುವ ಅನಂತ ಪ್ರಯತ್ನಗಳೆಲ್ಲವೂ ದುಃಖಮಯವೆಂಬ ದೃಢವಾದ ತಿಳಿವಳಿಕೆಯುಂಟಾಗಬೇಕು. ಅತ್ಯಂತಿಕವಾಗಿ (ವಿಕಾರರಹಿತವಾಗಿ, ನಿರುಪಾಧಿಕವಾಗಿ, ನಿರ್ದ್ವಂದ್ವವಾಗಿ ಪ್ರಯೋಜನಕಾರಿಯಾದದ್ದು) ಯಾವುದು ಪ್ರಯೋಜನಕರವು ಮತ್ತು



ನಿಷ್ಪ್ರಯೋಜನಕರವು ಎಂಬ ವಿವೇಕಶಕ್ತಿಯು ಅತ್ಯವಶ್ಯವಾಗಿ ಮಾನವನಲ್ಲಿ ಉದಯವಾಗಬೇಕು. ಇದರಿಂದ ಇಹಪರ ವಸ್ತು ಅಥವಾ ಸ್ಥಿತಿ ಅಥವಾ ಉಪಾಧಿಗಳ ಬಗ್ಗೆ ವೈರಾಗ್ಯವು ಉದಯವಾಗುವದು. ಆಗ ಮಾನವನಿಗೆ ಇವೆಲ್ಲವೂ ನಿಸ್ಸಾರವೆನಿಸುತ್ತವೆ.

ಸಂನ್ಯಾಸದಲ್ಲಿ ವೈರಾಗ್ಯವು ಅಂತಃಕರಣದಲ್ಲಿ ಉದಯವಾಗುತ್ತದೆ. ಯಾರು ಐಹಿಕ ಪ್ರಪಂಚದಲ್ಲಿ ಸುಖವು ಸಿಗುವದಿಲ್ಲವೆಂದು ಆದರಿಂದ ನಿವೃತ್ತಿಯನ್ನು ಹೊಂದುವರೋ ಅಥವಾ ತಮ್ಮ ನಿಜಸ್ವರೂಪಕ್ಕೆ ಹಿಂತಿರುಗುವರೋ ಅವರೇ ಸಂನ್ಯಾಸಿಗಳು. ಈ ರೀತಿಯಾಗಿ ನಿವೃತ್ತಿಹೊಂದದವನ ಅಂತಃಕರಣವೇ ಸಂನ್ಯಾಸ ಆಶ್ರಮವು. ಆದರೆ ಅರಣ್ಯದಲ್ಲಿ (ನಿರ್ಜನಪ್ರದೇಶದಲ್ಲಿ) ನಿರ್ಮಿಸಿದ ಕಟ್ಟಡ ಅಥವಾ ಗುಡಿಸಲು ಸಂನ್ಯಾಸ ಆಶ್ರಮವಲ್ಲ. ದೇಹವು ಹೇಗೆಯೇ ಇರಲಿ, ಎಲ್ಲಿಯೇ ಇರಲಿ, ಜೀವನ ಅಂತಃಕರಣದಲ್ಲಿಯ ವೈರಾಗ್ಯವೇ ಸಂನ್ಯಾಸವು. ಸಂನ್ಯಾಸವು ದೇಹದ ಯಾವದೇ ಬಾಹ್ಯ ಚಿಹ್ನೆಗಳನ್ನು (ದೇಹದ ಪೋಷಾಕು, ಬಣ್ಣ, ದೇಹವು ಇರುವ ಸ್ಥಳ) ಅವಲಂಬಿಸುವದಿಲ್ಲ. ಸಂನ್ಯಾಸವು ಬಾಹ್ಯ ಮತ್ತು ಆಂತರಿಕ ವಿಷಯಗಳ ಮೇಲಿನ ನಿರ್ಮೋಹವನ್ನೇ ಅವಲಂಬಿಸಿದೆ. ಜಾತಿ, ಮತ, ವರ್ಣಾದಿಗಳ ನಿರ್ಬಂಧವಿಲ್ಲದೆ ಯಾವನು ತನ್ನ ಅಂತಃಕರಣದಲ್ಲಿ ದೃಢವೈರಾಗ್ಯವನ್ನು ಹೊಂದಿರುವನೋ ಅವನೇ ಸಂನ್ಯಾಸಿಯು. ಇಂಥಹ ಸಂನ್ಯಾಸಿಯು ವೈವಾಹಿಕ ಜೀವನವನ್ನು ಸಾಗಿಸಬಹುದು ಅಥವಾ ಸಾಗಿಸಲಿಕ್ಕಿಲ್ಲ. ವೈವಾಹಿಕ ಜೀವನವನ್ನು ನಡೆಸುವ ವಿಷಯವೇ ಬೇರೆ ಇರುವದು.

ಅದರಂತೆ ಮಠವೆಂದರೆ ನಿರ್ಜನಪ್ರದೇಶದಲ್ಲಿರುವ ಕಟ್ಟಡವಲ್ಲ. ಮಠವು ಶಾಶ್ವತಸುಖದಲ್ಲಿ ನೆಲೆ ನಿಂತವನು ವಾಸಿಸುವ ಸ್ಥಳವು. ಮಠವು ವರ್ಗೀಯಿಸಲ್ಪಟ್ಟ ಗುಣಕ್ಕೆ ಉದಾಹರಣೆಯು. (ಶಾಶ್ವತಸುಖದಲ್ಲಿ ನೆಲೆನಿಂತ ವ್ಯಕ್ತಿಯಿಂದ ಅವನು ವಾಸಿಸುವ ಸ್ಥಳಕ್ಕೆ) ಯಾವದೇ ಬಾಹ್ಯ ಚಿಹ್ನೆಗಳಾಗಲಿ, ಅಥವಾ ಬಿರುದು ಬಾವಲಿಗಳಾಗಲಿ ಇಂಥಿಂಥಹ ವ್ಯಕ್ತಿಯು ಶಾಶ್ವತಸುಖವನ್ನು ಹೊಂದಿದ್ದಾನೆ ಎಂಬುದನ್ನು ತಿಳಿಸಲಾರವು. ತನ್ನ ಶಕ್ತ್ಯಾನುಸಾರ ಮಾನವನು ಅರಮನೆಯಲ್ಲಿರಬಹುದು ಅಥವಾ ಗುಡಿಸಲಿನಲ್ಲಿರಬುಹು. ಆನಂದವು ಯಾವದೇ ಬಾಹ್ಯ ಉಪಾಧಿಯನ್ನು ಅವಲಂಬಿಸಿಲ್ಲ. ಆನಂದವು ಯಾವದೇ ಸಂಯುಕ್ತ ಅಥವಾ ಮಿಶ್ರಣ ಪದಾರ್ಥವಲ್ಲ, ರಾಸಾಯನಿಕ ಪರಿಣಾಮವಲ್ಲ ಅಥವಾ ಭೌತಿಕ ಪದಾರ್ಥದ ಸ್ಥಿತಿಯಲ್ಲ. ಅದು ತ್ರಿಕಾಲಾಬಾಧಿತವಾದ ಇರುವಿಕೆಯು. ಆದ್ದರಿಂದ ಆನಂದವನ್ನು ಯಾವದೇ ಬಾಹ್ಯಸಾಧನದಿಂದ ತೋರಿಸಲು ಸಾಧ್ಯವಿಲ್ಲ. ಏಕೆಂದರೆ ಬಾಹ್ಯಸಾಧನಗಳೆಲ್ಲವೂ ಬರೇ ಭ್ರಾಂತಿಯ ಪ್ರದರ್ಶನವು. (ಆಟವು, ತೋರಿಕೆಯು) ಸೃಷ್ಟಿಯು (ವಿಶ್ವವು) ಸ್ವತಃ ಸಿದ್ಧವಾದ ಇರುವಿಕೆಯನ್ನು ತೋರಿಸಲಾರದು. ಯಾರೂ ಆನಂದವನ್ನು ಯಾವದೇ ಪ್ರಯೋಗಶಾಲೆಯಲ್ಲಿ ತಯಾರಿಸಲಾರರು.

ಪ್ರತಿಯೊಬ್ಬನು ತನ್ನ ಪರಿಶುದ್ಧ ಹೃದಯದಲ್ಲಿ ಶಾಶ್ವತ ಸುಖವನ್ನು ಹೊಂದುವ ಪ್ರಯೋಗವನ್ನು ಮಾಡಲು ಸಾಧ್ಯವಿದೆ. ವೈಯಕ್ತಿಕ ಲಾಭ ಅಥವಾ ಶಾಂತಿಯನ್ನು ಪಡೆಯಲು ತನ್ನ ಪರಿಶುದ್ಧ ಹೃದಯದಲ್ಲಿ ಮಾತ್ರ ಪ್ರಯೋಗದ ಯೋಗ್ಯ ಸಾಧನೆಯ ಉಪಕರಣಗಳು ಸಿಗುವವು. ಇಲ್ಲಿ ಸಾಧನವೆಂದರೆ ಅಂತಃಕರಣವು. (ವಿವೇಕ, ವೈರಾಗ್ಯ, ಸತತ ಅಭ್ಯಾಸದ ಮೂಲಕ ವಿಷಯೇಂದ್ರಿಯ ಸಂಪರ್ಕಭೋಗದ ಆಸಕ್ತಿರೂಪಿ ಅಸಹ್ಯ ಕಶ್ಮಲವನ್ನು ಕಳೆದುಕೊಂಡು ಅತಿ ಪರಿಶುದ್ಧವಾದ ಮನಸ್ಸು.) ಸಚ್ಚಿದಾನಂದವು ನಾಲ್ಕು ನಮೂನೆಯ ಕಾರ್ಯಗಳ ಪೈಕಿ ಯಾವದೂ ಅಲ್ಲ.

ಮನಸ್ಸೇ ಸುಖದಿಂದಿರಲು ಬಯಸುತ್ತದೆ. ಆದರೆ ಸಚ್ಚಿದಾನಂದಕ್ಕೆ ಸುಖವು ಬೇಕಾಗಿಲ್ಲ. ಏಕೆಂದರೆ ಅದು ಸಂಪೂರ್ಣ ಸುಖರೂಪವೇ ಇರುವದು. ಮನಸ್ಸು ಶಾಶ್ವತ ಶಾಂತಿಯ ಕಡೆಗೆ ಹೊರಳಬೇಕಾಗಿದೆ. ಯಾವಾಗ ಮನಸ್ಸು ವಿವೇಕವನ್ನು ಹೊಂದಿ ಪರಿಶುದ್ಧವಾಗುವದೋ ಆಗ ಅದು ವೈರಾಗ್ಯವನ್ನು ಹೊಂದಿ, ಆನಂದವನ್ನು ಹೊಂದುವ ಉತ್ಕಟ ಇಚ್ಛೆಯು ಅದಕ್ಕೆ ಉಂಟಾಗುವದು. ಭ್ರಾಂತಿಯ ಮೂಲಕ ಮನಸ್ಸು ತಪ್ಪುದಾರಿಗೆ ಎಳೆಯಲ್ಪಟ್ಟಿದೆ. ಆನಂದವು ನಮ್ಮ ಹೃದಯದೊಳಗೇ ಇದೆ, ಹೊರಗಿಲ್ಲ. ಮನಸ್ಸು ಆನಂದಕ್ಕಾಗಿ ವಿಷಯವಸ್ತುಗಳ ಬೆನ್ನು ಹತ್ತುವದು. ಮನಸ್ಸು ಪ್ರಶಾಂತವಿದ್ದಾಗ ಮತ್ತು ನಿಶ್ಚಲವಿದ್ದಾಗ ಆನಂದಾನುಭವವಾಗುವದು. ಆನಂದವು ಇದ್ದಂತೆ ಇದೆ. ಆನಂದವನ್ನು ಅಗಣಿತ ಜೀವಿಗಳು (ಮಾನವರು, ಪಶುಪಕ್ಷಿಗಳು) ನಿರಂತರವಾಗಿ ಅನುಭವಿಸಿದರೂ, ಅದು ನಿತ್ಯವು, ಶಾಶ್ವತವು, ಅವಿಕಾರಿಯು, ಹೆಚ್ಚು ಕಡಿಮೆಯಾಗದ್ದಿರುವದು. ಜೀವಿಗಳು ಆನಂದವನ್ನು ಇದ್ದಕ್ಕಿದ್ದಂತೆ ಅನುಭವಿಸುತ್ತವೆ. ಸಿಹಿಯಾದ ತಿನ್ನುವ ಮತ್ತು ಕುಡಿಯುವ ಪದಾರ್ಥಗಳನ್ನು ನಾವೇ ತಯಾರು ಮಾಡಿಕೊಂಡು ಅಥವಾ ಇನ್ನೊಬ್ಬರು ತಯಾರಿಸಿದ್ದನ್ನು ತೆಗೆದುಕೊಂಡು ಭೋಗಿಸುವಂತೆ, ಆನಂದವನ್ನು ನಾವೇ ತಯಾರುಮಾಡಿಕೊಂಡು ಅಥವಾ ಇನ್ನೊಬ್ಬರು ತಯಾರಿಸಿದ್ದನ್ನು ತೆಗೆದುಕೊಂಡು ಆನಂದಾನುಭವವನ್ನು ಹೊಂದುವದಿಲ್ಲ. ಶಾಶ್ವತ ಸುಖವನ್ನು ಹೊಂದುವದೇ ಮಾನವ ಜನ್ಮದ ಪರಮ ಪುರುಷಾರ್ಥವು. ಮನಸ್ಸೇ ದಾರಿ ತಪ್ಪಿ ಅಲೆದಾಡುತ್ತಿದೆ ಮತ್ತು ದುಃಖಪಡುತ್ತಿದೆ. ಮಾನವನು ಶಾಶ್ವತ ಸುಖವನ್ನು ಹೊಂದುವದಕ್ಕಾಗಿ ಹೇಳಿದ ಯಾವದೇ ದೇಶದ, ಪ್ರದೇಶದ ಅಥವಾ ಭಾಷೆಯ ಪವಿತ್ರ ಗ್ರಂಥಗಳು ಅಥವಾ ಶೃತಿವಾಕ್ಯಗಳು ಆನಂದನಾನುಭೂತಿಯನ್ನು ಹೊಂದಿದ ಶುದ್ಧ ಮನಸ್ಸಿನ ಕೃತಿಗಳಾಗಿವೆ. ಆನಂದದ ಅಭಿವ್ಯಕ್ತಿಗಿಂತ ಮೊದಲು ಆನಂದಾನುಭೂತಿಯು. ಆನಂದಾನುಭೂತಿಯು ಆಂತರಿಕ ಪ್ರಯೋಗವು. ಇದು ಸಾಕ್ಷಾತ್ (ಅಪರೋಕ್ಷ) ಜ್ಞಾನವು. ಪರೋಕ್ಷಜ್ಞಾನವಲ್ಲ. ಆನಂದಾನುಭೂತಿಯ ಕಾಲಕ್ಕೆ ವ್ಯಕ್ತಿ, ವಸ್ತು, ತರ್ಕ, ಭಾಷೆ, ಶಬ್ದ ಅಥವಾ ಜಗದಭಾವ, ದೇವರು ಮುಂತಾದ ಯಾವದೇ ಮಾಧ್ಯಮವೂ ಇಲ್ಲ ; ಕಾಲ,



ದೇಶ, ಕಾರಣಭಾವವಿಲ್ಲ. ಆದ್ದರಿಂದ ಆನಂದವನ್ನು ಹೊಂದಲು ಜೀವನು ಅನುಭವಕ್ಕೇ ಶರಣುಹೋಗಬೇಕಾಗುವದು. ಮಾನವನು ಶಾಶ್ವತ ಸುಖವನ್ನು ಹೊಂದಲು ಅನುಭೂತಿಯು ಅತ್ಯವಶ್ಯವು. ಮಾನವನಿಗೆ ಮಾತ್ರ ಆನಂದವನ್ನು ಹೊಂದಲು ತನ್ನಷ್ಟಕ್ಕೆ ತಾನೇ ಪ್ರಯೋಗವನ್ನು ಕೈಕೊಳ್ಳಲು ಸಾಧ್ಯವಿದೆ ಮತ್ತು ಅದನ್ನು ಅವನು ಕೈಕೊಳ್ಳಬೇಕು. ಇದಕ್ಕಾಗಿ ಮಾನವನು ತಾನೇ ವಿವೇಕ ವೈರಾಗ್ಯದಿಂದ ರಾಗದಿಂದ ಚಂಚಲವಾದ ಮನಸ್ಸನ್ನು ಶಾಂತಗೊಳಿಸಬೇಕು.

ಇಡೀ ವಿಶ್ವದ ಜ್ಞಾನವು ಜ್ಞಾನವೇ ಅಲ್ಲ. ಏಕೆಂದರೆ ವಿಶ್ವದ ಜ್ಞಾನವು ಆನಂದಮಯವಾದ ತನ್ನ ನಿಜವನ್ನು ಆವರಿಸಿದಂತಿರುವ ಮತ್ತು ತನ್ನ ನಿಜ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗದಂತೆ ಮಾಡಿರುವ ಸ್ವರೂಪದ ಅಜ್ಞಾನವನ್ನು ತೆಗೆದು ಹಾಕುವದಿಲ್ಲ. ಅತ್ಯಂತ ದುಃಖ ವಿಮೋಚನೆ ಮಾಡುವ ತನ್ನ ನಿಜಸ್ವರೂಪದ ಜ್ಞಾನವೇ ನಿಜವಾದ ಜ್ಞಾನವು. ಇರುವು ಇರುವೇ. ಆನಂದವು ಆನಂದವೇ. ಆನಂದವು ಸಮವು, ವಿಷಮವಲ್ಲ. "ನಾನು ನಾನೇ". ನಾನು ಎಂಬುದಕ್ಕೆ ಪೂರಕ ಪದವು ನಾನೇ. ಬೇರೆ ಯಾವದೂ ಪೂರಕವಾಗಲಾರದು. ದುಃಖಕ್ಕೆ ಮೂಲಕಾರಣವಾದ ಸ್ವರೂಪದ ಅಜ್ಞಾನವನ್ನು ವ್ಯವಹಾರಿಕ ಪ್ರಪಂಚದ ಎಷ್ಟೇ ಸವಿಸ್ತಾರವಾದ ಮತ್ತು ಆಳವಾದ ಜ್ಞಾನವು ತೆಗೆದುಹಾಕಲಾರದು (ಕಳೆಯಲಾರದು) ಸಾವಿರಾರು ಮಾನವರಲ್ಲಿ ಒಬ್ಬನು ಮಾತ್ರ ಎಲ್ಲ ದುಃಖಕ್ಕೆ ಸ್ವರೂಪದ ಅಜ್ಞಾನವೇ ಮೂಲಕಾರಣವೆಂದು ತಿಳಿದುಕೊಳ್ಳುವನು. ಈ ರೀತಿಯಾಗಿ ತಿಳಿದುಕೊಂಡ ಸಾವಿರಾರು ಜನರಲ್ಲಿ ಒಬ್ಬನು ಮಾತ್ರ ತನ್ನ ಸ್ವರೂಪವನ್ನು ತಿಳಿದುಕೊಳ್ಳಲು ಮನಃಪೂರ್ವಕ ಮತ್ತು ಶ್ರದ್ಧಾಪೂರ್ವಕ ಪ್ರಯತ್ನಗಳಲ್ಲಿ ತೊಡಗುವನು. ಏಕೆಂದರೆ ಜೀವನು ವಿಶ್ವದ ವಸ್ತುಗಳ ಸೌಂದರ್ಯದ ಗಾಢವಾದ ಮೋಹಕ್ಕೀಡಾಗಿದ್ದಾನೆ. ಅವನಿಗೆ ಸ್ವರೂಪಜ್ಞಾನವು ಕನಸೇ ಸರಿ.

ನಮ್ಮ ನಿಜಸ್ವರೂಪಕ್ಕೆ ನಾಮ, ರೂಪ, ಕ್ರಿಯೆಗಳಿಲ್ಲ. ಇವೆಲ್ಲವೂ ತನ್ನ ನಿಜಸ್ವರೂಪದ ಆಧಾರದ ಮೇಲೆ ತೋರಿದ ಅಜ್ಞಾನದಿಂದ ಕಲ್ಪಿತವಾದ ಸೃಷ್ಟಿಯು, ಆದ್ದರಿಂದ ತನ್ನ ನಿಜಸ್ವರೂಪವನ್ನು ಹೊಂದಲು ಪ್ರಥಮಾನುಭೂತಿಯನ್ನೇ ಆಶ್ರಯಿಸಿ ಗೌರವ ಮತ್ತು ಲಕ್ಷ್ಯಪೂರ್ವಕವಾಗಿ ಪ್ರಥಮಾನುಭೂತಿಯ ಬಗ್ಗೆ ಆಳವಾಗಿ ಮನನ ಮಾಡಬೇಕು.

ಶುದ್ಧ ಶಾಶ್ವತ ಸುಖವನ್ನು ಬಯಸುವ ಮಾನವನು ಇನ್ನೇನನ್ನೂ ಚಿಂತಿಸದೆ ಪ್ರಥಮಾನುಭೂತಿಯನ್ನೇ ಚಿಂತಿಸಬೇಕು. ಸುಖವನ್ನು ಬೇಡು ಎಂದು ನಿನಗೆ ಯಾರಾದರೂ ಕಲಿಸಿದರೇನು ? ಇಲ್ಲ. ತನ್ನ ಪ್ರಥಮಾನುಭೂತಿಯ ಆಧಾರದ ಮೇಲೆಯೇ ಮಾನವನು ಸುಖವನ್ನು ಬೇಡುತ್ತಾನೆ. ಆದರೆ ಬೇರೊಬ್ಬರ ಬೋಧ ಅಥವಾ ಉಪದೇಶವನ್ನವಲಂ

ಬಿಸುವದಿಲ್ಲ. ಮಾನವನು ತನ್ನ ಗುರು ತಾನೇ ಇರುವನು. ತನ್ನ ಪ್ರಥಮಾನುಭೂತಿಯಲ್ಲಿ ಯಾವದೇ ಗುರು ಅಥವಾ ಜಗದ್ಗುರುವು ಇರುವದಿಲ್ಲ. ಪ್ರಥಮಾನುಭೂತಿಯು ಗಾಢ ನಿದ್ರೆಗಿಂತ ತೀರ ಭಿನ್ನವಾಗಿದೆ. ಪ್ರಥಮಾನುಭೂತಿಗೂ ಗಾಢನಿದ್ರೆಗೂ ಮಹದಂತರವಿದೆ. ಪ್ರಥಮಾನುಭೂತಿಯೇ ಶಾಶ್ವತ ಸುಖವನ್ನು ಅಥವಾ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಅತಿ ಶ್ರೇಷ್ಠವಾದ ಸರಳ ದಾರಿ. ಗಾಢ ನಿದ್ರೆಯು ಅಜ್ಞಾನಾವಸ್ಥೆಯು. ನಿದ್ರೆಯ ಮಬ್ಬು, ನಿದ್ರೆಯ ಸೂತ್ರವು. ನಿದ್ರೆಯ ಮಬ್ಬು ಗಾಢವಾಗಿ ಗಾಢನಿದ್ರೆಯಾಗಿ ಪರಿಣಮಿಸುವದು.

ಮಾನವನು ತನ್ನ ಗಾಢ ನಿದ್ರೆಯ ಅನುಭವವನ್ನು ನಿರೀಕ್ಷಿಸಿ ನೋಡಿದಾಗ ತನ್ನ ನಿಜ ಸ್ವರೂಪವು ಸಚ್ಚಿದಾನಂದವೆಂಬುದು ತಿಳಿಯುವದು. ಮಾನವನು ತನ್ನಷ್ಟಕ್ಕೆ ತಾನು ಪರಿಪೂರ್ಣನೇ ಇದ್ದಾನೆ, ತನ್ನ ಪರಿಪೂರ್ಣತೆಯನ್ನು ಪಡೆಯುವದಕ್ಕಾಗಿ ಅವನು ವಿಶ್ವದ ಏನನ್ನಾದರೂ ಅವಲಂಬಿಸಬೇಕಾಗಿಲ್ಲ. ಸ್ವರೂಪದ ಆಧಾರದ ಮೇಲೆ ತೋರಿದ ಅಜ್ಞಾನವು ಗಾಢವಾದ ನಿದ್ರೆಯಲ್ಲಿ ತನ್ನ ನಿಜ ಸ್ವರೂಪವನ್ನು ಆವರಿಸಿದಂತೆ ತೋರಿದರೂ, ನಿಸ್ಸಂಶಯವಾಗಿ ನಿರ್ವಿವಾದವಾಗಿ ತಾನು ಸಚ್ಚಿದಾನಂದನೇ ಇದ್ದಾನೆ. ಗಾಢ ನಿದ್ರೆಯ ಅನುಭವವನ್ನು ನೆನಪಿಸಿಕೊಂಡಾಗ, ತಾನು ಗಾಢನಿದ್ರೆಯಲ್ಲಿ ವ್ಯಾವಹಾರಿಕ ಜಾಗ್ರ ಮತ್ತು ಕನಸುಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ, ಅವುಗಳ ಯಾವದೇ ಸಂಪರ್ಕ ಸಂಬಂಧವಿಲ್ಲದೆ ಪೂರ್ಣಾನಂದದಿಂದಿರುವದು ಸುನಿಶ್ಚಿತವಿದೆ. ಗಾಢ ನಿದ್ರೆಯ ಪೂರ್ಣಾನಂದವಿದೆ ಎಂಬುದಕ್ಕೆ ಯಾವ ಪ್ರಮಾಣವೂ ಬೇಕಾಗಿಲ್ಲ. ಗಾಢ ನಿದ್ರೆಯಲ್ಲಿ ತಾನು ಇರುವು, ಅರುವು, ಆನಂದಮಯನು ಇದ್ದೇನೆಂಬುದಕ್ಕೆ ಯಾವದೇ ಪ್ರಮಾಣದ ಅವಶ್ಯಕತೆ ಇಲ್ಲ. ಗಾಢ ನಿದ್ರೆಯಲ್ಲಿ ತಾನು ಇದ್ದೇನೆ ಮತ್ತು ತಿಳುವಳಿಕೆಯುಳ್ಳವನಾಗಿದ್ದೇನೆ ಎಂಬುದನ್ನು ಬೇರೆಯವರು ಯಾರೂ ಹೇಳುವ ಅವಶ್ಯಕತೆ ಇಲ್ಲ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಒಂದು ವೇಳೆ ಗಾಢನಿದ್ರೆಯಲ್ಲಿ ನಾವು ಸಚ್ಚಿದಾನಂದರೂಪರಿದ್ದೇವೆಂಬುದನ್ನು ಹೇಳಲು ಆ ನಿದ್ರೆಯಲ್ಲಿ ಯಾರಾದರೊಬ್ಬರು ಇದ್ದಾರೆಂದು ಯಾರಾದರೂ ಹೇಳಿದರೆ ಅದು ನಿದ್ರೆಯೇ ಎನ್ನಿಸಿಕೊಳ್ಳುವದಿಲ್ಲ. ವ್ಯಾವಹಾರಿಕ ಜಾಗ್ರದಲ್ಲಿ ಕೂಡ ತಾನು ಗಾಢನಿದ್ರೆಯಲ್ಲಿ ಪೂರ್ಣಾನಂದದಿಂದಿದ್ದೆನು ಎಂಬುದನ್ನು ಯಾರೂ ಹೇಳಿಕೊಡ ಬೇಕಾಗಿಲ್ಲ. ಮಾನವನಿಗೆ ತಾನು ನಿದ್ರೆಯಲ್ಲಿದ್ದೆನೆಂಬುವದೂ, ನಿದ್ರೆಯ ಅನುಭವವೂ ಅವನಿಗಿದೆ. ಗಾಢನಿದ್ರೆಯಲ್ಲಿ ತೋರಿಕೆಯು ಗೋಚರಿಸುವದಿಲ್ಲ.

ಮಾನವನು ಗಾಢನಿದ್ರೆಯಿಂದ ವ್ಯಾವಹಾರಿಕ ಜಾಗ್ರಕ್ಕೆ ಬಂದಾಗ ತಾನು ಗಾಢನಿದ್ರೆಯಲ್ಲಿ ಏನೂ ತಿಳಿಯಲಿಲ್ಲ ಎಂದು ಹೇಳುತ್ತಾನೆ. ಮಾನವನು ಗಾಢನಿದ್ರೆಯಲ್ಲಿ ಏನೂ ತಿಳಿಯಲಿಲ್ಲ ಎಂಬುದನ್ನು ತಿಳಿಯುತ್ತಾನಾದ್ದರಿಂದ ತಾನು ಅಜ್ಞಾನವನ್ನು



ತಿಳಿಯುವವನಾಗಿದ್ದಾನೆ. ಅಜ್ಞಾನವು ಅರಿವನ್ನು ಆವರಿಸಿದರೂ ಗಾಢನಿದ್ರೆಯಲ್ಲಿ "ಏನೂ ತಿಳಿಯಲಿಲ್ಲ" ಎಂಬ ರೂಪದಲ್ಲಿ ತಿಳಿಯಲ್ಪಡುವದು. ಗಾಢನಿದ್ರೆಯಲ್ಲಿ ಅಜ್ಞಾನಾವರಣ ಇದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ಮಾನವನು ಅಜ್ಞಾನದಿಂದುತ್ಪನ್ನವಾದ ಮರವೆಯ ಮಬ್ಬಿನ ಸೂತ್ರ ಹಿಡಿದು ತಾನು ಗಾಢನಿದ್ರೆಗೆ ಹೋಗುತ್ತಾನೆಂಬುದನ್ನು ನೆನಪಿಸಿಕೊಳ್ಳಲೇಬೇಕು. ಮಾನವನು ಮರವೆಯ ಪಾಶದಿಂದ ಗಾಢನಿದ್ರೆಗೆ ಆಹುತಿಯಾಗುತ್ತಾನೆ. ಅವನು ಗಾಢನಿದ್ರೆಯ ಪ್ರೇರಣೆಯಿಂದ ಸೆಳೆಯಲ್ಪಡುತ್ತಾನೆ. (ಈ ಪ್ರೇರಣೆಯು ಅಜ್ಞಾನದಿಂದಲೇ ಉದಯವಾಗಿದೆ) ಗಾಢನಿದ್ರೆಗೆ ಹೋಗುವಾಗ ತಾನು ಗಾಢನಿದ್ರೆಗೆ ಹೊರಟಿದ್ದಾನೆಂಬುದು ಗುರುತಾಗುವದು. ಅವನು ಈ ಮರವೆಯನ್ನು ನಿದ್ರೆಯ ಮಬ್ಬಿನ ಮುಖಾಂತರ ವ್ಯಕ್ತಪಡಿಸುತ್ತಾನೆ. ನಿದ್ರೆಯ ಮಬ್ಬು ಇನ್ನೂ ಗಾಢವಾಗದೆ ಇರುವಾಗ ತನ್ನ ಸುತ್ತಮುತ್ತಲಿರುವವರು ಸುಮ್ಮನಿದ್ದು ತನ್ನ ನಿದ್ರೆಯ ಮಬ್ಬನ್ನು ಅಥವಾ ನಿದ್ರೆಯನ್ನು ಕೆಡಿಸಬಾರದೆಂದು ಹೇಳುವನೆಂಬುದು ಸ್ಪಷ್ಟವಿದೆ. ಇದಕ್ಕೆ ಯಾವದೇ ಬಾಹ್ಯ ಪ್ರಮಾಣವು ಬೇಕಾಗಿಲ್ಲ. ಗಾಢ ನಿದ್ರೆಯಲ್ಲಿ ಆನಂದಾನುಭವವು ನಡದೇ ಇರುವದು. ಆದರೆ ಮನಸ್ಸಿನ ವಿಚಿತ್ರ ಬದಲಾವಣೆಯ ಸ್ಥಿತಿಯಿಂದ (ಜೀವನ·ಮಾಯಾ ವೃತ್ತಿಯ ಉಪಾಧಿ) ಆನಂದಾನುಭವ ನಡೆದಿರುವದೆಂಬುದು ಗುರ್ತಾಗುವದಿಲ್ಲ. ಅದರಂತೆ ಗಾಢ ನಿದ್ರೆಯಲ್ಲಿ ಅಜ್ಞಾನವು ತಿಳಿಯಲ್ಪಡುತ್ತದೆ. ಆದರೆ ಮನಸ್ಸಿನ ವಿಚಿತ್ರ ಬದಲಾವಣೆಯ ಸ್ಥಿತಿಯಿಂದ (ಮಾಯಾವೃತ್ತಿ) ತಾನು ನಿದ್ರೆಯಲ್ಲಿ ಅಜ್ಞಾನವನ್ನು ತಿಳಿಯುತ್ತಾನೆಂಬುದು ಗುರ್ತಾಗುವದಿಲ್ಲ. ಜೀವನು ಗಾಢವಾದ ನಿದ್ರೆಯಲ್ಲಿ ತನ್ನ ಕಾರಣವಾದ ಅಜ್ಞಾನದಲ್ಲಿ ಒಂದಾದಂತಾಗಿರುತ್ತಾನೆ. ಆದರೆ ನಿದ್ರೆಯ ಅನುಭವದ ಗ್ರಹಣ ಶಕ್ತಿಯನ್ನು ಕಾಯ್ದಿರಿಸಿಕೊಂಡಿರುತ್ತಾನೆ. ಗಾಢನಿದ್ರೆಯಲ್ಲಿ ಜೀವಾತ್ಮನು (ಜೀವ ಚೈತನ್ಯವು) ಪರಮಾತ್ಮನೊಡನೆ ಒಂದಾದಂತಾಗಿರುತ್ತಾನೆ. ಗಾಢ ನಿದ್ರೆಯಲ್ಲಿ ಎಲ್ಲ ಜೀವಿಗಳಿಗೂ ಒಂದೇ ಉಪಾಧಿ ಇರುವದು.(ಮಾಯಾವೃತ್ತಿ) ಮಾನವರು, ಪಶುಪಕ್ಷಿಗಳೆಲ್ಲವೂ ಗಾಢ ನಿದ್ರೆಯಲ್ಲಿ ಮನಸ್ಸಿನ ವಿಚಿತ್ರ ಬದಲಾವಣೆಯ ಮುಖಾಂತರ ಆನಂದವನ್ನು ಅನುಭವಿಸುವವು. ಈ ಮನಸ್ಸಿನ ಸ್ಥಿತಿಗೆ ಮಾಯಾ ವೃತ್ತಿ ಎನ್ನುವರು. ಈ ಮಾಯಾವೃತ್ತಿಯನ್ನು ಹೊಂದಿದವರಿಗೆ ಅಜ್ಞಾನವೇ ವಿಷಯವಾಗುವದು. ಈ ಅಜ್ಞಾನದ ಉಪಾಧಿಯು ನಿದ್ರೆಯಲ್ಲಿ ಏನೂ ತಿಳಿಯಲಿಲ್ಲ ಮತ್ತು ಪೂರ್ಣ ಆನಂದವಿತ್ತು ಎಂಬ ತಿಳುವಳಿಕೆಯಿಂದೊಡಗೂಡಿ ವ್ಯಾವಹಾರಿಕ ಜಾಗ್ರದ ಮನಸ್ಸಿನ ಸ್ಥಿತಿಗೆ ಹಿಂತಿರುಗುವದು. ಗಾಢನಿದ್ರೆಯಲ್ಲಿ ಅಜ್ಞಾನದಿಂದ ಹೊಂದಿದ ಆನಂದಾನುಭವವು ಮನಸ್ಸಿನ ಮೇಲೆ (ಪ್ರಭಾವವನ್ನು ಬೀರುವದು) ಸಂಸ್ಕಾರವನ್ನುಂಟು ಮಾಡುವದು. ಮನಸ್ಸು ಜಾಗ್ರಾವಸ್ಥೆಯನ್ನು ಪಡೆದಾಗ ಗಾಢನಿದ್ರೆಯಲ್ಲಿ ಅಜ್ಞಾನದ ಉಪಾಧಿಯಿಂದ (ಮಾಯಾವೃತ್ತಿ) ಆನಂದಾನುಭವವನ್ನು ನೆನಪಿಗೆ ತಂದುಕೊಳ್ಳುವದು. ಅದರಂತೆ ಗಾಢ ನಿದ್ರೆಯಲ್ಲಿ

ಮಾಯಾವೃತ್ತಿಯಿಂದ ತಿಳಿದ ಅಜ್ಞಾನವನ್ನು ನೆನಪಿಗೆ ತೆಗೆದುಕೊಳ್ಳುವದು. ಜಾಗ್ರದಲ್ಲಿ ಗಾಢನಿದ್ರೆಯ ಬಗೆಗೆ ಮಾತನಾಡುವ ಜ್ಞಾನವು ನಿದ್ರೆಯ ಅನುಭವವನ್ನು ನೆನಪಿಗೆ ತಂದುಕೊಂಡು ಅದನ್ನು ಸ್ಮರಿಸುವದನ್ನು ಅವಲಂಬಿಸಿದೆ. ಗಾಢ ನಿದ್ರೆಯಲ್ಲಿ ಜೀವಚೈತನ್ಯವು ಪರಮ ಚೈತನ್ಯದೊಡನೆ ಒಂದಾದಂತಾಗಿರುವದು. ಆದರೆ ಆತ್ಮಸಾಕ್ಷಾತ್ಕಾರದ ಸ್ಥಿತಿಯಲ್ಲಿ ಜೀವನು ಅಜ್ಞಾನದಿಂದುಂಟಾದ ಮೂರೂ ಅವಸ್ಥೆಗಳನ್ನು (ನಿದ್ರೆ, ಕನಸು, ವ್ಯಾವಹಾರಿಕ ಎಚ್ಚರ) ಮೀರಿ, ಆ ಮೂರೂ ಅವಸ್ಥೆಗಳಿಗೆ ಸಾಕ್ಷೀ ಇರುವನೆಂಬ ಸಾಕ್ಷಾತ್ ಅನುಭವವಾಗುವದು. ಆತ್ಮಸಾಕ್ಷಾತ್ಕಾರದ ಸ್ಥಿತಿಯಲ್ಲಿ ಜೀವ ಚೈತನ್ಯವು ಪರಮ ಚೈತನ್ಯದೊಡನೆ ಒಂದಾಗುವದು. ಈ ಸಾಕ್ಷೀ ಸ್ಥಿತಿಯೂ ಮಾಜಿ ಹೋಗುವದು ಮತ್ತು ಇರುವು, ಅರಿವು, ಆನಂದ ಮಾತ್ರ ಉಳಿಯುವದು. ಈ ಸಾಕ್ಷೀ ಅವಸ್ಥೆಯು ಅರಿವಿನ ಅವಸ್ಥೆಯು. ಈ ಸಾಕ್ಷೀ ಅವಸ್ಥೆಯಲ್ಲಿ ಜೀವನಿಗೆ ತನ್ನ ನಿಜಸ್ವರೂಪದ ಜ್ಞಾನವಾಗುವದು ಮತ್ತು ತನ್ನ ನಿಜಸ್ವರೂಪವು ಎಲ್ಲದರಿಂದ ಅಬಾಧಿತವಾದುದೂ, ಕಾಲ, ದೇಶ, ಕಾರಣರಹಿತವಾದುದೂ, ಅದು ಅದ್ವಯವು ಎಂಬುದರ ಜ್ಞಾನವುಂಟಾಗುವದು.

ಅಜ್ಞಾನವು ಅರಿವಿನ ಆಧಾರದ ಮೇಲೆ ತೋರಿ, ಅರಿವನ್ನೇ ಆವರಿಸುವದು. ಅಜ್ಞಾನವು ಕನಸು ಜಾಗ್ರಗಳೆಂಬ ವಿಕೃತ ದೃಶ್ಯಗಳನ್ನು ಸೃಷ್ಟಿಸುವದು. ಈ ತೋರಿಕೆಯ ಕನಸು ಜಾಗ್ರಗಳನ್ನು ನಿಜವಾಗಿ ಇದ್ದಂತೆ ತೋರಿಸುವದು. ಇರುವಿಕೆಯ ಅರಿವನ್ನು ಇಲ್ಲದಂತೆ ತೋರಿಸುವದು. ಅರಿವು ಇದ್ದಕ್ಕಿಂದ್ದಂತೆಯೇ ಇರುವದು. ಅಜ್ಞಾನದಿಂದುಂಟಾದ ಮೂರೂ ಅವಸ್ಥೆಗಳಲ್ಲಿ ಅದು ಯಾವದೇ ಬದಲಾವಣೆಯನ್ನು ಹೊಂದುವದಿಲ್ಲ ಅಜ್ಞಾನವೇ ಅನಾದಿ ಭೇದತ್ವವನ್ನು ಶಾಶ್ವತ ಸತ್ಯದ ಆಧಾರದ ಮೇಲೆ ಪ್ರದರ್ಶಿಸುವದು.

ಮಾನವನು ತನ್ನ ನಿಜಸ್ವರೂಪದೊಳಗೆ ತೃಪ್ತಿಯನ್ನು ಹೊಂದಿದಾಗ ಮನಸ್ಸಿನ ಸಮಸ್ಥಿತಿಯು ಪ್ರಾಪ್ತವಾಗುವದು. ವಿವೇಕ ವೈರಾಗ್ಯಗಳ ಸತತ ಅಭ್ಯಾಸದಿಂದ ಮನಸ್ಸಿನ ಸಂಪೂರ್ಣ ನಿಶ್ಚಲಸ್ಥಿತಿಯು ಪ್ರಾಪ್ತವಾಗುವದು. ಈ ಅರಿವಿನ ಅವಸ್ಥೆಯು ಜಗತ್ತಿಗೂ ಮತ್ತು ಜಗತ್ತಿನ ವ್ಯವಹಾರಕ್ಕೂ (ಸಾಮಾನ್ಯಜೀವಿಗಳಿಗೂ) ಮಾಯವಾಗಿ ಹೋಗಿದೆ. ಆದರೆ ತನ್ನ ನಿಜಸ್ವರೂಪದಲ್ಲಿರುವವನಿಗೆ ಈ ಅರಿವಿನ ಅವಸ್ಥೆಯ ಎಚ್ಚರವಿದೆ. ಇದು ಯಾವದೇ ತರ್ಕ ಅಥವಾ ಮಾಧ್ಯಮವನ್ನವಲಂಬಿಸದ, ಆನಂದದ ಮತ್ತು ಸತ್ಯದ ಸಾಕ್ಷಾತ್ ಎಚ್ಚರಿಕೆಯು. ಇದನ್ನು ತುರೀಯ ಅಥವಾ ಅನುಭೂತಿ ಎಂದು ಹೆಸರಿಸಬಹುದು. ಈ ಎಚ್ಚರಿಕೆಯು ಅವಸ್ಥಾತೀತ, ಅನುಸ್ಯೂತ ಮತ್ತು ನಿರ್ಲಿಪ್ತವಿರುವದು.

ವಿವೇಕ ವೈರಾಗ್ಯಗಳಿಂದ ಮನಸ್ಸು ರಾಗದ್ವೇಷಗಳಿಂದ ಮುಕ್ತವಾಗಿ ಆನಂದಾನುಭವವಾಗುವದು. ಎಲ್ಲ ಜೀವಿಗಳು ಎಲ್ಲ ಅವಸ್ಥೆಗಳಲ್ಲಿ ಬೇರೆ ಬೇರೆ ಉಪಾಧಿಗಳ



ಮುಖಾಂತರ ಆನಂದವನ್ನು ಅನುಭವಿಸುತ್ತವೆ. ಆದರೆ ಆನಂದವು ಯಾವದೇ ಬದಲಾವಣೆಯನ್ನು ಹೊಂದದೆ ಇದ್ದಕ್ಕಿದ್ದಂತೆಯೇ ಇದೆ. ಆನಂದವು ಭೋಕ್ತೃ, ಭೋಗ, ಭೋಗಿಸಲ್ಪಟ್ಟದ್ದೂ ಅಲ್ಲ. ಆನಂದದಲ್ಲಿ ತ್ರಿಪುಟಿ ಇಲ್ಲ. ಬರೇ ಇರುವು, ಅರುವು, ಆನಂದವಿರವದು. ಇಂಥಹ ಶುದ್ಧ, ಇರುವು, ಅರುವು, ಪೂರ್ಣಾನಂದಮಯ ಸ್ಥಿತಿಯನ್ನು ಆನಂದಸೂತ್ರವನ್ನಾಗಿ ತೆಗೆದುಕೊಳ್ಳಬೇಕು. ಈ ಆನಂದಸೂತ್ರವು ಪೂರ್ಣಗಾಢವಾದಾಗ ತನ್ನ ನಿಜಸ್ವರೂಪದ ಸಾಕ್ಷಾತ್ಕಾರವಾಗುವದು. (ತುರ್ಯ ಸ್ಥಿತಿ) ಈ ಸ್ವರೂಪ ಸಾಕ್ಷಾತ್ಕಾರದ ಸ್ಥಿತಿಯಲ್ಲಿ ಗಾಢನಿದ್ರೆಯಲ್ಲಿರುವಂತೆ ಅಜ್ಞಾನದ ತೋರಿಕೆಯು ಇರುವದಿಲ್ಲ. ಗಾಢ ನಿದ್ರೆಗೂ ಮತ್ತು ತುರ್ಯಸ್ಥಿತಿಗೂ ಮಹದಂತರವಿದೆ. ಗಾಢ ನಿದ್ರೆಯು ಅಜ್ಞಾನಾವಸ್ಥೆಯು. ತುರ್ಯವು ಅರಿವಿನ (ಜ್ಞಾನದ) ಅವಸ್ಥೆಯು.

ಅವರವರ ಅಧ್ಯಾತ್ಮ ದುಡಿಕೆಗನುಗುಣವಾಗಿ ಗುರುವಿನ ಅವಶ್ಯಕತೆಯು ಇರಬಹುದು ಅಥವಾ ಇರಲಿಕ್ಕಿಲ್ಲ. ಅದು ಅವನ ಭೂತಕಾಲದ ಮತ್ತು ವರ್ತಮಾನಕಾಲದ ತನ್ನ ನಿಜಸ್ವರೂಪದ ಅಭ್ಯಾಸವನ್ನವಲಂಬಿಸಿದೆ. ತನ್ನ ಹಿಂದಿನ ಜನ್ಮದ ತನ್ನ ನಿಜಸ್ವರೂಪದ ಅಭ್ಯಾಸದ ವಿಚಾರಗಳು ನೆನಪಿಗೆ ಬಂದ ತಕ್ಷಣ ತನ್ನ ನಿಜಸ್ವರೂಪದ ಅಭ್ಯಾಸವನ್ನು ಮುಂದುವರಿಸಿ ಸ್ವರೂಪಾವಸ್ಥಿತಿಯನ್ನು ಹೊಂದಬಹುದು ಅಥವಾ ಸ್ವರೂಪನಿಷ್ಠ ಗುರುವನ್ನು ಹೊಂದಿ, ಅವರಿಂದ ತನ್ನ ನಿಜಸ್ವರೂಪವನ್ನು ಹೊಂದುವದರ ಬಗ್ಗೆ ಮಾರ್ಗದರ್ಶನವನ್ನು ಪಡೆಯಬಹುದು. ಆದ್ದರಿಂದ ಗುರುವಿನ ಅವಶ್ಯಕತೆಯು ಇರುವದೋ , ಇಲ್ಲವೋ ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಬರುವದಿಲ್ಲ.

ತನ್ನಷ್ಟಕ್ಕೆ ತಾನೇ ವಿಚಾರಮಾಡಿಕೊಂಡು ತನ್ನ ನಿಜಸ್ವರೂಪದ ಸಂಶೋಧನೆಯಲ್ಲಿ ತೊಡಗಬಹುದು. ತನ್ನ ಸಂಶೋಧನೆಯನ್ನು ತನ್ನ ಅನುಭವದ ಒರೆಗಲ್ಲಿಗೆ ಹಚ್ಚಿ ನೋಡಿಕೊಳ್ಳಬಹುದು. ಶಾಶ್ವತ ಸುಖ ಹೊಂದುವದಕ್ಕಾಗಿ ತಾನೇ ಪ್ರತಿಜ್ಞಾವಾಕ್ಯವನ್ನು (ಪೂರ್ವಸಿದ್ಧಾಂತವನ್ನು) ಗ್ರಹಿಸಿ ಅದನ್ನು ತನ್ನ ಅನುಭವದ ಒರೆಗಲ್ಲಿಗೆ ಹಚ್ಚಿ ನೋಡಿಕೊಳ್ಳಬೇಕು. ಸರಿಯೆನಿಸಿದರೆ ಅದೇ ಸಾಧನೆಯಲ್ಲಿ ಮುಂದುವರಿಯ ಬಹುದು ಅಥವಾ ತಮ್ಮ ನಿಜಸ್ವರೂಪವಾದ ಸಚ್ಚಿದಾನಂದದಲ್ಲಿ ನೆಲೆ ನಿಂತವರ ಮಾರ್ಗದರ್ಶನವನ್ನು ಹೊಂದಿ ಅದನ್ನು ತಮ್ಮ ಅನುಭವದ ಒರೆಗಲ್ಲಿಗೆ ಹಚ್ಚಿ ನೋಡಿಕೊಂಡು ಅನುಸರಿಸಬಹುದು.

ನಿಶ್ಚಲ ಮನಸ್ಸಿನ ಅರಿವಿನ ಅವಸ್ಥೆಯು (ಸ್ಥಿತಿಯು) ಜಾಗ್ರದಲ್ಲಿ ಸತ್ಯವನ್ನು (ಆನಂದವನ್ನು) ಅಭ್ಯಾಸಿಸುವ ಮತ್ತು ಹೊಂದುವ ಸೂತ್ರವು. ಈ ನಿಶ್ಚಲ ಮನಸ್ಸಿನ ಅರಿವಿನ ಸ್ಥಿತಿಯ ಸತತ ನಿರಂತರ ಅಭ್ಯಾಸದಿಂದ ತುರ್ಯ ಸ್ಥಿತಿಯು ಸಾಧಿಸುವದು. ಇದು ಒಂದು ಕಲ್ಪನೆಯು ಅಡಗಿ ಮತ್ತೊಂದು ಕಲ್ಪನೆಯು ಉದಯವಾಗುವ ಪೂರ್ವದಲ್ಲಿ

ಇರುವ ಎರಡು ಕಲ್ಪನೆಗಳ ನಡುವಿನ ಕಲ್ಪನಾರಹಿತ ಸ್ಥಿತಿಯು. ಈ ತುರ್ಯಸ್ಥಿತಿಯನ್ನು ಪಡೆಯುವದು (ಸಾಧಿಸುವದು) ಅತಿ ಕಠಿಣವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಈ ಸ್ಥಿತಿಯನ್ನು ಪಡೆಯಲೇ ಬೇಕಾಗಿದೆ. ಇದು ಅರಿವಿನ ಅವಸ್ಥೆಯ ವಿಶಿಷ್ಟವಾದ ಸ್ಥಿತಿಯು. ಈ ಸ್ಥಿತಿಯಲ್ಲಿ ವಿಶ್ವವು ತೋರುವದಿಲ್ಲ. ಮನಸ್ಸನ್ನು ಅಜ್ಞಾನವು ಆವರಿಸುವದಿಲ್ಲ. ಈ ಸ್ಥಿತಿಯಲ್ಲಿ ಅರಿವಿನ ಆಧಾರದ ಮೇಲೆ ತೋರಿ ಅರಿವನ್ನೇ ಆವರಿಸಿರುವ ಅಜ್ಞಾನವು ತೆಗೆದುಹಾಕಲ್ಪಟ್ಟಿದೆ. ಈ ಅತಿ ಪರಿಶುದ್ಧ ಮನಸ್ಸಿನ ಸ್ಥಿತಿಯಲ್ಲಿ ಅಜ್ಞಾನವೂ, ಅಜ್ಞಾನದಿಂದುಂಟಾದ ಮೂರು ಅವಸ್ಥೆಗಳು (ಗಾಢನಿದ್ರೆ, ಕನಸು, ವ್ಯಾವಹಾರಿಕ ಎಚ್ಚರ) ಇಲ್ಲ. ಅಜ್ಞಾನದ ಮಲಿನತ್ವವನ್ನು ಕಳೆದುಕೊಂಡಂಥ ವರಜಾಗ್ರದ ಮನಸ್ಸಿಗೆ ಮಾನವನ ನಿಜಸ್ವರೂಪವು ಸುಸ್ಪಷ್ಟವಾಗಿ ಅನುಭವಕ್ಕೆ ಬರುವದು. ಇದು ಕಲ್ಪನಾರಹಿತ ಅರಿವಿನ ಸ್ಥಿತಿಯು. ಇದು ಮೌನದಿಂದಿದ್ದು ತಿಳಿವಳಿಕೆಯಿಂದ ಆನಂದವನ್ನು ಅನುಭವಿಸುವಂತಹ ಸ್ಥಿತಿಯು, ಮನಸ್ಸು ಬಹಿರ್ಮುಖವಾದಾಗ ವಿಷಮವಾಗುವದು ಮತ್ತು ಮನಸ್ಸು ಅಂತರ್ಮುಖವಾದಾಗ ಕಲ್ಪನಾರಹಿತ ಮತ್ತು ಸಮವಿರುವದು. ಜೀವಚೈತನ್ಯವು ಪರಮಚೈತನ್ಯವೇ ಇರುವದು. ಆದ್ದರಿಂದ ಜೀವನು ಅರಿವಿನೊಡನೆ ಒಂದಾಗಬೇಕು. ಅರಿವನ್ನು ತಿಳಿಯುವದೆಂದರೆ ಅರಿವೇ ಇರುವದು.

ಮನಸ್ಸಿನ ಸಮತೋಲನ ಸ್ಥಿತಿಯು ಸ್ಥಿರ ಮತ್ತು ನಿಶ್ಚಲವಿದ್ದಾಗ, ತಾನು ತೋರಿಕೆಯ ಅಹಂಭಾವ, ದೇಹಭಾವ ಮತ್ತು ಜಗತ್ತಿಗೆ ಸಾಕ್ಷಿ ಇರುವನೆಂಬ ಸಾಕ್ಷಾತ್ಕಾರವಾಗುವದು. ಈ ಸ್ಥಿತಿಯಲ್ಲಿ ಮೃಗಜಲವು ತನಗೆ ಆಧಾರವಾದ ಮರಭೂಮಿಯನ್ನು ಬಾಧಿಸದಂತೆ ಬೆಳ್ಳಿಯು ತನಗೆ ಆಧಾರವಾದ ಕಪ್ಪೆಯ ಚಿಪ್ಪನ್ನು ಬಾಧಿಸದಂತೆ ತನ್ನ ನಿಜಸ್ವರೂಪದ ಆಧಾರದ ಮೇಲೆ ತೋರಿದ ತೋರಿಕೆಯ ವಿಶ್ವವು ತನ್ನ ನಿಜಸ್ವರೂಪವನ್ನು ಬಾಧಿಸಲಾರದು ಎಂಬುದು ದೃಢನಿಶ್ಚಯವಾಗುವದು. ಈ ಸಾಕ್ಷೀ ಸ್ಥಿತಿಯೂ ಸತ್ಯ ತತ್ವವಲ್ಲ. ಈ ಸಾಕ್ಷೀ ಸ್ಥಿತಿಯು ತನ್ನ ನಿಜಸ್ವರೂಪವನ್ನು ತಿಳಿದುಕೊಳ್ಳಲು ಸಹಾಯಕವಾಗುವದು ಮತ್ತು ಜೀವನನ್ನು ಅರುವು, ಇರುವು, ಆನಂದದಲ್ಲಿ ನೆಲೆನಿಲ್ಲುವಂತೆ ಮಾಡಿ ತಾನೇ ಮಾಜಿ ಹೋಗುವದು. ದೃಶ್ಯವು ಮಾಯವಾದಾಗ ದೃಕ್ಕವೂ ಇಲ್ಲ. ಇದು ಅರಿವಿನಿಂದ ಹೊಂದುವ ಆನಂದಾನುಭವವು. ತುರ್ಯ ಸ್ಥಿತಿಯು ನಮ್ಮ ನಿಜ ಸ್ವರೂಪವನ್ನು ತೋರಿಸುವ ಕನ್ನಡಿಯಂತಿದೆ. ಸ್ವರೂಪ ಜ್ಞಾನಿಗಳು ವ್ಯಾವಹಾರಿಕ ಜೀವನವಿಡೀ ಈ ಸಾಕ್ಷೀ ಸ್ಥಿತಿ (ತುರ್ಯ)ಯಲ್ಲಿರಬಹುದು ಅಥವಾ ತುರ್ಯವನ್ನು ಮೀರಿದ ತುರ್ಯಾತೀತ ಸ್ಥಿತಿ (ತನ್ನ ನಿಜಸ್ವರೂಪ) ಯಲ್ಲಿರಬಹುದು. ತುರ್ಯಾತೀತದಲ್ಲಿರುವವನು ಈ ವ್ಯಾವಹಾರಿಕ ಜಗತ್ತಿಗೆ ಸತ್ತಂತೆಯೇ ಸರಿ. ಏಕೆಂದರೆ ಅವನಿಗೆ ಅಜ್ಞಾನ ದಿಂದುಂಟಾದ ಜಾಗ್ರ, ಕನಸು, ನಿದ್ರೆಗಳಿರುವದಿಲ್ಲ. ತುರ್ಯಸ್ಥಿತಿಯನ್ನು ಸಾಧಿಸಿದವನು ಮುಮುಕ್ಷುಗಳಿಗೆ ಶಾಶ್ವತ ಸುಖವನ್ನು ಹೊಂದುವದಕ್ಕಾಗಿ ಮಾರ್ಗದರ್ಶಕ (ನಂದಾದೀಪ) ನಾಗಬಹುದು



ಅಥವಾ ಆಗಲಿಕ್ಕಿಲ್ಲ. ಇದು ಆ ಜೀವನ್ಮುಕ್ತನ ಮತ್ತು ಅವನೊಡನೆ ಸಂಪರ್ಕಹೊಂದಿದ ಪರಿಸ್ಥಿತಿಗಳನ್ನವಲಂಬಿಸಿದೆ. ಇದೆಲ್ಲವೂ ಪರಸ್ಪರ ಪರಿಸ್ಥಿತಿಗಳನ್ನವಲಂಬಿಸಿದೆ. ಜೀವನ್ಮುಕ್ತನು ಉಳಿದ ಜೀವಿಗಳ ಸಂಪರ್ಕ ಹೊಂದದೇ ತನ್ನ ಸಾಕ್ಷೀ (ತುರ್ಯ) ಸ್ಥಿತಿಯ ಆನಂದದಲ್ಲಿಯೇ ಕಾಲ ಕಳೆಯಬಹುದು ಅಥವಾ ಪ್ರಸಿದ್ಧಿ ಹೊಂದಿ ಮಾನವಕುಲಕ್ಕೇ ಶ್ರೇಷ್ಠ ಸಹಾಯಕನಾಗಬಹುದು.

ಜೀವನ್ಮುಕ್ತನು ಯಾರೆಂಬುದನ್ನು ತಿಳಿದುಕೊಳ್ಳುವದು ಅತಿ ಕಠಿಣವಿದೆ. ಅದರಂತೆ ಅವನನ್ನು ಗುರುತಿಸುವದು ಅತಿ ಸುಲಭವಿದೆ. ಏಕೆಂದರೆ ಜೀವನ್ಮುಕ್ತಿಯನ್ನು ಹೊಂದಲು ಪ್ರಯತ್ನಿಸುವ ಸಾಧಕನ ಸಾಧನಗಳಾದ ವಿವೇಕ, ವೈರಾಗ್ಯಾದಿಗಳು ಜೀವನ್ಮುಕ್ತನ ಲಕ್ಷಣಗಳಾಗಿವೆ. ಯಾವದೇ ಒಬ್ಬ ವ್ಯಕ್ತಿಯು ವಿವೇಕ, ವೈರಾಗ್ಯಗಳನ್ನು ಹೊಂದಿರುವನೋ ಇಲ್ಲವೋ ಎಂಬುದನ್ನು ಕಂಡು ಹಿಡಿಯುವದೂ ಅತಿ ಜಟಿಲ ಸಮಸ್ಯೆಯು, ಏಕೆಂದರೆ ವಿವೇಕ ವೈರಾಗ್ಯಗಳು ಬಾಹ್ಯ ಚಿಹ್ನಗಳಲ್ಲ. ಆದ್ದರಿಂದ ಅವುಗಳನ್ನು ಗುರ್ತಿಸುವದು ಸಾಧ್ಯವಿಲ್ಲ. ವಿವೇಕ ವೈರಾಗ್ಯಗಳು ಗೊತ್ತು ಹಚ್ಚುವಿಕೆಯನ್ನು ಮೀರಿವೆ. ಅದಕ್ಕಾಗಿಯೇ ನೀವು ಜೀವನ್ಮುಕ್ತರೆಂದು ತಿಳಿದುಕೊಂಡವರ ಪೈಕಿ ಅನೇಕರು ಢೋಂಗಿಯಾಗಿರುವರು. ಇಂಥಹ ಢೋಂಗಿ ಜೀವನ್ಮುಕ್ತರೊಡನೆಯ ದೀರ್ಘಕಾಲದ ಸಂಪರ್ಕವು ನಿಮ್ಮನ್ನು ನಿರಾಶರನ್ನಾಗಿ ಮಾಡುತ್ತದೆ. ಈ ರೀತಿಯಾಗಿ ಸಾಧು ಸಂತರೆನಿಸಿಕೊಳ್ಳುವವರು ಅನೇಕರಿದ್ದಾರೆ. ಆದರೆ ಅವರೆಲ್ಲರೂ ನಿರಾಶ್ರಿತರೂ ಹೊಗಳುಭಟ್ಟರೂ ಅಥವಾ ಪರಾವಲಂಬಿಗಳಿರುವರು. ಅನೇಕ ಸಲ ಅವರು ತತ್ವಜ್ಞಾನದ ಅಲ್ಪ ಪರಿಭಾಷೆಯನ್ನು ಸಂಗ್ರಹಿಸಿ ಮಹರ್ಷಿಗಳಾಗಿ ಮೆರೆಯುತ್ತಾರೆ ಮತ್ತು ಸಾಮಾನ್ಯವಾಗಿ ಅತಿ ಚತುರತನದಿಂದ ಜನರನ್ನು ಮೋಸಗೊಳಿಸುತ್ತಾರೆ. ಆದ್ದರಿಂದಲೇ "ಸಾಧುವೇಷದಿಂದಲೇ ಪಾಪಕಾರ್ಯವು ಸಂಭವಿಸುವದು" ಎಂದು ಹೇಳಿದ್ದಾಗಿದೆ. ಆದ್ದರಿಂದ ನಿಜವಾದ ಜೀವನ್ಮುಕ್ತರು ಸಿಗುವದು ದುರ್ಲಭ. ನಿಜವಾದ ಜೀವನ್ಮುಕ್ತರು ಮಾತ್ರ ಮಾನವಕುಲದ ನೈತಿಕ ಮತ್ತು ಆಧ್ಯಾತ್ಮಿಕ ಹಸಿವನ್ನು ಹಿಂಗಿಸುವರು. ಢೋಂಗೀ ಜೀವನ್ಮುಕ್ತರು ಸ್ವರೂಪಾವಸ್ಥಿತಿಯಿಂದ ಅತಿ ದೂರವಿದ್ದು ಅನೇಕ ತತ್ವಶಾಸ್ತ್ರಗಳ ಹುರುಳಿಲ್ಲದ ಚರ್ಚೆಯಿಂದ ಸಾಮಾನ್ಯ ಜನರನ್ನು ಮೋಸಗೊಳಿಸಿ ಮೈಗಳ್ಳತನದ ಜೀವನವನ್ನು ನಡೆಸುವರು. ಇಂಥ ಢೋಂಗೀ ಸಾಧುಗಳ ವಿಷಯದಲ್ಲಿ ನಾವು ಅತಿ ಎಚ್ಚರವಿರಬೇಕು.

ನಿಜವಾದ ಸಂತರು ವಿವೇಕ, ವೈರಾಗ್ಯಗಳನ್ನಲ್ಲದೆ ತಾಳ್ಮೆ, ದಯೆ, ನಿಜ ತತ್ವನಿಷ್ಠೆ ಮುಂತಾದ ಸದ್ಗುಣಗಳನ್ನು ಹೊಂದಿರುತ್ತಾರೆ. ಅವಿವೇಕಯುತ ಮನಸ್ಸಿಗೆ ಮಾತ್ರ ಮೂರವಸ್ಥೆಗಳು. (ಗಾಢನಿದ್ರೆ, ಕನಸು, ವ್ಯಾವಹಾರಿಕ ಜಾಗ್ರ) ಆದ್ದರಿಂದ ಅಜ್ಞಾನಿ ಜೀವನು ಈ ಮೂರವಸ್ಥೆಗಳಲ್ಲಿಯೇ ತಿರುಗಬೇಕಾಗಿದೆ. ಯಾವನು ಮೂರೂ ಅವಸ್ಥೆಗಳನ್ನು ಶುದ್ಧ ಸಾತ್ವಿಕ ಮನಸ್ಸಿನಿಂದ ಮೀರುವನೋ ಅವನಿಗೆ ತುರ್ಯಾವಸ್ಥೆ ಇರುವದು. ಯಾವಾಗ

ಮನಸ್ಸು ವಿವೇಕ ವೈರಾಗ್ಯಗಳ ಮುಖಾಂತರ ಅಂತರ್ಮುಖತೆ ಮತ್ತು ಅಂತರಂಗ ಪರೀಕ್ಷೆಗಳೊಡಗೂಡಿ ತನ್ನ ಚಂಚಲತೆ ಮತ್ತು ಮಲಿನತೆಯನ್ನು ಕಳೆದುಕೊಳ್ಳುವದೋ ಆಗ ತುರ್ಯಾವಸ್ಥೆ ಪ್ರಾಪ್ತವಾಗುವದು. ಶಾಶ್ವತಸುಖವನ್ನು ಹೊಂದಲು ಬರೇ ಮಾತಿನ ಜ್ಞಾನವು ಏನೂ ಪ್ರಯೋಜನವಿಲ್ಲ. ಶಾಶ್ವತ ಸುಖವನ್ನು ಹೊಂದಲು ತುರ್ಯವನ್ನು ಹೊಂದುವದು ಅತ್ಯವಶ್ಯವು. ಆತ್ಮ ನಿರೀಕ್ಷಣೆಯಿಂದ ಮನಸ್ಸಿನೊಳಗಿನ ಕೊಳೆಯನ್ನು ತೆಗೆದು ಹಾಕಬೇಕು. ಮೂರು ಅವಸ್ಥೆಗಳ ಬರೇ ಬೌದ್ಧಿಕ ತರ್ಕ ಮತ್ತು ಶುಷ್ಕ ಚರ್ಚೆಗಳು ಮಾನವನನ್ನು ಶಾಶ್ವತ ಸುಖದಲ್ಲಿ ನೆಲೆ ನಿಲ್ಲುವಂತೆ ಮಾಡಲಾರವು. ಇವೆಲ್ಲವೂ ಆತ್ಮಜ್ಞಾನದ ಸುದ್ದಿಯ ಶೂರನನ್ನಾಗಿ ವಾರ್ತಾ ಇಲಾಖೆಯ ನುರಿತ ಸದಸ್ಯನನ್ನಾಗಿ ಮಾಡಬಲ್ಲವು. ಇವುಗಳಿಂದ ಜೀವನಿಗೆ ಸಾರಿನಲ್ಲಿಯ (ಅಡಿಗೆಯ) ಸೌಟಿನ ಪರಿಸ್ಥಿತಿಯುಂಟಾಗುವದು. ಬರೇ ಬೌದ್ಧಿಕ ಕವಾಯಿತು ಅಥವಾ ಪ್ರಗತಿಯಷ್ಟೇ ಆತ್ಮಸಾಕ್ಷಾತ್ಕರಿಸಿಕೊಳ್ಳಲು ಸಾಕಾಗುವದಿಲ್ಲ. ಮಾನವನು ಅದ್ಭುತ ಬೌದ್ಧಿಕ ಶಕ್ತಿಯುಳ್ಳವನಾಗಿರಬಹುದು. ಆದರೆ ಆತ್ಮಾನುಭವದ ವಿಷಯಕ್ಕೆ ಏನನ್ನೂ ಅರಿಯದವನಿರಬಹುದು. ಬೌದ್ಧಿಕವಾಗಿ ಅತಿ ಶ್ರೇಷ್ಠ ಪ್ರಾವೀಣ್ಯತೆಯನ್ನು ಪಡೆದರೂ ನೀತಿ ಭ್ರಷ್ಟನೂ ಅಧ್ಯಾತ್ಮಶೂನ್ಯನೂ ಇರಬಹುದು.

ಅಧ್ಯಾತ್ಮ ಕ್ಷೇತ್ರದಲ್ಲಿ ತೀಕ್ಷ್ಣ ಬುದ್ಧಿಯ ಬೆಳವಣಿಗೆಯ ಜೊತೆಗೆ ನೈತಿಕ ಬೆಳವಣಿಗೆಯು ಅತ್ಯವಶ್ಯವಿದೆ. ನೈತಿಕ ಬೆಳವಣಿಗೆಯನ್ನು ಕ್ರಮೇಣವಾಗಿ ಸಾಧಿಸಬಹುದು. ಆದರೆ ಅದು ಅತ್ಯವಶ್ಯವು. ಇಲ್ಲದಿದ್ದರೆ ಮನಸ್ಸಿನ ಮಾಲಿನ್ಯವು ಹೋಗಲಾರದ್ದರಿಂದ ತನ್ನ ನಿಜಸ್ವರೂಪ ಹೊಂದುವದಕ್ಕಾಗಿ ಅವಶ್ಯವಾದ ತುರ್ಯಸ್ಥಿತಿಯು ಪ್ರಾಪ್ತವಾಗಲಾರದು. ತನ್ನ ನಿಜ ಸ್ವರೂಪವನ್ನು ಹೊಂದುವದಕ್ಕಾಗಿ ಅವಶ್ಯವಾದ ತುರ್ಯಸ್ಥಿತಿಯು ಪ್ರಾಪ್ತವಾಗಲಾರದು. ತನ್ನ ನಿಜ ಸ್ವರೂಪವನ್ನು ಹೊಂದುವದಕ್ಕಾಗಿ ಅನುಭವದ ಪ್ರಯೋಗಗಳನ್ನು ಪರಿಶುದ್ಧ ಅಂತಃಕರಣದಿಂದ ಮಾತ್ರ ಮಾಡಲು ಸಾಧ್ಯವಾಗುವದು. ಕ್ರಮೇಣ ನೀತಿಪರಿಪಾಲನೆಯಿಂದ ವೈರಾಗ್ಯವು ಬೆಳೆಯುತ್ತ ಹೋಗುವದು. ಈ ನೀತಿ ನಿಯಮಗಳ ಪಾಲನೆಯು ವಿವೇಕದಿಂದ ಕೂಡಿದ್ದಾದರೆ ಅಂತರ್ಮುಖತ್ವಕ್ಕೆ ಅತ್ಯವಶ್ಯವಾದ ನಿರ್ಮೋಹವು ಸಾಧಿಸುವದು. ನಂತರ ಆತ್ಮ ನಿರೀಕ್ಷಣೆಯು ಸುಲಭಸಾಧ್ಯವಾಗುವದು. ಆತ್ಮನಿರೀಕ್ಷಣೆಯು ಆನಂದಾನುಭೂತಿಯ ಪ್ರಯೋಗಗಳನ್ನು ಮಾಡಲು ಪ್ರೇರೇಪಿಸುವದು, ಈ ಆನಂದಾನುಭೂತಿಯ ಪ್ರಯೋಗವು ಮಾನವಜೀವನದ ಪರಮ ಪುರುಷಾರ್ಥವಾದ ತುರ್ಯಾವಸ್ಥೆಯನ್ನು ಹೊಂದುವದರ ಮುಖಾಂತರ ಶಾಶ್ವತ ಶಾಂತಿಯನ್ನು (ಸ್ವರೂಪಾವಸ್ಥಿತಿಯನ್ನು) ಹೊಂದುವಂತೆ ಮಾಡುವದು. ನೀತಿ ಪಾಲನೆಯೆಂದರೆ ಸ್ವಾರ್ಥ ತ್ಯಾಗದ ಮೊದಲನೆಯ ಘಟ್ಟವು. ಈ ಪ್ರಾಥಮಿಕ ಘಟ್ಟದ ಸ್ವಾರ್ಥತ್ಯಾಗವು ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯ ಸಹಕಾರಕ್ಕೆ ಅತ್ಯವಶ್ಯವಿರುತ್ತದೆ . ಮಾನವ ಸಮಾಜವು ಸುಸೂತ್ರ



ರೀತಿಯಿಂದ ನಡೆಯಲು ಸಮಾಜದಲ್ಲಿರುವ ಪ್ರತಿಯೊಬ್ಬ ಮಾನವನು ತನ್ನ ಸ್ವಾರ್ಥವನ್ನು ಸ್ವಲ್ಪಮಟ್ಟಿಗಾದರೂ ತ್ಯಾಗ ಮಾಡಬೇಕಾಗುವದು. ಸಮಾಜದಲ್ಲಿಯ ಪ್ರತಿಯೊಬ್ಬ ಜೀವನು ಸ್ವಲ್ಪಾದರೂ ಸ್ವಾರ್ಥತ್ಯಾಗವನ್ನು ಮಾಡದಿದ್ದರೆ ಸಮಾಜದಲ್ಲಿಯ ಜೀವಿಗಳ ಆಸೆಗಳು ಒಂದಕ್ಕೊಂದು ಅತ್ಯಂತ ವಿರೋಧಿಯಾಗಿ ಜೀವಿಗಳು ಸಮಾಜದಲ್ಲಿ ಜೀವಿಸಲು ದೊಡ್ಡ ಹೋರಾಟವೇ ಪ್ರಾರಂಭವಾಗುವದು. ಏಕತ್ರಕುಟುಂಬಗಳು ಸುಸೂತ್ರವಾಗಿ ನಡೆಯಲು ಸ್ವಲ್ಪ ಮಟ್ಟಿಗಾದರೂ ಸ್ವಾರ್ಥ ತ್ಯಾಗವು ಅತ್ಯವಶ್ಯವಿದೆ. ಸ್ವಾರ್ಥ ತ್ಯಾಗವು ಏಕತ್ರ ಕುಟುಂಬದ ಆಧಾರಸ್ತಂಭವು. ಕುಟುಂಬದ ವ್ಯವಹಾರವು ಸ್ವಾರ್ಥತ್ಯಾಗದ ಆಧಾರದ ಮೇಲೆ ನಡೆದರೆ ಕುಟುಂಬದ ಎಲ್ಲ ಜೀವಿಗಳ ಕಲ್ಯಾಣವಾಗುವದು. ಇಲ್ಲದಿದ್ದರೆ ಏಕತ್ರ ಕುಟುಂಬವು ಒಡೆದು ಹೋಗುವದು. ವಿಶ್ವವೇ ಒಂದು ಕುಟುಂಬವೆಂದು ಸಾಮಾನ್ಯವಾಗಿ ಎಲ್ಲ ಧಾರ್ಮಿಕ, ಅರ್ಥಶಾಸ್ತ್ರದ, ಸಾಮಾಜಿಕ, ತಾತ್ವಿಕ ಮತ್ತು ರಾಜಕೀಯ ಕಟ್ಟೆಗಳಲ್ಲಿ ಪ್ರಾಸಂಗಿಕ ಮತ್ತು ಅಪ್ರಾಸಂಗಿಕವಾಗಿ ಅತಿ ದೊಡ್ಡ ಮಾತುಗಳನ್ನು ಆಡುತ್ತಾರೆ. ಆದರೆ ದಿನವಿಡೀ ಕಪಟ ಮತ್ತು ಸ್ವಾರ್ಥೋನ್ನತಿಯ ಕೆಲಸಗಳಲ್ಲಿಯೇ ತೊಡಗುತ್ತಾರೆ. ಅದಕ್ಕಾಗಿಯೇ "ಅನಾಯಾಸವಾಗಿ ವಿಷಯಾದಿಗಳು ದೊರೆತರೆ ಪರಿಶ್ರಮ ಪಡುವದೇಕೆ" ಎಂಬ ರೂಢಿಯ ಮಾತು ಬಂದಿದೆ. ಇದರಿಂದ ಸಮಾಜವು ಒಡೆದು ಚೂರು ಚೂರಾಗುವದು. ಜಗತ್ತಿನ ಎಲ್ಲ ಕಡೆಗಳಲ್ಲಿಯೂ ಮಾನವರು ಸಾಮಾನ್ಯವಾಗಿ ನೀತಿ ಹೀನವಾದ ಜೀವನವನ್ನು ಸಾಗಿಸುವದರಿಂದ ಅವರು ಅತಿ ಹೆಚ್ಚಿನ ದುಃಖಕ್ಕೀಡಾಗಿದ್ದಾರೆ. ಇದಕ್ಕಾಗಿ ಇತಿಹಾಸದ ಪುಟಗಳನ್ನು ತಿರುವಿ ನೋಡುವ ಅವಶ್ಯಕತೆಯಿಲ್ಲ. ಪರೋಪಕಾರ, ತ್ಯಾಗ ಮುಂತಾದ ಗುಣಗಳನ್ನು ನಾವು ಮೊಟ್ಟ ಮೊದಲಿಗೆ ಮನೆಯಲ್ಲಿಯೇ ಕಲಿಯುತ್ತೇವೆ. ಸತ್ಯ ಅಥವಾ ಪ್ರಾಮಾಣಿಕತೆಯು ಎಲ್ಲ ಕಾಲಗಳಲ್ಲಿಯೂ, ಎಲ್ಲ ದೇಶಗಳಲ್ಲಿಯೂ, ಎಲ್ಲ ಜೀವಿಗಳಿಗೂ ಒಂದೇ ಇರುವದು. ಮಾನವನು ಅಧ್ಯಾತ್ಮ ವಿದ್ಯೆಯ ಪ್ರಥಮ ಪಾಠಗಳಾದ ನೀತಿನಿಯಮಗಳನ್ನೇ ಪಾಲಿಸದಿರುವಾಗ ಅವನು ಅಧ್ಯಾತ್ಮ ಜೀವನದ ಉನ್ನತಮಟ್ಟಕ್ಕೇರುವದು ಹೇಗೆ ಸಾಧ್ಯವಿದೆ ?

ಮಾನವರು ಮನಃಪೂರ್ವಕವಾಗಿ ಸ್ವಾರ್ಥತ್ಯಾಗವನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕು. ಬಾಲ್ಯದಿಂದಲೇ ನೀತಿ ಮತ್ತು ಸುಖಜೀವನದ ಮೂಲವಾದ ಸ್ವಾರ್ಥತ್ಯಾಗವನ್ನು ಮಕ್ಕಳಿಗೆ ಕಲಿಸಬೇಕು. ಇದರಿಂದ ಮಾನವನು ತನ್ನ ಜನ್ಮಸಿದ್ಧ ಹಕ್ಕಾದ ಶಾಶ್ವತ ಸುಖವನ್ನು ಈಗಲೇ ಇಲ್ಲಿಯೇ ಹೊಂದಲು ಸಾಧ್ಯವಾಗುವದು. ಎಲ್ಲ ಮಾನವರಿಗೂ ಆತ್ಮನ ಏಕತ್ವವನ್ನು ವಿವರಿಸಬೇಕು. ಯಾವದು ಸುಖದಾಯಕವು ಮತ್ತು ಯಾವದು ದುಃಖದಾಯಕವು ಎಂಬ ವಿಚಾರವೇ ವಿವೇಕದ ತಳಹದಿ. ಯಾರಿಗೆ ಅಧ್ಯಾತ್ಮ ವಿದ್ಯೆಯಲ್ಲಿ ಆಸಕ್ತಿ ಇಲ್ಲವೋ ಅವರಿಗೆ ಒತ್ತಾಯದಿಂದ ಅಧ್ಯಾತ್ಮವಿದ್ಯೆಯನ್ನು ತಿಳಿಸಿದರೆ ಅದೆಲ್ಲವೂ ನಿಷ್ಫಲವಾಗುವದು.

ವ್ಯಾವಹಾರಿಕ ಪ್ರಪಂಚದ ವಿಷಯವಸ್ತುಗಳ ಮತ್ತು ಪರಿಸ್ಥಿತಿಗಳ ಲೋಭವು ಅನಂತ ದುಃಖಕ್ಕೀಡುಮಾಡುವದೆಂಬುದನ್ನು ನಾವು ಖಾತ್ರಿ ಮಾಡಿಕೊಳ್ಳಬೇಕು. ಇಹಲೋಕದ ವಿಷಯಗಳ ಭೋಗದ ಮುಖಾಂತರ ಶಾಶ್ವತವಾದ ಸುಖವನ್ನು ಹೊಂದಬೇಕೆಂಬ ಆಶೆಯೇ ದುಃಖಕ್ಕೆ ಮೂಲ ಕಾರಣವು. ಇದು ನಮಗೆ ಮನವರಿಕೆಯಾದರೆ ವಿಷಯಾಸಕ್ತಿಯಿಂದ ವಿಷಯಸುಖವನ್ನು ಬಯಸಿ ದುಃಖಕ್ಕೆ ಯಾಕೆ ವಶವಾಗಬೇಕು ? ಪರರಿಗೆ ಪೀಡೆ ಕೊಟ್ಟು ಅದಕ್ಕನುಗುಣವಾಗಿ ಹೆಚ್ಚಿನ ದುಃಖಕ್ಕೆ ಯಾಕೆ ಗುರಿಯಾಗಬೇಕು, ಪರರೊಡನೆ ಯಾಕೆ ದ್ವೇಷವನ್ನು ಬೆಳೆಸಿಕೊಳ್ಳಬೇಕು. ಇದರ ಬದಲಾಗಿ ಪರರಿಗೆ ಪೀಡೆ ಕೊಡುವದನ್ನು ಬಿಟ್ಟು ವಿಷಯಾಸಕ್ತಿಯನ್ನು ಕಳೆದುಕೊಂಡು ಸುಖಿಯಾಗಿದ್ದು ಪರರಿಗೆ ಕಲ್ಯಾಣವನ್ನೇಕೆ ಉಂಟುಮಾಡಬಾರದು ಎಂಬ ವಿಚಾರವು ಉದಯವಾಗುವದು.

ಅಹಂಕಾರ ತ್ಯಾಗವೇ ಶ್ರೇಷ್ಠ ತ್ಯಾಗವು. ಅಹಂಕಾರವು ತನ್ನ ವೈರಿ ತಾನೇ ಆಗಿರುವದು. ಅಹಂಕಾರವು ತನ್ನ ಸ್ವರ್ಗ ನರಕಗಳನ್ನು ತಾನೇ ಉಂಟು ಮಾಡಿಕೊಳ್ಳುವದು. ಅಹಂಕಾರವು ಅಂತರ್ಮುಖತ್ವವನ್ನು ಹೊಂದಿ ಸಚ್ಚಿದಾನಂದದಲ್ಲಿ ನೆಲೆ ನಿಂತರೆ ಸ್ವರ್ಗವನ್ನು ಹೊಂದುವದು. ಬಾಹ್ಯ ಪ್ರವೃತ್ತಿಯನ್ನು ಹೊಂದಿ ವಿಷಯಾಸಕ್ತಿಯಿಂದ ಚಂಚಲವಾದರೆ ನರಕವನ್ನು ಹೊಂದುವದು. ಆದ್ದರಿಂದ ಸುಖದಿಂದಿರುವದಕ್ಕಾಗಿ ಮನಸ್ಸಿನ ಬಹಿರ್ಮುಖತೆ ಮತ್ತು ಚಂಚಲತೆಯನ್ನು ತ್ಯಾಗ ಮಾಡಬೇಕು. ಆದ್ದರಿಂದ ಮನಸ್ಸಿನ ಬಾಹ್ಯಪ್ರವೃತ್ತಿಯನ್ನು ತ್ಯಾಗ ಮಾಡಿ ವಿವೇಕದಿಂದ ಮನಸ್ಸಿನಲ್ಲಿಯ ವಿಷಯ ವಾಸನೆಗಳನ್ನು ನಾಶ ಮಾಡಿ, ಮನಸ್ಸಿನ ಚಂಚಲತೆಯನ್ನು ಕಳೆದುಕೊಂಡವನು ಸಂನ್ಯಾಸಿಯು. ಆದರೆ ಬರೇ ವೇಷ ಅಥವಾ ವೇಷದ ಬಣ್ಣವನ್ನು, ದೇಹವು ಇರುವ ಸ್ಥಳವನ್ನು, ತಿನ್ನುವ ಪದಾರ್ಥಗಳನ್ನು, ಜನರೂಢಿಯ ಜೀವನವನ್ನು ಬದಲಿ ಮಾಡುವವನು ಸಂನ್ಯಾಸಿಯಲ್ಲ. ಗಾಳಿಗತಿಯನ್ನು ತೋರಿಸುವ ಯಂತ್ರದಂತೆ ಕಾಲಕ್ಕೆ, ದೇಶಕ್ಕೆ ತಕ್ಕಂತೆ ಜೀವನದ ರೀತಿಯನ್ನು ಬದಲಿಮಾಡುವದು ಸುಲಭ ಸಾಧ್ಯವು. ಆದರೆ ಇದು ಸನ್ಯಾಸವಲ್ಲ. ಇಹಪರ ಭೋಗದ ಆಸಕ್ತಿಯು ನಾಶವಾದಾಗಲೇ ಮನಸ್ಸು ಶಾಂತವಾಗುವದು. ಬಾಹ್ಯದ್ದೇನನ್ನೂ ಅವಲಂಬಿಸದೆ ನಾವು ಶಾಶ್ವತವಾಗಿ ಸುಖಿಗಳಾಗಿದ್ದೇವೆಯೇ ಎಂಬುದನ್ನು ನೋಡಿಕೊಳ್ಳಬೇಕು. ಜೀವನು ಸುಖಕ್ಕಾಗಿ ಬಾಹ್ಯದ್ದೇನನ್ನಾದರೂ ಅವಲಂಬಿಸಿದರೆ ಅದು ಸನ್ಯಾಸವಲ್ಲ. ಬಾಹ್ಯ ವಿಷಯಗಳನ್ನು ಮತ್ತು ಮನಸ್ಸಿನಲ್ಲಿಯ ಬಾಹ್ಯ ವಿಷಯಗಳ ವಾಸನೆಗಳನ್ನು ಅವಲಂಬಿಸದೆ ಇರುವದೇ ಸಂನ್ಯಾಸವು. (ಮನಸ್ಸಿನಲ್ಲಿ ಹಿಡಿದದ್ದೆಲ್ಲವನ್ನು ಬಿಡುವದೇ ಸಂನ್ಯಾಸವು). ಈ ಸಂನ್ಯಾಸದಲ್ಲಿ ಎಲ್ಲವನ್ನು ತ್ಯಾಗ ಮಾಡಿದೆನು ಎಂಬ ಅಹಂಕಾರವೇ ತ್ಯಾಗಮಾಡಲ್ಪಟ್ಟಿದೆ. ಮನಸ್ಸು ಶಾಶ್ವತಸುಖವನ್ನು ಹೊಂದಬೇಕಾಗಿದೆ. ಆದರೆ ತಲೆ ಬುರುಡೆ, ಮೊಳಕಾಲು ಪರಟೆ, ಅರಣ್ಯ ಅಥವಾ ದೇಹದ ಮೇಲಿನ ಬಟ್ಟೆಗಳು ಶಾಶ್ವತ ಶಾಂತಿಯನ್ನು ಹೊಂದಬೇಕಾಗಿಲ್ಲ. ಮನಸ್ಸೇ ತನ್ನ ರಾಗ ದ್ವೇಷಾದಿ ಮಲಿನತ್ವವನ್ನು ಕಳೆದುಕೊಳ್ಳುವ ತಪವನ್ನು ಆಚರಿಸಿ



ಪರಿಶುದ್ಧವಾಗಿ ಶಾಶ್ವತ ಸುಖವನ್ನು ಹೊಂದಬೇಕಾಗಿದೆ. ತಲೆ ಬುರುಡೆ, ಮೊಳಕಾಲು ಪರಟೆ ಅಥವಾ ದೇಹದ ಮೇಲಿನ ಬಟ್ಟೆಗಳು ತಮ್ಮ ರಾಗ, ದ್ವೇಷ, ಲೋಭಗಳನ್ನು ತೆಗೆದು ಹಾಕುವ ತಪವನ್ನಾಚರಿಸಿ ಪರಿಶುದ್ಧವಾಗಿ ಶಾಶ್ವತ ಸುಖವನ್ನು ಹೊಂದಬೇಕಾಗಿಲ್ಲ. ನೈತಿಕ ಮತ್ತು ಪಾರಮಾರ್ಥಿಕ ನಿಯಮಗಳನ್ನು ಪಾಲಿಸಿದರೆ ನಾವು ಶಾಶ್ವತ ಸುಖ ಪಡೆಯಲು ಅರ್ಹರಾಗುತ್ತೇವೆ, ಇಲ್ಲದಿದ್ದರೆ ತಿರುಕನ ಸ್ಥಿತಿಗಿಳಿಯುತ್ತೇವೆ.

# ಪ್ರಥಮಾನುಭೂತಿ

ಅನುಭವಕ್ಕೆ ಯಾವುದೇ ಅನ್ಯ ಪ್ರಮಾಣದ ಅವಶ್ಯಕತೆಯಿಲ್ಲ. ಅನುಭವವು ತನ್ನಷ್ಟಕ್ಕೆ ತಾನೇ ಪೂರ್ಣವಿದೆ. ಅದು ಸರಿ ಇದೆಯೋ ಇಲ್ಲವೋ ಎಂಬುದನ್ನು ನಿಶ್ಚಯಿಸುವದಕ್ಕಾಗಿ ಬೇರೆಯವರ ಅಭಿಪ್ರಾಯದ ಅವಶ್ಯಕತೆಯಿದೆಯೇ ? ಪ್ರಥಮಾನುಭೂತಿಯಲ್ಲಿ ಯಾವುದಾದರೂ ವಸ್ತು ಅಥವಾ ವ್ಯಕ್ತಿ ಇರುವನೇ ? ಅದರಲ್ಲಿ ಯಾವುದಾದರೂ ವ್ಯಕ್ತಿಯು ಇದ್ದದ್ದಾದರೆ ಅಥವಾ ಇದ್ದಾರೆಂದು ಯಾರಾದರೂ ಹೇಳಿದರೆ ಅದು ಪ್ರಥಮಾನುಭೂತಿಯೇ ಅಲ್ಲ. ಏಕೆಂದರೆ ಅದರಲ್ಲಿ ಯಾರೂ ಇರಲಾರರು. ಪ್ರಥಮಾನುಭೂತಿಯೆಂದರೆ ತರ್ಕ ಅಥವಾ ವಿಶ್ಲೇಷಣೆರಹಿತ ಸಾಕ್ಷಾತ್ ಜ್ಞಾನವು.

ತನ್ನ ಅನುಭವದ ಲೇಖನ, ಭಾಷಣಗಳಿಗಾಗಿ ಬೇರೆಯವರ ಅಭಿಪ್ರಾಯವನ್ನು ಕೇಳುವದು ನಿಷ್ಪ್ರಯೋಜಕವು. ತರ್ಕ ಅಥವಾ ವಿಶ್ಲೇಷಣೆ ರಹಿತ ಅನುಭವಕ್ಕಾಗಿ ಉಳಿದವರ ಅಭಿಪ್ರಾಯವನ್ನು ಕೇಳುವದು ಹೇಗೆ ಸಾಧ್ಯ ? ಅನುಭವಕ್ಕಾಗಿ ಉಳಿದವರ ಅಭಿಪ್ರಾಯವನ್ನು ಕೇಳುವದು ಹಾಸ್ಯಾಸ್ಪದ ಅಥವಾ ತಮಾಷೆಯು. ಪ್ರಥಮಾನುಭೂತಿಯಲ್ಲಿ ಯಾರೂ ಇಲ್ಲ, ದೇಶ, ಕಾಲ, ಕಾರಣಗಳಿಲ್ಲ, ತ್ರಿಪುಟಿಯಿಲ್ಲ, ಅನ್ಯ ಕಲ್ಪನೆಗಳಿಲ್ಲ, ಜ್ಞಾನೇಂದ್ರಿಯಗಳಿಲ್ಲ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿಲ್ಲ, ಯಾವದೇ ಕ್ರಿಯೆಯ ತಿಳಿವಳಿಕೆಯಿಲ್ಲ.

ಶಾಶ್ವತ ಸುಖ ಹೊಂದಲು ಪ್ರಥಮಾನುಭೂತಿಯು ಪರಮಶ್ರೇಷ್ಠ ಸಾಧನವು, ಮಾರ್ಗದೀಪವು, ನಂದಾದೀಪವು, ಶಾಶ್ವತ ಸುಖವನ್ನು ಹೊಂದಲು ಪ್ರಥಮಾನುಭೂತಿಯನ್ನು ನೆನಪಿಗೆ ತಂದುಕೊಳ್ಳುವದೇ ಸಾಧನ. ಜಾತಿ, ಮತ, ಸಂಪ್ರದಾಯ ಶ್ರದ್ಧೆ, ಮೂರ್ತವಸ್ತು, ಬಾಹ್ಯಾಡಂಬರ, ಲಿಂಗ, ವಯಸ್ಸು, ದೇಶ, ಪ್ರದೇಶ ಮುಂತಾದವುಗಳ ನಿರ್ಬಂಧವಿಲ್ಲದೆ ಮಾನವರೆಲ್ಲರೂ ಪ್ರಥಮಾನುಭೂತಿಯ ಮೂಲಕ ಶಾಶ್ವತಸುಖವನ್ನು ಹೊಂದಲು ಬರುತ್ತದೆ. ಪ್ರಥಮಾನುಭೂತಿಯನ್ನು ನೆನಪಿಗೆ ತಂದುಕೊಳ್ಳುವ ಸಾಧನದಿಂದ ಮಾನವನು ಸುಖಿಯೂ, ಮುಕ್ತನೂ ಆಗಲು ಬರುವದು. ಯಾವುದರ ಗುರುತು, ಅನುಭವ ಇರುವದೋ ಅದನ್ನು ನೆನಪು ಮಾಡಿಕೊಳ್ಳಲು ಬರುವದು. ಅನುಭವವಿಲ್ಲದೆ ನೆನಪಿಗೆ ತಂದುಕೊಳ್ಳುವದು ಅಸಾಧ್ಯ. ಸುಖ ಬಯಸುವವನಿಗೆ ಸುಖದ ಗುರುತು, ಸುಖವನ್ನು ಬಯಸುವದಕ್ಕಿಂತ ಮೊದಲೇ ಇರಲಿಕ್ಕೇ ಬೇಕು. ನಮಗೆ ಯಾವುದರ ಗುರುತಿದೆಯೋ ಮತ್ತು ಯಾವುದನ್ನು ನೆನಪಿಗೆ ತಂದುಕೊಳ್ಳಲು ಸಾಧ್ಯವೋ, ಅದು ನಮಗೆ ಬೇಕಾಗಿದ್ದರೆ, ನಾವು ಅದನ್ನು ಬಯಸಲು ಬರುವದು. ಮಾನವನು ಸ್ವತಃ ವಿಚಾರದಿಂದ ಗುರುತಿಲ್ಲದ್ದನ್ನು ಮತ್ತು ನೆನಪಿಗೆ ತಂದುಕೊಳ್ಳಲಾರದ್ದನ್ನು ಬಯಸಲು ಬರುತ್ತದೆಯೋ



ಇಲ್ಲವೋ ಎಂಬುದನ್ನು ತಾನೇ ಕಂಡುಕೊಳ್ಳಬೇಕು. ಎಲ್ಲರಿಗೂ ಆನಂದದ ಗುರುತು ಇದೆ ಮತ್ತು ಆನಂದವನ್ನು ನೆನಪಿಗೆ ತಂದುಕೊಳ್ಳಲು ಬರುತ್ತದೆ. ಆದ್ದರಿಂದ ಸುಖದ ಬಯಕೆ ಇದೆ. ಪ್ರಪ್ರಥಮ ಅನುಭವವು ಆನಂದವೇ, ದುಃಖವಲ್ಲ. ಅತಿ ಕೀಳು ಪ್ರಾಣಿಗಳಿಗೂ ಅವುಗಳ ಪ್ರಥಮಾನುಭೂತಿಯಲ್ಲಿ ಆನಂದದ ಅನುಭವವಿದೆ. ಅವುಗಳು ಕೂಡ ತಮ್ಮದೇ ಆದ ರೀತಿಯಲ್ಲಿ ವಿಷಯೇಂದ್ರಿಯ ಸಂಪರ್ಕ ಭೋಗದಿಂದ ಮತ್ತು ನಿದ್ರೆಯಿಂದ ಸುಖ ಹೊಂದಲು ಪ್ರಯತ್ನಿಸುತ್ತವೆ. ಇದನ್ನು ನಾವು ಅವುಗಳಿಗೆ ಕಲಿಸುವ ಅವಶ್ಯಕತೆ ಇಲ್ಲ. ಅವು ತಮ್ಮ ತಿಳಿವಳಿಕೆಯಿಂದಲೇ ಹೀಗೆ ಪ್ರಯತ್ನಿಸುತ್ತವೆ. ಸಚ್ಚಿದಾನಂದದಿಂದ ಅಹಂಭಾವವು ಉದಯವಾಗುವಾಗ ಯಾರೂ ಇರಲಿಲ್ಲ. ಆದ್ದರಿಂದ ಆನಂದವನ್ನು ಯಾರೂ ಕಲಿಸಿಲ್ಲ ಮತ್ತು ಸುಖದ ಬಯಕೆಯನ್ನು ಕಲಿಸುವದಕ್ಕಾಗಿ ಯಾರ ಅವಶ್ಯಕತೆಯೂ ಇಲ್ಲ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳನ್ನು ಕಲಿಸಲು ಬರುತ್ತದೆ. ಆದರೆ ಸುಖವನ್ನು ಯಾರೂ ಕಲಿಸಲಾರರು. ಗಾಢನಿದ್ರೆಯಲ್ಲಿ ಆನಂದವನ್ನು ಹೊಂದುವದನ್ನು ಜೀವಿಗಳಿಗೆ (ಮಾನವ ಮತ್ತು ಮಾನವೇತರ) ಯಾರು ಕಲಿಸಿದರು ? ಅವುಗಳು ತಮ್ಮ ಆನಂದದ ಅನುಭವಕ್ಕನುಸಾರವಾಗಿ ತಾವೇ ಗಾಢ ನಿದ್ರೆಗೆ ಹೋಗುವದಿಲ್ಲವೆ ? ಯಾರಾದರೂ ಅಥವಾ ನೀವು ಅವುಗಳಿಗೆ ಆನಂದವನ್ನು ಮತ್ತು ಗಾಢ ನಿದ್ರೆಯನ್ನು ಕಲಿಸಬಹುದೇ ?

ಮಾನವನು ವಿವೇಕವುಳ್ಳ ಪ್ರಾಣಿಯು. ಅವನು ತನ್ನ ವಿವೇಕದ ಸದುಪಯೋಗದಿಂದ, ಪ್ರಥಮಾನುಭೂತಿಯನ್ನು ನೆನಪಿಸಿಕೊಂಡು, ಪ್ರಥಮಾನುಭೂತಿಯಲ್ಲಿ ಇಲ್ಲದ್ದೆಲ್ಲವನ್ನು ಕೈ ಬಿಡಲು ಬರುತ್ತದೆ. ಮಾನವನು ಬಂಧನದಿಂದ ಮುಕ್ತನಾಗಬೇಕಾದರೆ ಇಹಪರದ ಎಲ್ಲ ಪ್ರಕಾರದ ಮೋಹ ಆಸಕ್ತಿಗಳನ್ನು ಬಿಡಬೇಕಾಗುವದು. ಅವನು ವಿವೇಕದಿಂದ, ಇಹಪರಗಳಲ್ಲಿ ಹಿತವಾವುದು, ಅಹಿತವಾವುದು , ಶಾಶ್ವತವಾವುದು, ಕ್ಷಣಿಕವಾವುದು, ಎಂಬುದನ್ನು ವಿವೇಚಿಸಿ ತಿಳಿದುಕೊಳ್ಳಬೇಕು.

ಜೀವನ್ಮುಕ್ತಿಯನ್ನು ಹೊಂದದವರ ಉಪದೇಶವು ಗೌಣವು. ಆತ್ಮಸಾಕ್ಷಾತ್ಕಾರವನ್ನು ಹೊಂದಿದವರು ಮಾತ್ರ ಶಾಶ್ವತ ಸುಖವನ್ನು ಹೊಂದುವದಕ್ಕಾಗಿ ಸಹಾಯಕವಾಗಬಲ್ಲರು. ಆತ್ಮನಿಷ್ಠರು ಮುಮುಕ್ಷುಗಳಿಗೆ ಪ್ರಥಮಾನುಭೂತಿಯನ್ನು ನೆನಪಿಗೆ ತಂದುಕೊಡುವರು. ಎಲ್ಲಿಯೋ ಒಬ್ಬರಿಗೆ ( ಅನೇಕ ಜನ್ಮಗಳಿಂದ ಸ್ವರೂಪದ ಅಭ್ಯಾಸದಲ್ಲಿ ತೊಡಗಿದವರಿಗೆ) ಅಪವಾದದ ರೀತಿಯಲ್ಲಿ ಗುರುಗಳಅವಶ್ಯಕತೆ ಇರಲಿಕ್ಕಿಲ್ಲ. ಇಂಥವರು ತಮ್ಮ ಪ್ರಥಮಾನುಭೂತಿಯನ್ನು ನೆನಪಿಗೆ ತಂದುಕೊಂಡು, ತಮ್ಮ ನಿಜಸ್ಥಿತಿಯನ್ನು ಸಾಕ್ಷಾತ್ಕರಿಸಿಕೊಳ್ಳುವರು. ಒಂದು ವೇಳೆ ಗುರುಗಳಿಂದ ಉಪದೇಶ ವನ್ನು ಪಡೆದರೂ, ಯಾವುದೇ ಉಪದೇಶವು ಪ್ರಥಮಾನುಭೂತಿಯಲ್ಲಿ ಇರಲಾರದು ಎಂಬುದನ್ನು

ತಿಳಿದುಕೊಂಡು ಗುರುಗಳಿಂದ ಪಡೆದ ಉಪದೇಶವೆಲ್ಲವನ್ನೂ ಕೈಬಿಡಬೇಕು. ಸಾಧಕನು ಯಾವದೇ ಗುರುಗಳಿಂದ ಉಪದೇಶವನ್ನು ಪಡೆದರೂ, ಪ್ರಥಮಾನುಬೂತಿಯ ಸೂತ್ರವನ್ನೇ ಅನುಸರಿಸಬೇಕು. ಇದೆಲ್ಲವೂ ವಿವೇಕಯುತ ಮನಸ್ಸಿನ ಕೆಲಸ. ಸತ್ಯವು ನಿರುಪಾಧಿಕವು, ಆದ್ದರಿಂದ ಸತ್ಯವನ್ನು ನಿರುಪಾಧಿಕ ಆನಂದ ಸೂತ್ರ (ಪ್ರಥಮಾನುಭೂತಿ)ದಿಂದಲೇ (ಇಹಪರದ ಎಲ್ಲ ಉಪಾಧಿಗಳನ್ನು ಹೊರತು ಪಡಿಸಿ) ಹೊಂದಲು ಬರುವದು. ಶಿಕ್ಷಣ, ಲಿಂಗ, ದೇಶ – ಪ್ರದೇಶ, ಶ್ರದ್ಧೆ ಮುಂತಾದವುಗಳ ನಿರ್ಬಂಧವಿಲ್ಲದೆ ನಿದ್ರೆಯನ್ನು ಹೊಂದಲು ಬರುವಂತೆ, ಮಾನವ ಮಾತ್ರರೆಲ್ಲರೂ ಸತ್ಯವನ್ನು ಹೊಂದಲು ಬರುವದು. ಸತ್ಯವನ್ನು ಹೊಂದುವ ಅರ್ಹತೆಯೆಂದರೆ, ಉತ್ಕಟ ಇಚ್ಛೆ, ದೃಢ ನಿಶ್ಚಯ, ವಿವೇಕವೈರಾಗ್ಯಗಳ ಮುಖಾಂತರ ರಾಗ – ದ್ವೇಷಾದಿ ಮಲಿನತ್ವವನ್ನು ಕಳೆದುಕೊಂಡ ಪರಿಶುದ್ಧ ಮನಸ್ಸು.

ಎಲ್ಲಕ್ಕೂ ಪ್ರಥಮ ಅನುಭವವು ಸಚ್ಚಿದಾನಂದವೆಂಬುದು ಸಾಮಾನ್ಯವಾಗಿ ಯಾರಿಗೂ ನೆನಪಿಲ್ಲ. ಎಲ್ಲ ಜೀವಿಗಳು ಆನಂದದಿಂದ,ಆನಂದಾನುಭವದೊಡನೆ ಉದಯವಾಗಿವೆ. ಜೀವಿಗಳು ತಮ್ಮ ಮೂಲವನ್ನು ಪೂರ್ಣ ಮರೆಯದೆ ಇರುವದರಿಂದ, ಆನಂದದಿಂದ ಬೇರೆ ಇದ್ದಾಗ, ಆನಂದವನ್ನು ಬಯಸುತ್ತವೆ. ಆದ್ದರಿಂದ ಜೀವಿಗಳು ಜ್ಞಾನೇಂದ್ರಿಯ ವಿಷಯವಸ್ತುಗಳಲ್ಲಿ ಸುಖವನ್ನು ಹುಡುಕುತ್ತವೆ. ಆದರೆ ಅವುಗಳು ವಿಷಯವಸ್ತುಗಳ ಭೋಗದಿಂದ ಇನ್ನೊಮ್ಮೆ ಸುಖದ ಆಸೆ ಉದಯಿಸದಂಥ, ಶಾಶ್ವತ ಸುಖವನ್ನು ಪಡೆಯದ್ದರಿಂದ, ಚಿಂತೆ ಮತ್ತು ನಿರಾಶೆಗೆ ಒಳಗಾಗಿವೆ. ವಿಷಯೇಂದ್ರಿಯ ಸಂಪರ್ಕ ಭೋಗದಿಂದುಂಟಾದ ಸುಖವು ಬರೇ ತೋರಿ ಹೋಗುವಂಥಹದು, ಉಳಿಯುವದಿಲ್ಲ. ಜೀವನಿಗೆ ಯಾರೂ ಹೊಸದಾಗಿ ಆನಂದದ ಗುರುತನ್ನು ಮಾಡಿ ಕೊಡಲಾರರು. ಸಚ್ಚಿದಾನಂದದಿಂದ ಪ್ರಪ್ರಥಮವಾಗಿ ಅಹಂಭಾವವು ಉದಯವಾದಾಗಿನಿಂದಲೇ ಎಲ್ಲ ಜೀವಿಗಳಿಗೂ ಆನಂದದ ಗುರುತು ಇದೆ. ಆದ್ದರಿಂದ ಮಾನವನು ಅಪೂರ್ಣವಾಗಿ ಮರೆತ ತನ್ನ ಪ್ರಥಮಾನುಭೂತಿಯನ್ನು ನೆನಪಿಗೆ ತಂದುಕೊಳ್ಳಬೇಕು. ಜೀವನು ಆನಂದವನ್ನು ಪೂರ್ಣ ಮರೆತಿಲ್ಲ. ಆನಂದವು ನಿಃಶೇಷವಾಗಿ ಮರೆತು ಹೋಗಿದ್ದರೆ, ಆನಂದದ ಬಯಕೆ ಉಂಟಾಗುತ್ತಿರಲಿಲ್ಲ. ಮಾನವರು ವಿವೇಕವುಳ್ಳವರಾಗಿದ್ದರೂ ಆನಂದದ ಅನುಭವವು ಎಲ್ಲಿ, ಹೇಗೆ, ಏಕೆ, ಯಾವಾಗ ಉಂಟಾಯಿತು ಎಂಬುದನ್ನು ತಿಳಿದುಕೊಂಡವರು ಅತಿ ವಿರಳ. ಅಂದಮೇಲೆ ಉಳಿದ ಜೀವಿಗಳ ಪಾಡೇನು ? ಮಾನವರು ಸಹ ಸಾಮಾನ್ಯವಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯ ಮದಿರೆಯಲ್ಲಿ ಪ್ರವೃತ್ತರಾಗಿ, ಅದರಲ್ಲಿಯೇ ತಲ್ಲೀನರಾಗಿದ್ದಾರೆ. ಇಂಥಹ ವಿಷಯೇಂದ್ರಿಯ ಸಂಪರ್ಕ ಭೋಗದಿಂದ ಉಂಟಾದ ಸುಖವು ದುಃಖದಿಂದ ಆವೃತ್ತವಾಗಿದೆ ಎಂಬುದು ತಿಳಿಯುವದು ಅತಿ ವಿರಳ. ವಿಷಯೇಂದ್ರಿಯ ಸಂಪರ್ಕಭೋಗವು ದುಃಖದಿಂದ ತುಂಬಿರುವದು, ನಿಜಾನಂದ ಪ್ರತಿಬಂಧಕವು, ಸ್ವರೂಪಜ್ಞಾನ ಪ್ರತಿಬಂಧಕವು ಎಂಬುದು ದೃಢಪಟ್ಟಾಗ, ಮಾನವನು



ತನ್ನ ಮೂಲವಾದ ಸಚ್ಚಿದಾನಂದದ ಕಡೆಗೆ ತನ್ನ ಲಕ್ಷ್ಯವನ್ನು ಹೊರಳಿಸುವನು. ಸಾಧಕನು ವಿಷಯವಸ್ತುಗಳ ಮತ್ತು ವಿಷಯ ಸುಖದ ಬಗ್ಗೆ ತನ್ನೊಳಗೇ ವಿವೇಕ ವೈರಾಗ್ಯಗಳನ್ನು ಹೊಂದುತ್ತಾನೆ. ಆಗ ಮಾತ್ರ ಅವನು ಇಹಪರವಸ್ತುಗಳ ಮತ್ತು ಅವುಗಳ ಭೋಗದ ಮೋಹ ಮತ್ತು ಆಸಕ್ತಿಯನ್ನು ತೆಗೆದುಹಾಕುವನು. ಇದೇ ಶಾಶ್ವತ ಸುಖವನ್ನು ಹೊಂದುವ ಸ್ವಾಭಾವಿಕ ರೀತಿಯು. ಆದರೆ ವಿವೇಕ, ವೈರಾಗ್ಯಗಳು ಇಲ್ಲದ್ದರಿಂದ ಇದು ತಿಳಿಯುವದು ಅತಿ ವಿರಳ. ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿಯೂ "ನಿನ್ನ ಮೂಲಕ್ಕೆ ಹಿಂತಿರುಗು, ಯಾವ ದಾರಿಯಿಂದ ಬಂದಿರುವೆಯೋ ಅದೇ ದಾರಿಯಿಂದ ಹೋಗು ಎಂದು ಹೇಳಿದ್ದಾಗಿದೆ. ಆದರೆ ಜೀವನು ಸಚ್ಚಿದಾನಂದದಿಂದ ಬಂದಿದ್ದಾನೆ ಮತ್ತು ಅವನು ಆನಂದಸೂತ್ರವನ್ನು ಹಿಡಿದು, ತನ್ನ ಮೂಲವಾದ ಆನಂದಕ್ಕೆ ಹಿಂತಿರುಗಿ, ತನ್ನ ಜೀವನಯಾತ್ರೆಯನ್ನು ಪರಮಾತ್ಮನಲ್ಲಿಯೇ ಮುಗಿಸಬೇಕು ಎಂಬುದು ತಿಳಿಯುವದು ಅತಿ ವಿರಳ.

ಮೊದಲಿಗೆ ಸಚ್ಚಿದಾನಂದವೇ ಇತ್ತು. ಅದು ತಾನೇ ಸಚ್ಚಿದಾನಂದ ಎಂದು ಅನ್ವಾಲೋಚನೆ ಮಾಡಿಕೊಂಡಿತು. ಈ ಸ್ಥಿತಿಯು ಅಪೂರ್ಣವಾಗಿ ಹೇಗೋ ಮರೆಯಿತು. ಜಾಗ್ರ, ಕನಸು, ಗಾಢನಿದ್ರೆ, ಎಂಬ ಮೂರೂ ಅವಸ್ಥೆಗಳನ್ನು ತಾನೇ ಕಲ್ಪಿಸಿಕೊಂಡನು. ದೇಹವೇ ತಾನೆಂದುಕೊಂಡನು. ವಿಷಯೇಂದ್ರಿಯ ಸಂಪರ್ಕಭೋಗದಿಂದ ಸುಖವು ಸಿಗುವದೆಂದು ತಾನೇ ಕಲ್ಪಿಸಿಕೊಂಡನು. ಆದ್ದರಿಂದ ಜೀವನು ತನ್ನ ಪ್ರಥಮಾನುಭೂತಿಯನ್ನು ನೆನಪಿಸಿಕೊಂಡು, ಪ್ರಥಮಾನುಭೂತಿಗೆ ಹಿಂತಿರುಗಬೇಕಾಗಿದೆ.

ಕಲ್ಪನಾರಹಿತ ಅರಿವು ಸಹಿತ ಮನಸ್ಸಿನ ಸ್ಥಿತಿಯೇ (ಸಂಧ್ಯಾ) ಶಾಶ್ವತ ಸುಖವನ್ನು ಹೊಂದುವ ಸೂತ್ರ ಅಥವಾ ಸಾಧನವು. ಈ ಕಲ್ಪನಾರಹಿತ, ಅರಿವು ಸಹಿತ ಸಂಧ್ಯಾಸೂತ್ರದ ಸತತ ಅಭ್ಯಾಸದಿಂದ ಶಾಶ್ವತ ಸುಖವು ಪ್ರಾಪ್ತವಾಗುವದು. ಈ ಸಂಧ್ಯಾ ಸ್ಥಿತಿಯು ಒಂದು ಕಲ್ಪನೆಯು ಅಡಗಿ ಮತ್ತೊಂದು ಕಲ್ಪನೆಯು ಉದಯವಾಗುವ ಪೂರ್ವದಲ್ಲಿ ಇರುವ ಕಲ್ಪನಾರಹಿತ ಸ್ಥಿತಿಯು. ಸಂಧ್ಯಾಸ್ಥಿತಿಯು ಅರಿವಿನ ಮನಸ್ಸಿನ ವಿಚಿತ್ರ ಸ್ಥಿತಿಯು. ಈ ಸಂಧ್ಯಾಸ್ಥಿತಿಯಲ್ಲಿ ಇಡೀ ವಿಶ್ವದ ತೋರಿಕೆ ಇಲ್ಲ, ಸ್ವರೂಪದ ಅಜ್ಞಾನವಿಲ್ಲ. ಈ ಪೂರ್ಣ ಪರಿಶುದ್ಧ ಮನಸ್ಸಿನ ಸ್ಥಿತಿಯಲ್ಲಿ ಅಜ್ಞಾನ ಮತ್ತು ಅಜ್ಞಾನದ ಕಾರ್ಯಗಳಾದ ಜಾಗ್ರ, ಕನಸು, ಗಾಢನಿದ್ರೆ ಎಂಬ ಮೂರೂ ಅವಸ್ಥೆಗಳು ಇಲ್ಲ. ಸಂಧ್ಯಾ ಏಕಕಾಲಕ್ಕೆ ಕಲ್ಪನಾರಹಿತ, ಅರಿವುಸಹಿತವಿರುವ ಆನಂದ ಸ್ಥಿತಿಯು. ಇದು ಅರಿವು ಸಹಿತ ಆನಂದಾನುಭೂತಿಯ ಮಹಾಮೌನ ಸ್ಥಿತಿಯು.

ಜೀವನು ತನ್ನ ಮೂಲವಾದ ಆನಂದಸೂತ್ರವನ್ನು ಕೈ ಬಿಟ್ಟು ಸುಖಕ್ಕಾಗಿ ನೂರಾರು ರೀತಿಯಲ್ಲಿ ವ್ಯರ್ಥವಾಗಿ ಪ್ರಯತ್ನಿಸುತ್ತಾನೆ. ಆನಂದವನ್ನು ಕೊಡದ ಅತಿ ತೊಡಕಿನ ನೂರಾರು ದಾರಿಗಳಲ್ಲಿ ಗದ್ದಲಕ್ಕೊಳಗಾಗುವದು ಗಡಿಬಿಡಿಗೊಳ್ಳುವದು ನಿಷ್ಪ್ರಯೋಜಕವು,

ಪ್ರಾರ್ಥನೆ ಮಾಡುವದು ನಿರರ್ಥಕವು. ಪ್ರಾರ್ಥಿಸುವದರಿಂದ , ಬೇಡುವದರಿಂದ , ಕೇಳುವದರಿಂದ ಅಥವಾ ಹುಡುಕುವದರಿಂದ ಆನಂದವು ಪ್ರಾಪ್ತವಾಗಲಾರದು. ಆನಂದಾನುಭವವನ್ನು ಯಾರೂ ಮರೆಯಲಾರರು. ಆದರೆ ಆನಂದವು ಎಲ್ಲಿ, ಹೇಗೆ, ಏಕೆ ಮತ್ತು ಯಾವಾಗ ಅನುಭವಕ್ಕೆ ಬಂದಿತು ಎಂಬುದನ್ನು ಮರೆಯಬಹುದು. ಅದರಂತೆ ಮಾನವನು ವಿಶ್ವದ ವಸ್ತುಗಳನ್ನು ಮತ್ತು ಅವುಗಳ ಬಗೆಗಿನ ಮಾಹಿತಿಯನ್ನು ಮರೆಯಬಹುದು. ಯಾರಾದರೂ ಏನನ್ನಾದರೂ ಹುಡುಕುತ್ತಾರೆಂದರೆ, ಅವರು ಹುಡುಕುವ ವಸ್ತುವನ್ನು ಮರೆತಿರುವದಿಲ್ಲವೆಂದರ್ಥ. ಮಾನವನು ಸುಖವನ್ನು ಹುಡುಕುತ್ತಾನೆಂದರೆ ಅವನು ಸುಖವನ್ನು ಪೂರ್ಣವಾಗಿ ಮರೆತಿಲ್ಲವೆಂದರ್ಥ. ಆದರೆ ಸುಖವು ಮೇಲೆ ಹೇಳಿದಂತೆ ಯಾವ ಸ್ಥಿತಿಯಲ್ಲಿ ಅನುಭವಕ್ಕೆ ಬಂದಿತು ಎಂಬುದನ್ನು ಅವನು ಮರೆತಿದ್ದಾನೆ. ಸುಖವನ್ನು ಹೊಂದುವದಕ್ಕಾಗಿ ಏನನ್ನಾದರೂ ಹುಡುಕುವ ಅಥವಾ ಮಾಡುವ ಅವಶ್ಯಕತೆಯಿಲ್ಲ. ಪ್ರಥಮಾನುಭೂತಿಯನ್ನು ನೆನಪಿಸಿಕೊಂಡು ಅರಿವು ಸಹಿತ ಮಹಾಮೌನಿಯಾಗಿರಬೇಕಷ್ಟೇ.

ಜೀವನಿಗೆ ತನ್ನ ಮೂಲವಾದ ಶಾಶ್ವತ ಸುಖದ ಸರ್ವಾಂಗೀಣ ನೆನಪು ಅಂಶತಃ ಇದ್ದರೂ, ಸರಿಯಾದ ರೀತಿಯಲ್ಲಿ ನೆನಪು ಮಾಡಿಕೊಳ್ಳುವ ಪ್ರಯತ್ನ ನಡೆಸಿದರೂ, ತನ್ನ ಸ್ವರೂಪದ ಬಗ್ಗೆ ಇರುವಂಥಹ ಭ್ರಾಂತಿಯು ಅತಿ ಗಾಢ ಮತ್ತು ಅಗಾಧವಿರುವದರಿಂದ ಅದು ಜೀವನಿಗೆ ತನ್ನ ಮೂಲವಾದ ಪರಮಾನಂದವನ್ನು ನೆನಪಿಸಿಕೊಳ್ಳಲು ಆಸ್ಪದಕೊಡುವದು ಅತಿ ವಿರಳ. ಸಾಮಾನ್ಯವಾಗಿ ಜೀವನು ಅಜ್ಞಾನದಿಂದ ಸ್ವರೂಪವನ್ನು ಹೊಂದಲು ತಪ್ಪು ದಾರಿಯನ್ನೇ ಅನುಸರಿಸಿ ತನ್ನ ನಾಶಕ್ಕೆ ತಾನೇ ಕಾರಣನಾಗುವನು. ಯಾವ ಮಾರ್ಗಗಳು ನಮ್ಮನ್ನು ಸುಖದೆಡೆಗೆ ಒಯ್ಯದೆ, ಇದಕ್ಕೆ ವಿರುದ್ಧವಾದ ದುಃಖದ ಕಡೆಗೇ ಕರೆದುಕೊಂಡು ಹೋಗುವವೋ , ಅಂಥ ಮಾರ್ಗಗಳಲ್ಲಿ ಕಾಲ ಮತ್ತು ಶಕ್ತಿ ಹರಣ ಮಾಡುವದು ನಿಷ್ಪ್ರಯೋಜಕವು. ಆನಂದಸೂತ್ರದ ಏಕಾಗ್ರತೆಯು ಸಚ್ಚಿದಾನಂದದಲ್ಲಿ ಕೊನೆಗೊಳ್ಳುವದು.

'ನಾನು' ಎಂಬ ಕಲ್ಪನೆಯು ಆನಂದದಿಂದಲೇ ಉದಯವಾಗುತ್ತದೆ ಮತ್ತು ಅದು ಆನಂದದೊಡನೆಯೇ ಒಂದುಗೂಡಬೇಕು. 'ನಾನು' ಆನಂದವೇ ಇರುತ್ತದೆ. ನಾನು ಆನಂದವೇ ಇದ್ದೇನೆ, ಆನಂದವನ್ನು ತಿಳಿದುಕೊಳ್ಳುವ ಕಲ್ಪನೆಯು ಆನಂದದಿಂದ ಬೇರೆಯಿಲ್ಲ. ಇದು ಪ್ರಥಮಾನುಭೂತಿಯ ಸಂಗತಿಯು. ಜೀವರು ಅಜ್ಞಾನದಿಂದ ಒಮ್ಮೆಲೇ ಬಾಹ್ಯಪ್ರವೃತ್ತಿಯುಳ್ಳವರಾಗಿದ್ದರಿಂದ ಸಾಮಾನ್ಯವಾಗಿ ಅವರು ಸಚ್ಚಿದಾನಂದದ ಆಧಾರದ ಮೇಲೆ ಅಸ್ತಿತ್ವವನ್ನು ಹೊಂದಿದ್ದರೂ ಆ ತಮ್ಮ ಮೂಲವನ್ನು ಕಳೆದುಕೊಂಡಂತಾಗಿದೆ. ಜೀವನು ತನ್ನ ನಿಜವನ್ನು ಬಿಟ್ಟು, ತನ್ನ ನಿಜವಲ್ಲದ ಬಾಹ್ಯವಸ್ತುಗಳೇ ತನ್ನ ನಿಜವೆಂಬ ತಾದಾತ್ಮ್ಯಭಾವವನ್ನು ಹೊಂದಿದ್ದಾನೆ. ಇದನ್ನು ಭ್ರಾಂತಿ ಅಥವಾ ಮಾಯೆ ಎಂದು



ಕರೆಯಬಹುದು. ಈ ಭ್ರಾಂತಿಯು ಅವನು ಭ್ರಾಂತಿಗೊಂಡ ಮನಸ್ಸಿನ ಜಡಕಲ್ಪನೆಗಳಾದ ವಿಷಯವಸ್ತುಗಳಲ್ಲಿಯೇ ಸುಖವನ್ನು ಹುಡುಕುವಂತೆ ಮಾಡುತ್ತದೆ. ಇದನ್ನು ತನ್ನ ಸ್ವರ್ಗವನ್ನು (ಸಚ್ಚಿದಾನಂದ) ತಾನೇ ಕಳೆದುಕೊಂಡಂತೆ ಆದ ಸ್ಥಿತಿಯೆಂದು ಕರೆಯಬಹುದು.

ಜೀವನು ತನ್ನ ಸಚ್ಚಿದಾನಂದ ಸ್ವರೂಪದ ಪ್ರಥಮಾನುಭೂತಿಯನ್ನು ನೆನಪಿಸಿ ಕೊಂಡು ಜನನ ಮರಣ ಚಕ್ರದ ಬಂಧನದಿಂದ ತಾನೇ ಮುಕ್ತನಾಗಬೇಕು ಅಥವಾ ವಿಮೋಚನೆ ಅಥವಾ ಮುಕ್ತಿಯನ್ನು ಹೊಂದಬೇಕು. ಮಾನವನು ತಾನು ಸಂಸಾರವೆಂಬ ಸಂಕಟ ಮತ್ತು ಗದ್ದಲದ ಕಳ್ಳುಸುಳಿನಲ್ಲಿ ಸಿಕ್ಕಿದ್ದಾನೆ ಅಥವಾ ಮುಳುಗಿದ್ದಾನೆ ಎಂಬುದು ತಿಳಿಯುವದು ಅತಿ ಕಠಿಣವಿದೆ. ಲೌಕಿಕ ಜೀವನದಲ್ಲಿ ತೊಡಗಿದವನು ತಾನು ಯಾವಾಗಲೂ ಜಗತ್ತಿನ ವ್ಯವಹಾರಗಳಿಂದ ಮತ್ತು ವಿಷಯೇಂದ್ರಿಯ ಸಂಪರ್ಕಭೋಗದಿಂದ ಸುಖಿಯಾಗುತ್ತಲೇ ಇರುವನೆಂದು ಅನಿಸುತ್ತದೆ ಮತ್ತು ಅವನು ಹಾಗೆಯೇ ತಿಳಿದುಕೊಂಡಿದ್ದಾನೆ. ಮಾನವನಿಗೆ ಲೌಕಿಕ ಜೀವನವು ನಿರರ್ಥಕವೆಂಬ ತಿಳುವಳಿಕೆಯುಂಟಾಗುವದು ಅತಿ ವಿರಳ. ವಿಷಯೇಂದ್ರಿಯ ಸಂಪರ್ಕಭೋಗವು ಸಂಪೂರ್ಣ ದುಃಖ ಮತ್ತು ವಿಪತ್ತಿನಿಂದ ಸುತ್ತುವರೆದಿದೆ ಎಂಬುದು ಅವನ ಗಮನಕ್ಕೆ ಬರುವದು ಅತಿ ವಿರಳ. ಅವನು ಪ್ರತಿದಿನದ ಕೊನೆಗೆ ವ್ಯಾವಹಾರಿಕ ಜಾಗ್ರದ ವ್ಯವಹಾರದಿಂದ ದಣಿವನ್ನು ಹೊಂದುವನು ಎಂಬುದರಲ್ಲಿ ಸಂಶಯವೇ ಇಲ್ಲ. ಆದರೆ ಅವನು ಪ್ರತಿ ದಿನದ ವ್ಯವಹಾರದ ಫಲವೇನೆಂಬುದನ್ನು ವಿಚಾರಿಸದೆ, ಸಾಮಾನ್ಯವಾಗಿ ಭವಿಷ್ಯತ್ತಿನಲ್ಲಿ ಮರುದಿನ ಅದೇ ವ್ಯಾವಹಾರಿಕ ಜಾಗ್ರದ ವ್ಯವಹಾರದಿಂದ ಸುಖಿ ಮತ್ತು ಯಶಸ್ವಿಯಾಗುವ ಅಪೇಕ್ಷೆಯಿಂದ ಅವನು ನಿದ್ರೆಗೆ ಹೋಗುತ್ತಾನೆ. ಮತ್ತೆ ಮರುದಿನ ಸುಖವನ್ನು ಹೊಂದುವದಕ್ಕಾಗಿ ಇದೇ ಕ್ರಮವು ಮುಂದುವರಿಯುತ್ತದೆ. ಇದರಿಂದ ದಣಿವು ಅಥವಾ ಬೇಸರಿಕೆಯೇ ಉಂಟಾಗುವದು. ಕೆಲವು ವೇಳೆ ಜಾಗ್ರದ ವ್ಯವಹಾರವು ಅತಿ ದುಃಖಪೂರಿತವೂ, ವಿಪತ್ತಿನದೂ, ಮತ್ತು ನಿರಾಶೆಯುಳ್ಳದ್ದೂ ಇರುವದು. ಅತಿ ವಿರಳವಾಗಿ ನಡುವೆ ಅಲ್ಪ ಸುಖವು ತೋರುವದು. ಇದು ತೋರಿ ಹೋಗುವ ನರದ ತುರಿಕೆಯು ಮತ್ತು ಕಟ್ಟಕಡೆಯ ಪ್ರತಿಫಲವು ದುಃಖವೇ ಇರುವದು. ಇದು ಸಾಮಾನ್ಯರೆಲ್ಲರ ವ್ಯವಹಾರವು. ಆತ್ಮ ಸಾಕ್ಷಾತ್ಕಾರಿಗಳ ವ್ಯವಹಾರವು ಇದಕ್ಕೆ ಅಪವಾದವು. ಹೀಗೆ ಪ್ರತಿದಿನದ ವ್ಯವಹಾರವೆಲ್ಲ ದುಃಖದಲ್ಲಿ ಕೊನೆಗೊಳ್ಳುವದು ಎಂಬುದು ತಿಳಿಯುವದು ಅತಿ ವಿರಳ ಮತ್ತು ಈ ದುಃಖವನ್ನು ಕಳೆದುಕೊಳ್ಳುವದಕ್ಕಾಗಿ ಉಪಾಯಗಳನ್ನು ಕಂಡುಕೊಳ್ಳುವದು (ಹುಡುಕುವದು) ವಿರಳ. ಜಾಗ್ರದ ವ್ಯವಹಾರದಿಂದ ಎಂದಿಗೂ ಸುಖವು ದೊರೆಯಲಾರದು ಎಂಬುದನ್ನು ಮಾನವನು ಸುನಿಶ್ಚಿತ ಮಾಡಿಕೊಳ್ಳ ಬೇಕು. ತದನಂತರ ಅವನು ದುಃಖವನ್ನು ಕಳೆದುಕೊಳ್ಳುವ ಉಪಾಯವನ್ನು ಹುಡುಕ ಬಹುದು.

ದುಃಖದ ಮೂಲ ಕಾರಣ ಅವಿಚಾರ ಅಥವಾ ಅವಿವೇಕ ಮತ್ತು ಅಜ್ಞಾನಗಳಿರುವದರಿಂದ (ಸ್ವರೂಪದ ಅಜ್ಞಾನ) ದುಃಖವನ್ನು ಕಳೆದುಕೊಳ್ಳುವದಕ್ಕಾಗಿ ಕೈಕೊಳ್ಳುವ ಎಲ್ಲ ಲೌಕಿಕ ಉಪಾಯಗಳು ನಿರರ್ಥಕ ಮತ್ತು ನಿಷ್ಫಲವೆಂದು ತಿಳಿದು, ಅವಿವೇಕ ಮತ್ತು ಅಜ್ಞಾನ (ಸ್ವರೂಪದ ಅಜ್ಞಾನ)ಗಳನ್ನು ತೆಗೆದುಹಾಕುವ ಉಪಾಯಗಳನ್ನು ಕೈಕೊಳ್ಳಬೇಕು. ಅವಿವೇಕ ಮತ್ತು ಅಜ್ಞಾನದಲ್ಲಿಯ ಯಾವದೇ ಉಪಾಯವು ದುಃಖವನ್ನು ಕಳೆಯಲಾರದು. (ತೆಗೆದುಹಾಕಲಾರದು)

ಐಹಿಕ ಭೋಗಗಳ ಬಗ್ಗೆ ವೈರಾಗ್ಯವನ್ನು ಹೊಂದಲು ವಿವೇಕೋದಯವಾಗಬೇಕು. ವೈರಾಗ್ಯವನ್ನು ಹೊಂದಿದಾಗ ಸುಖವು ನಿಸ್ಸಂದೇಹವಾಗಿ ಅನುಭವಕ್ಕೆ ಬರುವದು. ವಿವೇಕದ ಮೂಲಕ ವೈರಾಗ್ಯಹೊಂದುವದೇ, ಜಾಗ್ರದ ವ್ಯವಹಾರದ ಮೂಲಕ ಚಂಚಲವಾದ ಮನಸ್ಸನ್ನು ಶಾಂತಗೊಳಿಸುವ ಏಕೈಕ ಸಾಧನವು. ವಿವೇಕವೇ ಮಾನವನನ್ನು ಸುಖಿಯನ್ನಾಗಿ ಮಾಡುವ ನೇರವಾದ , ನಿರುಪಾಧಿಕ ಮತ್ತು ಸ್ವಯಂಸಿದ್ಧ ಉಪಾಯವು.

ನಿಜವಾದ ವಿವೇಕ, ವೈರಾಗ್ಯಗಳಿಂದ ಅನುಭವಕ್ಕೆ ಬಂದ ಸುಖವು, ಮನಸ್ಸು ಲೌಕಿಕ ವ್ಯವಹಾರಗಳಿಂದ ಪಾರಾದಾಗ , ಅನಾಸಕ್ತವಾದಾಗ, ಅದು ನಿಶ್ಚಲ ಮತ್ತು ಶಾಂತವಿರುವದು ಎಂಬುದನ್ನು ಮಾನವನಿಗೆ ಖಾತ್ರಿ ಮಾಡಿಕೊಡುವದು. ಇದು ಮಾನವನು ತನ್ನ ಶಾಶ್ವತ ಸುಖದ ಪ್ರಥಮಾನುಭೂತಿಯನ್ನು ನೆನಪಿಗೆ ತಂದುಕೊಳ್ಳಲು ಪ್ರಚೋದಿಸುತ್ತದೆ. ನಂತರ ಅವನು ತನ್ನ ಮೂಲಕ್ಕೆ ಹಿಂತಿರುಗುವಂತೆ ಅಂದರೆ ಮಾನವನು ಎಲ್ಲಿಂದ ಬಂದಿರುವನೋ ಅಲ್ಲಿಗೆ ಹೋಗುವಂತೆ ಮಾಡಿ, ಅವನು ತನ್ನ ಮೂಲವಾದ ಸಚ್ಚಿದಾನಂದವನ್ನು ಸುನಿಶ್ಚಿತವಾಗಿ ಕಂಡುಕೊಳ್ಳುವಂತೆ ಮಾಡುತ್ತದೆ. ಹೀಗೆ ಜೀವಾತ್ಮನೆಂಬ ಯಾತ್ರಿಕನ ಜೀವನಯಾತ್ರೆಯು ಎಲ್ಲ ಜೀವಿಗಳ ಪರಂಧಾಮವಾದ ಅಮೃತತತ್ವದಲ್ಲಿ ಕೊನೆಗೊಳ್ಳುತ್ತದೆ.

ಎಲ್ಲ ಜೀವಿಗಳು ಅಥವಾ ಜೀವಾತ್ಮರು ವಿಷಯವಸ್ತುಗಳಿಂದ ಉದಯವಾಗಿಲ್ಲ. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮತ್ತು ಇವುಗಳ ಮೂಲವಾದ ಇಂದ್ರಿಯಗಳ ವಿಷಯಗಳೇ ವಿಷಯವಸ್ತುಗಳು. ಎಲ್ಲ ಜೀವಿಗಳ ಮೂಲವು ಆನಂದವೇ ಇರುವದು. ಜೀವಾತ್ಮರು ಆನಂದಹೊಂದುವದಕ್ಕಾಗಿಯೇ ಜೀವಿಸುವರು ಮತ್ತು ಕೊನೆಗೆ ಆನಂದದೊಡನೆ ಒಂದುಗೂಡುವದು. ಎಲ್ಲ ಜೀವಿಗಳಿಗೆ ಆನಂದದ ಗುರುತು ಪ್ರಥಮಾನುಭೂತಿ ಅಥವಾ ಪ್ರಥಮ ಅನುಭವದ ಮುಖಾಂತರವೇ ಇದೆ. ಆದರೆ ಆನಂದದ ಗುರುತು ವಿಷಯವಸ್ತುಗಳ ಮುಖಾಂತರವಿಲ್ಲ. ಜೀವನು ಬಾಹ್ಯಪ್ರವೃತ್ತಿಯುಳ್ಳವನಾಗಿ, ಜ್ಞಾನೇಂದ್ರಿಯಗಳ ಮುಖಾಂತರ ಬಾಹ್ಯ ವಿಷಯವಸ್ತುಗಳ ಕಡೆಗೆ ಲಕ್ಷ್ಯಹರಿಸಿದಾಗ ಮಾತ್ರ ಬಾಹ್ಯ ವಿಷಯವಸ್ತುಗಳು ಇಂದ್ರಿಯಗಳಿಗೆ ದೃಶ್ಯವಾಗುವವು. ಪ್ರೌಢರಷ್ಟು ಕೂಸು



ಜ್ಞಾನೇಂದ್ರಿಯಗಳ ಬಾಹ್ಯ ವಿಷಯವಸ್ತುಗಳಿಂದ ಆಕರ್ಷಿತವಾಗುವದಿಲ್ಲ. ಬಾಹ್ಯ ವಿಷಯವಸ್ತುಗಳ ಜ್ಞಾನವು ಮತ್ತು ಅವುಗಳ ಮೇಲಿನ ಮೋಹವು ಹೆಚ್ಚಾದ ಪ್ರಮಾಣದಂತೆ, ಅವುಗಳ ಆಕರ್ಷಣೆಯು ಹೆಚ್ಚುತ್ತ ಹೋಗುವದು. ವಿಷಯವಸ್ತುಗಳಲ್ಲಿ ಸುಖವಿದೆ ಮತ್ತು ಅವುಗಳಿಂದ ಸುಖವು ಸಿಗುತ್ತದೆ ಎಂಬ ತಪ್ಪು ತಿಳುವಳಿಕೆಯೇ ವಿಷಯವಸ್ತುಗಳ ಆಕರ್ಷಣೆಗೆ ಮೂಲ ಕಾರಣವು. ಆದರೆ ಜೀವನ ಪ್ರಪ್ರಥಮ ಅನುಭವವು ಆನಂದವು. ಯಾವದೇ ಬಾಹ್ಯ ವಿಷಯವಸ್ತುಗಳಲ್ಲ. ಆದ್ದರಿಂದ ಜೀವನು ತನ್ನ ಜೀವನಯಾತ್ರೆಯನ್ನು ಮುಗಿಸಲು ಆನಂದಕ್ಕೇ ಹಿಂತಿರುಗಬೇಕಾಗುವದು. ಜೀವನಿಗೆ ಪ್ರಪ್ರಥಮವಾಗಿ ಗುರುತಾದ ವಸ್ತು ಯಾವದೇ ರುಚಿಯಾದ ತಿನ್ನುವ ಅಥವಾ ಕುಡಿಯುವ ಅಥವಾ ಯಾವದೇ ಜ್ಞಾನೇಂದ್ರಿಯಗಳ ವಿಷಯ ವಸ್ತುವಲ್ಲ. ಆದ್ದರಿಂದ ಅವನು ತನ್ನ ಜೀವನ ಯಾತ್ರೆಯನ್ನು ಯಾವದೇ ವಿಷಯ ವಸ್ತುಗಳ ಕಡೆಗೆ ಹಿಂತಿರುಗಿ ಮುಗಿಸಲು ಇಚ್ಛಿಸುವದಿಲ್ಲ ಮತ್ತು ಮುಗಿಸುವದಿಲ್ಲ. ಇದರ ಬದಲಾಗಿ ವಿಷಯವಸ್ತುಗಳು ಆನಂದಸ್ವರೂಪವಿಲ್ಲದ್ದರಿಂದ ಮತ್ತು ದೀರ್ಘಕಾಲದ ನಂತರ ಅಥವಾ ವಿಷಯಭೋಗದ ಕಟ್ಟಕಡೆಗೆ, ಅವನು ಎಲ್ಲ ವಿಷಯವಸ್ತುಗಳ ಬಗ್ಗೆ ಚಿಂತೆಗೊಳಗಾಗುತ್ತಾನೆ. ವಿಷಯವಸ್ತುಗಳು ಬೇಸರದಾಯಕವಾದವು ಮತ್ತು ದುಃಖದಾಯಕವಾದವು. ಆದರೆ ಅವು ಆನಂದದಾಯಕವಲ್ಲ. ಮಾನವನು ಗಾಢನಿದ್ರೆಯಲ್ಲಿ ಆನಂದವನ್ನು ಅನುಭವಿಸುತ್ತಾನೆ. ನಂತರ ವ್ಯಾವಹಾರಿಕ ಎಚ್ಚರಿಕೆಗೆ ಬಂದು, ಅಲ್ಲಿ ನೂರಾರು ರೀತಿಯಿಂದ ಆನಂದವನ್ನು ಪಡೆಯಲು ಪ್ರಯತ್ನಿಸುತ್ತಾನೆ. ಕಡೆಗೆ ಆನಂದ ಪ್ರಾಪ್ತವಾಗದೆ ಆನಂದಾನುಭವಕ್ಕಾಗಿ ಮತ್ತೆ ಗಾಢನಿದ್ರೆಗೆ ಹಿಂತಿರುಗುತ್ತಾನೆ. ಗಂಡ, ಹೆಂಡತಿ, ಮಕ್ಕಳು, ತಂದೆ, ತಾಯಿ, ಪಂಚಮಹಾಭೂತಗಳು ಅಥವಾ ಪಂಚ ಮಹಾಭೂತಗಳ ಕಾರ್ಯಗಳು ಮಾನವನು ಪ್ರಪ್ರಥಮವಾಗಿ ಅನುಭವಿಸಿದ ವಸ್ತುಗಳಲ್ಲ. ಇವುಗಳ ಪೈಕಿ ಯಾವುದರಿಂದಲೂ ಜೀವನು ಉದಯಿಸಿಲ್ಲ. ಆದ್ದರಿಂದ ಜೀವನು ಇವುಗಳ ಪೈಕಿ ಯಾವುದಕ್ಕಾಗಲಿ ಹಿಂತಿರುಗುವದರಿಂದ ಸಂತೃಪ್ತನಾಗುವದಿಲ್ಲ. ಇದರ ಬದಲಾಗಿ ಅವನು ಇವುಗಳಲ್ಲಿಯ ಯಾವದಾದರೊಂದರಿಂದ ಅಥವಾ ಅವೆಲ್ಲವುಗಳಿಂದ, ಕಡೆಗೆ ತಾನು ಧಾರಣ ಮಾಡಿದ ಶರೀರದಿಂದಲೂ ಕೂಡ ನಿರಾಶೆಯನ್ನು ಹೊಂದುತ್ತಾನೆ. ಆದ್ದರಿಂದ ಈ ವಿಷಯಗಳೆಲ್ಲವೂ ಆನಂದಸ್ವರೂಪವಲ್ಲ ಮತ್ತು ವಿವೇಕಿಯಾದವನಿಗೆ ಇವುಗಳ ಇಚ್ಛೆಯುಂಟಾಗುವದಿಲ್ಲ.

ಜೀವನು ಗಾಢನಿದ್ರೆಯಲ್ಲಿ ತಾನು ಸುಖವನ್ನು ಹೊಂದುವನೆಂಬ ತಿಳುವಳಿಕೆಯಿಂದ ಪ್ರತಿ ದಿನ ಗಾಢ ನಿದ್ರೆಗೆ ಹೋಗುತ್ತಾನೆ. ಇದು ಅಜ್ಞಾನ ಮುಖಾಂತರವೇ ಇರುವದು. ಸುಖವನ್ನು ಹೊಂದುವದಕ್ಕಾಗಿ ಗಾಢನಿದ್ರೆಗೆ ಹೋಗುವದನ್ನು ಯಾವ ಗುರುವೂ ಕಲಿಸಿಲ್ಲ. ಇದು ಸ್ವಾನುಭವವು. ಪ್ರತಿ ದಿನವೂ ಮಾನವನು ಗಾಢ ನಿದ್ರೆಯಲ್ಲಿ ಆನಂದವನ್ನು ಅನುಭವಿಸುವನು, ಗಾಢನಿದ್ರೆಯಿಂದ ವ್ಯಾವಹಾರಿಕ ಎಚ್ಚರಿಕೆಗೆ ಬರುವನು, ಅನೇಕ

ರೀತಿಯ ಕೆಲಸಗಳಲ್ಲಿ ತೊಡಗಿ ವಿಷಯವಸ್ತುಗಳನ್ನು ಗಳಿಸುವನು. ಅವುಗಳನ್ನು ಭೋಗಿಸಿ, ಬೇಸರಹೊಂದಿ, ಅವುಗಳಿಂದ ನಿರಾಶನಾಗಿ, ನಿದ್ರೆಯನ್ನು ಹೊಂದುವ ಇಚ್ಛೆಯುಳ್ಳವನಾಗಿ ಮತ್ತೆ ಗಾಢನಿದ್ರೆಗೆ ಹಿಂತಿರುಗುವದರ ಮೂಲಕ ಅಥವಾ ಗಾಢನಿದ್ರೆಯಲ್ಲಿ ಪ್ರವೇಶಿಸಿ ತನ್ನ ಒಂದು ದಿನದ ಯಾತ್ರೆಯನ್ನು ಮುಗಿಸುತ್ತಾನೆ. ಇದರ ಬದಲಾಗಿ ಜ್ಞಾನೇಂದ್ರಿಯಗಳ ಯಾವದೇ ವಿಷಯಗಳಿಗೆ ಹಿಂತಿರುಗಿ ತನ್ನ ಪ್ರತಿದಿನದ ಯಾತ್ರೆಯನ್ನು ಮುಗಿಸುವದಿಲ್ಲ. ಇದರಿಂದ ಜೀವನು ಪ್ರತಿದಿನವೂ ಜ್ಞಾನೇಂದ್ರಿಯಗಳ ವಿಷಯವಸ್ತುಗಳಿಂದ ಉದಯವಾಗದೆ ಅಥವಾ ಎಚ್ಚರವಾಗದೆ, ತನ್ನ ತಾತ್ಪೂರ್ತಿಕ ಮನೆಯಾದ ಗಾಢನಿದ್ರೆಯಿಂದ ಉದಯವಾಗುತ್ತಾನೆ ಅಥವಾ ಎಚ್ಚರವಾಗುತ್ತಾನೆ ಎಂಬುದು ಸುಸ್ಪಷ್ಟವಿದೆ. ಈ ತಾತ್ಪೂರ್ತಿಕ ಮನೆಯಲ್ಲಿ ಆನಂದವನ್ನು ಅನುಭವಿಸಿದ ನಂತರ ಮತ್ತೆ ವ್ಯಾವಹಾರಿಕ ಎಚ್ಚರಿಕೆಗೆ ಬಂದು, ಸುಖವನ್ನು ಹೊಂದುವದಕ್ಕಾಗಿ ಪ್ರತಿನಿತ್ಯದ ಅಥವಾ ಬೇರೆ ವ್ಯವಹಾರಗಳಲ್ಲಿ ತೊಡಗಿ ವಿಷಯವಸ್ತುಗಳನ್ನು ಗಳಿಸುವನು. ಜೀವರು ಯಾವದೇ ರೀತಿಯ ಶರೀರವನ್ನು ಧಾರಣ ಮಾಡಿದರೂ (ಮಾನವ, ಪಶು, ಪಕ್ಷಿ, ಸಸ್ಯ, ಕ್ರಿಮಿಕೀಟಕ) ಇದೇ ಕ್ರಮವು ವ್ಯಾವಹಾರಿಕ ಜೀವನದ ಕೊನೆಯವರೆಗೂ ಮುಂದುವರಿಯುವದು. ಜೀವನು ಅನೇಕ ಶರೀರಗಳನ್ನು ಧಾರಣ ಮಾಡಿ, ಎಲ್ಲ ವಿಷಯಗಳನ್ನು ಭೋಗಿಸಿದರೂ ಅವನಿಗೆ ತೃಪ್ತಿಯೇ ಇಲ್ಲ. ಜೀವನ ಅತ್ಯಂತಿಕ ಗುರಿ ಅಥವಾ ಕೊನೆಯು ಆನಂದವೇ ಇರುವದು. ಜೀವನು ವಿಷಯಭೋಗ ಮತ್ತು ಗಾಢನಿದ್ರೆಗಳೆಂಬ ಉಪಾಧಿಗಳನ್ನು ಅವಲಂಬಿಸದೆ, ತನ್ನ ಮೂಲವಾದ ಆನಂದಕ್ಕೆ ಹಿಂತಿರುಗಿದರೆ ಆವನ ಜೀವನಯಾತ್ರೆಯು ಮುಗಿಯುವದು. ಮಾನವನು ಆನಂದಸೂತ್ರವನ್ನು ಆಶ್ರಯಿಸಿ, ಅದರ ಅಭ್ಯಾಸ ಮಾಡುತ್ತ, ಆನಂದದೊಡನೆ ಒಂದುಗೂಡಿ ತನ್ನ ಜೀವನಯಾತ್ರೆಯನ್ನು ಮುಗಿಸಬೇಕು. ಇದನ್ನು ಯಾವದೇ ಹೆಸರಿನಿಂದಾದರೂ ಕರೆಯಬಹುದು. ಜೀವಿಗಳು ಆನಂದದಿಂದಲೇ ಉದಯವಾಗಿವೆ, ಆನಂದಕ್ಕೇ ಹಿಂತಿರುಗಬೇಕು. ಆದ್ದರಿಂದ ಆನಂದಸೂತ್ರವೇ ಆನಂದವನ್ನು ಹೊಂದುವ ಏಕೈಕ ದಾರಿ, ಬೇರೆ ಉಪಾಯವೇ ಇಲ್ಲ.

ಸಮಸ್ತ ವಿಶ್ವವೆಲ್ಲವೂ ಸೃಷ್ಟಿಯೇ. ಆದರೆ ಜೀವಾತ್ಮನು ಸೃಷ್ಟಿಯಲ್ಲ. ಜೀವನು ವಿಶ್ವದಿಂದ ಉದಯವಾಗಿಲ್ಲ ಅಥವಾ ಹುಟ್ಟಿಲ್ಲ. ವಿಶ್ವವು ಜಡವು, ಜೀವಾತ್ಮನು ಆ ಜಡವಾದ ಚೈತನ್ಯವು. (ಅರಿವು) ಜಡ ಮತ್ತು ಚೈತನ್ಯರಹಿತ ವಿಶ್ವದಿಂದ ಅಜಡವಾದ ಚೈತನ್ಯವು ಸೃಷ್ಟಿಸಲ್ಪಡಲಾರದು. ಆತ್ಮನು ಆತ್ಮನೇ. ಚೈತನ್ಯವು ಚೈತನ್ಯವೇ. ಚೈತನ್ಯವು ಸ್ವಯಂಸಿದ್ಧವಿದೆ. ಏನನ್ನಾದರೂ ಸೃಷ್ಟಿಸಬೇಕಾದರೆ ಸೃಷ್ಟಿಸುವ ಚೈತನ್ಯವು ಇರಲೇ ಬೇಕಾಗುತ್ತದೆ. ಚೈತನ್ಯವು ಸೃಷ್ಟಿಸಲ್ಪಡಲಾರದು. ಚೈತನ್ಯವು ಎಲ್ಲಿಗೂ ಹೋಗಬೇಕಾಗಿಲ್ಲ, (ಅಚಲವು) ಏನೂ ಆಗಬೇಕಾಗಿಲ್ಲ. ಜೀವಾತ್ಮನು ತನ್ನ ಮೂಲಕ್ಕೆ ಹಿಂತಿರುಗಬೇಕೆಂದು ಹೇಳಿದ್ದು ಹೆಸರಿಗೆ (ನಾಮ) ಮಾತ್ರ. ಸಚ್ಚಿದಾನಂದ ಸ್ವರೂಪದ ಅಜ್ಞಾನದ ಆಧಾರದ



ಮೇಲೆ "ನಾನು" ಎಂಬ ಭಾವವು ಅಥವಾ ಅಹಂಕಾರವು ತೋರಿದಂತಾಗಿರುವದರಿಂದ ಹೀಗೆ ಹೇಳಿದ್ದಾಗಿದೆ. ರೂಪಕದ ರೀತಿಯಲ್ಲಿ ಹಾಗೆ ಹೇಳಿದೆ. ನಿಜವಾಗಿ, ತೋರಿಕೆಯ ಅಜ್ಞಾನದ ಅಥವಾ ಅಜ್ಞಾನಾವರಣದ ಮೂಲಕ ತಪ್ಪು ತಿಳಿವಳಿಕೆಯ ಅಥವಾ ತೋರಿಕೆಯ ಅಹಂಕಾರವನ್ನು ಕಿತ್ತೆಸೆಯಬೇಕು. ಸತ್ಯವು ಯಾವಾಗಲೂ, ಎಲ್ಲ ಕಡೆಗಳಲ್ಲಿಯೂ ಒಂದೇ ಇರುವದು. ಸತ್ಯದ ಆಧಾರದ ಮೇಲೆ ತೋರಿದ ಅಜ್ಞಾನವಾಗಲಿ, ಅಹಂಭಾವವಾಗಲಿ (ಅಹಂಕಾರ) ಅದರಲ್ಲಿ ಯಾವದೇ ಬದಲಾವಣೆಯನ್ನುಂಟುಮಾಡಲಾರವು. ಅದು ಶಾಶ್ವತ ಸ್ವಯಂಪ್ರಕಾಶಿತ ಇರುವು.

"ನಾನು" ಎಂಬುದು ಎಲ್ಲ ಕಾಲಗಳಲ್ಲಿಯೂ, ಎಲ್ಲ ಜೀವಿಗಳಿಗೂ, ಎಲ್ಲ ಅವಸ್ಥೆಗಳಲ್ಲಿಯೂ ಎಲ್ಲ ಕಡೆಗಳಲ್ಲಿಯೂ ಒಂದೇ ರೀತಿಯಾಗಿದೆ. (ಅವಿಕಾರಿ) "ನಾನು" ಎಂಬುದು ಎಲ್ಲ ಜೀವಿಗಳ ಮೊಟ್ಟ ಮೊದಲನೆಯ ಹೆಸರು. ಪ್ರಥಮಾನುಭೂತಿಯಲ್ಲಿ "ನಾನು" ಎಂದು ಹೆಸರಿಸಲು ಯಾರೂ ಇರಲಿಲ್ಲ. ಎಲ್ಲ ಜೀವಿಗಳ ಮೂಲ ಅಥವಾ ಆಧಾರವಾದ ಸಚ್ಚಿದಾನಂದ ಸ್ವರೂಪದ ಆಧಾರದ ಮೇಲೆ ತೋರಿದ ಅಜ್ಞಾನದ ಅಸಂಖ್ಯ ಪ್ರಕಾರದ ಭಿನ್ನ ಉಪಾಧಿಗಳ ಮೂಲಕ "ನಾನು" ವು ಕನಸು ಮತ್ತು ವ್ಯಾವಹಾರಿಕ ಜಾಗ್ರಗಳಲ್ಲಿ ಅಸಂಖ್ಯ ಭಿನ್ನ ರೂಪಗಳನ್ನು ತಾಳುತ್ತದೆ. ಅಜ್ಞಾನೋಪಾಧಿಯ ಅನೇಕ ಬದಲಾವಣೆ ಹೊಂದಿದ ರೂಪಗಳಲ್ಲಿ 'ನಾನು' ವು ಭಿನ್ನವಾಗಿ ತೋರುತ್ತದೆ. ಆದ್ದರಿಂದ ಒಂದೇ 'ನಾನು'ವಿನ ಅನೇಕ ಪ್ರಕಾರದ 'ನಾನು'ಗಳು ತೋರುತ್ತವೆ. ಎಲ್ಲ ಜೀವಿಗಳಿಗೆ ಗಾಢನಿದ್ರೆಯಲ್ಲಿ ಅಜ್ಞಾನೋಪಾಧಿಯು ಒಂದೇ ಇರುತ್ತದೆ. ಈ ಅಜ್ಞಾನೋಪಾಧಿಯು ಜೀವಿಗಳು ಹೊಂದಿದ, ಅತಿ ವಿಚಿತ್ರವಾಗಿ ಬದಲಾವಣೆ ಹೊಂದಿದ ಮನಸ್ಸಿನ ಸ್ಥಿತಿಯಾದ 'ಮಾಯಾವೃತ್ತಿ' ಎಂಬ ಕರಣದಿಂದ ಅವುಗಳಿಗೆ ದೃಶ್ಯವಾಗುತ್ತದೆ. ಎಲ್ಲ ಜೀವಿಗಳು ಗಾಢ ನಿದ್ರೆಯಲ್ಲಿ 'ಮಾಯಾವೃತ್ತಿ' ಎಂಬ ಒಂದೇ ಕರಣವನ್ನು ಹೊಂದಿರುವದರಿಂದ, ಅವು ಗಾಢ ನಿದ್ರೆಯನ್ನು ಒಂದೇ ದೃಷ್ಟಿಕೋನದಿಂದ ಸಮಾನವಾಗಿ ಅನುಭವಿಸುತ್ತವೆ. ಅವುಗಳೆಲ್ಲವೂ ಗಾಢನಿದ್ರೆಯಿಂದ ಭಿನ್ನ ಮನಸ್ಸುಗಳಿಂದ ವ್ಯಾವಹಾರಿಕ ಎಚ್ಚರಿಕೆಗೆ ಬಂದಾಗ, ನಿದ್ರೆಯ ಒಂದೇ ಸಮಾನವಾದ ಅನುಭವವನ್ನು ವ್ಯಕ್ತಪಡಿಸುತ್ತವೆ. ಎಲ್ಲ ಜೀವಿಗಳ ಗಾಢನಿದ್ರೆಯ, ಸಮಾನವಾಗಿ ಬದಲಾವಣೆ ಹೊಂದಿದ ಸ್ಥಿತಿಯಾದ ಮಾಯಾವೃತ್ತಿಯು, ಈಗ ಅಸಂಖ್ಯ ಭಿನ್ನ ಮನಸ್ಸುಗಳೆಂಬ ರೂಪಗಳಾಗಿ ಪರವಿವರ್ತನೆಯಾಗುತ್ತದೆ. ಅವೆಲ್ಲವುಗಳು ಗಾಢನಿದ್ರೆಯಲ್ಲಿ ಪೂರ್ಣಾನಂದವನ್ನು ಹೊಂದಿದ್ದನ್ನೂ ಮತ್ತು ಆನಂದಾನುಭವಕ್ಕನ್ಯವಾಗಿ ಏನನ್ನೂ ತಿಳಿಯಲಿಲ್ಲವೆಂಬುದನ್ನು ವ್ಯಕ್ತಪಡಿಸುತ್ತವೆ. ಏನೊಂದನ್ನೂ ತಿಳಿಯಲಿಲ್ಲ ಎಂಬ ರೂಪದಿಂದ ಅಜ್ಞಾನವು ಗಾಢ ನಿದ್ರೆಯಲ್ಲಿ ಮಾಯಾವೃತ್ತಿ ಎಂಬ ಕರಣದಿಂದ ಎಲ್ಲ ಜೀವಿಗಳಿಗೂ ವಿಷಯ (ದೃಶ್ಯ)ವಾಗುತ್ತದೆ. 'ನಾನು'ಎಂಬುದು ಯಾವಾಗಲೂ ಒಂದೇ ಇರುವದು. ಆದರೆ ಉಪಾಧಿಗಳು

ಅವಸ್ಥೆಗಳಿಗನುಗುಣವಾಗಿ ಭಿನ್ನವಾಗುವವು. ಸ್ವಪ್ನ ಮತ್ತು ವ್ಯಾವಹಾರಿಕ ಎಚ್ಚರಗಳಲ್ಲಿ ಉಪಾಧಿಗಳು ಮಲಿನವಿದ್ದು ವಿಕ್ಷೇಪವನ್ನು ಹೊಂದಿರುವದರಿಂದ ಜೀವಿಗಳು ಸಹ ಒಬ್ಬರಿಗೊಬ್ಬರು ಭಿನ್ನವಾಗಿ ತೋರುತ್ತಾರೆ.

ತುರ್ಯಾವಸ್ಥೆಯನ್ನು ಹೊಂದಿದವರೆಲ್ಲರಿಗೂ, ರಜ, ತಮ, ಗುಣಗಳಿಂದ ಸಂಪೂರ್ಣ ಪರಿಶುದ್ಧವಾದ 'ಮಾಯಾತನು' ಎಂಬ ಒಂದೇ ಕರಣವಿರುತ್ತದೆ. ತುರ್ಯವು ಅರಿವು ಮತ್ತು ಶುದ್ಧ ಆನಂದದ ಅವಸ್ಥೆಯು, ಗಾಢನಿದ್ರೆಯು ಅಜ್ಞಾನ (ಸ್ವರೂಪದ ಅಜ್ಞಾನ) ಮತ್ತು ಆನಂದದ ಅವಸ್ಥೆಯು.

ಗಾಢನಿದ್ರೆಯು ಅಜ್ಞಾನಸಹಿತ ಆನಂದದ ಅವಸ್ಥೆಯು. ತುರ್ಯವು ಅರಿವು ಸಹಿತ ಆನಂದದ ಅವಸ್ಥೆಯು. ಜೀವನು ತುರ್ಯದಲ್ಲಿ ಅರಿವಿನಿಂದ ಆನಂದಮಯ ನಿರುವನು, ಗಾಢನಿದ್ರೆಯಲ್ಲಿ ಅಜ್ಞಾನದಿಂದ ಆನಂದಮಯನಿರುವನು. ಯಾರ ಅನುಭವವು ಗಾಢನಿದ್ರೆಗೆ ಮಾತ್ರ ಸೀಮಿತವಾಗಿರುವದೊ ಅವರು ಗಾಢನಿದ್ರೆಯ ಬಗ್ಗೆ ಮಾತ್ರ ಉಪದೇಶಿಸುವರು. ತುರ್ಯದ ಲಕ್ಷಣಗಳಿಗೂ ಮತ್ತು ಗಾಢನಿದ್ರೆಯ ಲಕ್ಷಣಗಳಿಗೂ ಮಹದಂತರವಿದೆ. ತುರ್ಯಾವಸ್ಥೆಯಲ್ಲಿ ಜೀವನಿಗೆ ತನ್ನ ನಿಜಸ್ವರೂಪದ ತಿಳಿವಳಿಕೆಯು ಸುನಿಶ್ಚಿತವಿದೆ. ಗಾಢನಿದ್ರೆಯಲ್ಲಿ ಜೀವನಿಗೆ ಅಜ್ಞಾನದ ಮೂಲಕ ಆನಂದಾನುಭವವಿರುವದು. ಜೀವನು ಗಾಢನಿದ್ರೆಯಲ್ಲಿ ಅಜ್ಞಾನದಲ್ಲಿ ಸಂಪೂರ್ಣವಾಗಿ ತನ್ಮಯನಾಗಿರುವದರಿಂದ, ಅವನಿಗೆ ತನ್ನ ನಿಜ ಸ್ವರೂಪದ ಬಗ್ಗೆ ಏನೂ ತಿಳಿವಳಿಕೆಯಿಲ್ಲ ಮತ್ತು ವ್ಯಾವಹಾರಿಕ ಜಾಗ್ರ ಮತ್ತು ಸ್ವಪ್ನಗಳ ಬಗ್ಗೆಯೂ ಅವನಿಗೆ ಏನೂ ಗುರುತಿಲ್ಲ. ಆದರೆ ಅವನು ತುರ್ಯಾವಸ್ಥೆಯಲ್ಲಿ ಅಜ್ಞಾನದ ವ್ಯಾವಹಾರಿಕ ಜಾಗ್ರ, ಕನಸು, ಗಾಢನಿದ್ರೆಗಳೆಂಬ ಮೂರೂ ಅವಸ್ಥೆಗಳಿಗೂ ಸಾಕ್ಷಿಯಾಗಿರುವನು. ತುರ್ಯಾವಸ್ಥೆಯಲ್ಲಿ ತಾನು ಮೂರೂ ಅವಸ್ಥೆಗಳಿಂದ ಪೂರ್ಣವಾಗಿ ಅಬಾಧಿತನಿರುವನೆಂಬುದನ್ನು ಅನುಭವಿಸುವನು ಮತ್ತು ಆ ಮೂರೂ ಅವಸ್ಥೆಗಳಿಂದ ಅವನಿಗೆ ಯಾವ ಬಾಧೆಯೂ ಉಂಟಾಗುವದಿಲ್ಲ. ತುರ್ಯಾವಸ್ಥೆಯಲ್ಲಿ 'ಮಾಯಾತನು' ಎಂಬ ಉಪಾಧಿಯು ತನ್ನ ಮಲಿನತ್ವವನ್ನು ಕಳೆದುಕೊಂಡು, ಸಂಪೂರ್ಣವಾಗಿ ಪರಿಶುದ್ಧವಾಗಿರುವದರಿಂದ, ತಾನು ಸಂಪೂರ್ಣವಾಗಿ ನಿರ್ದುಷ್ಟನು ಎಂಬ ತಿಳಿವಳಿಕೆಯುಂಟಾಗುವದು. ಅಂತಃಕರಣವೃತ್ತಿಯು ಸಚ್ಚಿದಾನಂದಮಯವಾದಾಗ ಅಥವಾ ಸಚ್ಚಿದಾನಂದವೃತ್ತಿಯನ್ನು ತಾಳಿದಾಗ, ತಾನು ಜಾಗ್ರ, ಕನಸು, ಗಾಢನಿದ್ರೆಗಳೆಂಬ ಮೂರೂ ಅವಸ್ಥೆಗಳ ಸಾಕ್ಷೀ ಸ್ಥಿತಿಯಲ್ಲಿರುವನು. ಈ ಸಾಕ್ಷೀ ಸ್ಥಿತಿಯನ್ನು ಹೊಂದಿದವರು ಸಾಕ್ಷೀ ಸ್ಥಿತಿಯ ಬಗ್ಗೆಯೇ ಉಪದೇಶಿಸುವರು.

ಈ ಸಾಕ್ಷೀ ಅವಸ್ಥೆಯೂ ಸಹ ಚೈತನ್ಯಮಯ ಮತ್ತು ಶುದ್ಧ, ಬುದ್ಧ ಆನಂದದ ತನ್ನ ನಿಜ ಸ್ಥಿತಿ ಅಥವಾ ನಿಜದ ಇರುವಿಕೆಯನ್ನು ತೋರಿಸಿ ತನ್ನಿಂದ ತಾನೇ ಮಾಜಿ



ಹೋಗುವದು. ಇರುವಿಕೆಯು (ಸತ್ಯವು) ಇದ್ದಂತೆಯೇ ಇರುವದು. ಈ ಸ್ಥಿತಿಯನ್ನು ಜ್ಞಾನಸಮಾಧಿ ಅಥವಾ ಆತ್ಮಸಾಕ್ಷಾತ್ಕಾರ ಹೊಂದಿದಂಥಹ ಸ್ಥಿತಿ ಎಂದು ತಿಳಿದುಕೊಳ್ಳಬಹುದು. ಈ ತುರ್ಯಾವಸ್ಥೆಯಲ್ಲಿ ಸದಾನಂದಮಯ ಮತ್ತು ಅಜ್ಞಾನದ ಯಾವದೇ ಛಾಯೆ ಅಥವಾ ಅಜ್ಞಾನದ ಕಾರ್ಯಗಳಾದ ಜಾಗ್ರ, ಕನಸು, ಗಾಢನಿದ್ರೆಗಳಿಂದ ಬಾಧೆ ಹೊಂದದ, ಅಥವಾ ಸೋಂಕದ ತನ್ನ ಇರುವಿನ ಸುನಿಶ್ಚಿತ ತಿಳಿವಳಿಕೆ ಇರುವದು.

ಕನಸು, ಜಾಗ್ರಗಳಲ್ಲಿ ಜೀವಿಗಳ ಉಪಾಧಿಗಳು ಭಿನ್ನವಾಗಿರುವವು. ಅವುಗಳ ಜಾಗ್ರ, ಕನಸುಗಳು ಅನೇಕ ವಿಧವಾಗಿ ಭಿನ್ನವಾಗಿರುವಂತೆ, ಅವುಗಳೂ ಒಂದಕ್ಕೊಂದು ಭಿನ್ನವಾಗಿರುವವು. ಆದರೆ ಸಚ್ಚಿದಾನಂದ ಸ್ವರೂಪವು ಮಾತ್ರ ಒಂದೇ ಇದ್ದಂತೆಯೇ ಇರುವದು. ಅವುಗಳ ಕನಸು, ಜಾಗ್ರಗಳಲ್ಲಿಯ ಭಿನ್ನವಿರುವ ಉಪಾಧಿಗಳು ಗಾಢನಿದ್ರೆಯಲ್ಲಿ ತಮ್ಮ ನಿಜಕಾರಣವಾದ ಅಜ್ಞಾನದಲ್ಲಿ ಒಂದಾದಂತಾಗಿರುವವು. ಈ ಮಾಯೋಪಾಧಿಯು (ಮಾಯಾವೃತ್ತಿ) ಗಾಢನಿದ್ರೆಯಲ್ಲಿರವ ಎಲ್ಲ ಜೀವಿಗಳಿಗೆ ಸಮಾನವೇ ಇರುವದು ಮತ್ತು ಅವುಗಳ ಗಾಢ ನಿದ್ರೆಯ ಅನುಭವವೂ ಒಂದೇ ಇರುವದು. ಈ ಮಾಯಾವೃತ್ತಿಯೆಂಬ ಉಪಾಧಿಯು ಗಾಢನಿದ್ರೆಯಲ್ಲಿರುವ ಎಲ್ಲ ಜೀವಿಗಳಿಗೆ ಒಂದೇ ಮತ್ತು ಸಮವಿರುವದು, ವಿಷಮವಿಲ್ಲ. ಗಾಢನಿದ್ರೆಯಲ್ಲಿ ಅಜ್ಞಾನವು ಯಾವದೇ ರೀತಿಯ ವಿಕಾರವನ್ನು ಹೊಂದದೆ ಒಂದೇ ಇರುವದರಿಂದ ಇದನ್ನು ಅಜ್ಞಾನಸಮಾಧಿ ಎಂದು ತಿಳಿದುಕೊಳ್ಳಬಹುದು.

ತುರ್ಯಾವಸ್ಥೆಯನ್ನು ಹೊಂದಿದ ಎಲ್ಲರಿಗೂ ತುರ್ಯಾವಸ್ಥೆಯು ಸಮಾನವೇ ಇದೆ. ತುರ್ಯಾವಸ್ಥೆಯಲ್ಲಿ ಗಾಢನಿದ್ರೆ, ಕನಸು, ಜಾಗ್ರಾವಸ್ಥೆಗಳ ಉಪಾಧಿಗಳನ್ನು ಮೀರಿದ ಅತಿ ಪರಿಶುದ್ಧವಾದ ಅಂತಃಕರಣವಾದ 'ಮಾಯಾತನು' ಎಂಬ ಉಪಾಧಿಯು ಇರುವದು. ತುರ್ಯಾವಸ್ಥೆಯು ಜಾಗ್ರ, ಕನಸು, ಗಾಢನಿದ್ರೆಗಳ ಉಪಾಧಿಗಳ ಲಕ್ಷಣಗಳನ್ನು ಮೀರಿರುವದು. ತುರ್ಯಾವಸ್ಥೆಯು ಅಜ್ಞಾನದ ಮಲಿನತ್ವವನ್ನೂ ಮತ್ತು ಅದರ ಮೋಸಮಯ ವಿಕಾರಗಳನ್ನು ಹೊಂದದೆ ಇದ್ದು ಅದನ್ನು ಹೊಂದುವವರಿಗೆ ಅವರ ನಿಜಸ್ವರೂಪವನ್ನು ತೋರಿಸುವ ಯೋಗ್ಯ ಮತ್ತು ಅರ್ಹವಾದ ಅವಸ್ಥೆಯು. ಅದು ಗಾಢನಿದ್ರೆಯ ಅಜ್ಞಾನವನ್ನೂ ಮತ್ತು ಜಾಗ್ರ ಕನಸುಗಳಲ್ಲಿಯ ಅಜ್ಞಾನದ ಅನೇಕ ಭಿನ್ನ ವಿಕಾರಗಳನ್ನೂ ಮೀರಿರುವದರಿಂದ ಸಚ್ಚಿದಾನಂದಮಯ ಸತ್ವದ ವೃತ್ತಿಯನ್ನು ತಾಳುವದು. ಆದ್ದರಿಂದ ತುರ್ಯಾವಸ್ಥೆಯನ್ನು ಹೊಂದಿದ ಎಲ್ಲರ ಅನುಭವವು ಒಂದೇ ಮತ್ತು ಸಮವಿರುವದು. ಈ ಅನುಭವವು ಗಾಢನಿದ್ರೆಯ ಅನುಭವಕ್ಕಿಂತ ತೀರ ಭಿನ್ನವಿದೆ. ತುರ್ಯದಲ್ಲಿ 'ಮಾಯಾತನು' ಎಂಬ ಉಪಾಧಿಯು ತಿಳಿವಳಿಕೆಯ ಮೂಲಕ ಸಮವಾಗಿರುವದು. ಆದರೆ ಗಾಢನಿದ್ರೆಯಲ್ಲಿ 'ಮಾಯಾವೃತ್ತಿ' ಎಂಬ ಉಪಾಧಿಯು ಅಜ್ಞಾನಾವರಣದ ಮೂಲಕ ಸಮವಾಗಿರುವದು. ಜ್ಞಾನಸಮಾಧಿಯಲ್ಲಿ ತಾನು ಮೂರೂ

ಅವಸ್ಥೆಗಳಿಗೂ (ಜಾಗ್ರ, ಕನಸು, ಗಾಢನಿದ್ರೆ) ಸಾಕ್ಷೀ ಇರುವನು ಮತ್ತು ಈ ಮೂರೂ ಅವಸ್ಥೆಗಳು ತನ್ನ ನಿಜಸ್ವರೂಪಕ್ಕೆ ಯಾವದೇ ರೀತಿಯ ಬಾಧೆಯನ್ನುಂಟು ಮಾಡಲಾರವು ಎಂಬ ತಿಳಿವಳಿಕೆ ಜೀವನಿಗಿರುವದು. ಆದರೆ ಗಾಢನಿದ್ರೆಯಲ್ಲಿ ಉಳಿದ ಅವಸ್ಥೆಗಳ ಬಗ್ಗೆ ತಿಳಿವಳಿಕೆಯೇ ಇಲ್ಲ ಮತ್ತು ಅಜ್ಞಾನಾಂಧಕಾರದಿಂದ ಆವರಿಸಲ್ಪಟ್ಟು ಅವನು ಅಜ್ಞಾನದ ಮೂಲಕ ಆನಂದವನ್ನು ಅನುಭವಿಸುವನು.

ಗಾಢನಿದ್ರೆಯಿಂದ ವ್ಯಾವಹಾರಿಕ ಜಾಗ್ರಕ್ಕೆ ಎಚ್ಚರವಾದವನು, ಬರೇ ಅಜ್ಞಾನಾಂಧಕಾರದ ಗಾಢನಿದ್ರೆಯನ್ನು ಹೊಂದಿ, ತನ್ನ ಸ್ವರೂಪದ ಅಜ್ಞಾನಾವರಣವನ್ನು ನಾಶ ಮಾಡದೆ ಇರುವದರಿಂದ, ತನ್ನ ಮೊದಲಿನ ಜಾಗ್ರದ ವ್ಯವಹಾರಗಳು, ಸುಖ–ದುಃಖಗಳು ತನ್ನನ್ನು ಬಾಧಿಸುವವು ಎಂಬ ತಿಳಿವಳಿಕೆಯಿಂದ ಪುನಃ ಅವುಗಳಲ್ಲಿ ತನ್ಮಯನಾಗುವನು. ಆದ್ದರಿಂದ ಅಜ್ಞಾನದ ಮೂರೂ ಅವಸ್ಥೆಗಳ ಜೀವನ ದೀರ್ಘ ಪ್ರಯಾಣವು, ಜನನ – ಮರಣಗಳ ಚಕ್ರದ ಮುಖಾಂತರ ಸಾಗುತ್ತಲೇ ಇದೆ. ಆದರೆ ತುರ್ಯಸ್ಥಿತಿಯನ್ನು (ಸಾಕ್ಷೀಸ್ಥಿತಿ) ಹೊಂದಿದವರ ವಿಷಯವೇ ಬೇರೆ. ತುರ್ಯವು ಅರಿವಿನ ಸಮಸ್ಥಿತಿಯು. ತುರ್ಯಾವಸ್ಥೆಯಲ್ಲಿದ್ದವರು, ಅಜ್ಞಾನದ ಮೂರೂ ಅವಸ್ಥೆಗಳನ್ನು ಮೀರಿ, ಅವುಗಳಿಂದ ಬಾಧೆ ಹೊಂದದೆ, ಅರಿವಿನಿಂದ (ತಿಳಿವಳಿಕೆಯಿಂದ) ಆ ಮೂರೂ ಅವಸ್ಥೆಗಳಿಗೆ ಸಾಕ್ಷೀಯಾಗಿರುವರು. ಆದ್ದರಿಂದ ಇವರು ತುರ್ಯಾವಸ್ಥೆಯನ್ನು ಹೊಂದಿ, ವ್ಯಾವಹಾರಿಕ ಎಚ್ಚರಿಕೆಗೆ ಬಂದಾಗ, ತಾವು ಮೊದಲಿನಂತೆ ಜಾಗ್ರದ ವ್ಯವಹಾರ, ಕ್ರಿಯಾದಿಗಳಿಂದ ಬಾಧಿಸಲ್ಪಡುವದಿಲ್ಲ ಎಂಬ ತಿಳಿವಳಿಕೆ ಇವರಿಗಿದೆ. ಇವರು ಜನನ ಮರಣಗಳ ಚಕ್ರ ಮತ್ತು ವ್ಯಾವಹಾರಿಕ ಅವಸ್ಥೆಗಳಿಗೆ ಸಾಕ್ಷೀ ಇರುವದರಿಂದ ಇವು ಇವರಿಗೆ ಅತ್ಯಂತಾಭಾವವಾಗಿರುವವು.

ಗಾಢನಿದ್ರೆಯ ಸೂತ್ರದಲ್ಲಿ (ನಿದ್ರೆಯ ಮಬ್ಬಿನಲ್ಲಿ) ಮತ್ತು ಗಾಢನಿದ್ರೆಯಲ್ಲಿ ಯಾವದೇ ಸಿದ್ಧಾಂತ, ಮತ, ಅಭಿಪ್ರಾಯ ಅಥವಾ ಶ್ರದ್ಧೆ ಮುಂತಾದವುಗಳು ಇರಲಾರವು. ಸಿದ್ಧಾಂತ, ಮತ, ಮುಂತಾವುಗಳು ವ್ಯಾವಹಾರಿಕ ಜಾಗ್ರಕ್ಕೆ ಮಾತ್ರ ಸೀಮಿತವಾದವು. ಆದ್ದರಿಂದ ತುರ್ಯ ಮತ್ತು ಸತ್ಯವನ್ನು ಹೊಂದುವ, ಏಕೈಕ ಸಾಧನವಾದ (ಸೂತ್ರವಾದ) ಕಲ್ಪನಾರಹಿತ, ಅರಿವು ಸಹಿತ, ಆನಂದದ ಸ್ಥಿತಿಯಲ್ಲಿ ಮತ, ಸಿದ್ಧಾಂತ, ಶ್ರದ್ಧೆಗಳು ಇಣಿಕಿಕೂಡ (ಸಹ) ಹಾಕಲಾರವೆಂಬುದು ಸ್ವಾಭಾವಿಕವೇ ಇದೆ. ಈ ತುರ್ಯ ಮತ್ತು ಸತ್ಯವನ್ನು ಹೊಂದುವ ಸೂತ್ರವು ಮೂರೂ ವ್ಯಾವಹಾರಿಕ ಅವಸ್ಥೆಗಳನ್ನು (ಜಾಗ್ರ, ಕನಸು, ಗಾಢನಿದ್ರೆ) ಮೀರಿದೆ. ಸತ್ಯವು ಯಾವದರೊಡನೆಯೂ ಬೆರೆಸದ, ಬೇರೊಂದು ಬೇಕೆಂದೆನಿಸದ, ಹೆಚ್ಚು ಕಡಿಮೆಯಾಗದ, ಗಮನಾಗಮನವಿಲ್ಲದ ನಿರುಪಾಧಿಕ ಸಚ್ಚಿದಾನಂದವು.



# ಶಾಶ್ವತ ಶಾಂತಿ

ಜೀವಾತ್ಮನು ಪರಮಾತ್ಮನ ಪ್ರತಿಬಿಂಬನು. ಜೀವಾತ್ಮನು ಪ್ರಕೃತಿಯ ಅತಿ ಸೂಕ್ಷ್ಮ, ಶುದ್ಧ, ವಿಕಾರವಾದ ಅಂತಃಕರಣ ಅಥವಾ ಅಂತರೇಂದ್ರಿಯದಲ್ಲಿ ತೋರಿದ ಅಸ್ಪಷ್ಟ, ಅಚಲ, ಸಚ್ಚಿದಾನಂದನು. ಪರಮಾತ್ಮನು (ಮೂಲ ಸಚ್ಚಿದಾನಂದವು) ಯಾವದೇ ಪ್ರಕಾರದ ವಿಕಾರವನ್ನು ಹೊಂದದೆ ಇದ್ದಕ್ಕಿಂದತೆಯೇ ಇರುವನು. 'ನಾನು ಸಚ್ಚಿದಾನಂದ ಪರಮಾತ್ಮನು' ಎಂಬುದೇ ಜೀವಾತ್ಮನ ಮೊಟ್ಟಮೊದಲನೆಯ ಜ್ಞಾನ ಅಥವಾ ತಿಳಿವಳಿಕೆಯು ಅಥವಾ ಮೊಟ್ಟ ಮೊದಲನೆಯ ಅನುಭವ (ಪ್ರಥಮಾನಭೂತಿಯು) ಅಥವಾ ಪ್ರಥಮ ತಿಳಿವಳಿಕೆಯು. ಈ ಪ್ರಥಮಾನುಭೂತಿಯ ಸ್ಥಿತಿಯಲ್ಲಿ 'ಮಾಯಾತನುವೇ' ಕರಣವು (ಉಪಾಧಿಯು) ಇದು ಸೃಷ್ಟಿಯ ಅಥವಾ ಸೃಷ್ಟಿಕ್ರಮದಲ್ಲಿಯ ಅತೀಸೂಕ್ಷ್ಮ ಮತ್ತು ಅತಿ ಪರಿಶುದ್ಧವಾದ ಪ್ರಕೃತಿಯ ಸ್ಥಿತಿಯು ಅಥವಾ ವಿಕಾರವು. ಮಾಯಾತನುವಿನಲ್ಲಿ ಪ್ರಕೃತಿಯ ಮಲಿನಾಂಶಗಳು ಇಲ್ಲ. ಅವು ನಿರತಿಶಯವಾಗಿ ವ್ಯಕ್ತಪಟ್ಟಿಲ್ಲ. ಆದ್ದರಿಂದ ಈ ಪ್ರಥಮಾನುಭೂತಿಯ 'ಮಾಯಾತನು' ಎಂಬ ಕರಣವು (ಉಪಾಧಿಯು) ಪೂರ್ಣ ಪರಿಶುದ್ಧವಿದೆ. ಈ ಪ್ರಥಮಾನುಭೂತಿಯ ಸ್ಥಿತಿಯಲ್ಲಿ ಶ್ವಾಸೋಚ್ಛ್ವಾಸ ಅಥವಾ ಪ್ರಕೃತಿಯ ಯಾವದೇ ಸ್ಥೂಲ ಅಥವಾ ಸೂಕ್ಷ್ಮ ಕಾರ್ಯಗಳ ತಿಳಿವಳಿಕೆ ಅಥವಾ ಜ್ಞಾನವಿಲ್ಲ. ಪ್ರಕೃತಿಯು ತ್ರಿಕಾಲಗಳಲ್ಲಿ ಸ್ವಯಂಸಿದ್ಧವಾದ, ವಿಕಾರ ರಹಿತ ಅಸ್ಪಷ್ಟ ಸಚ್ಚಿದಾನಂದದ ಆಧಾರದ ಮೇಲೆ ತೋರಿದ ತೋರಿಕೆ ಮಾತ್ರ. ಈ ಪ್ರಕೃತಿಯು ಸಚ್ಚಿದಾನಂದದ ಆಧಾರದ ಮೇಲೆ ತೋರುವದು. ಆದರೆ ಅದು ಸಚ್ಚಿದಾನಂದದಲ್ಲಿ ಯಾವದೇ ವಿಕಾರವನ್ನುಂಟು ಮಾಡುವದಿಲ್ಲ, ಮಾಡಲಾರದು. ಜೀವಾತ್ಮನು ಹೇಗೋ ತನ್ನ ಪ್ರಥಮಾನುಭೂತಿಯನ್ನು ಮರೆತಂತಾಗಿ ಪ್ರತಿಬಿಂಬನು ಅಥವಾ ಚಿದಾಭಾಸನು ಉಪಾಧಿಯ ಮುಖಾಂತರ ಬಾಹ್ಯ ಪ್ರವೃತ್ತಿಯುಳ್ಳವನಾಗುತ್ತಾನೆ. ಸಂಪೂರ್ಣ ಸೃಷ್ಟಿಕ್ರಮವು ಮತ್ತು ಸೃಷ್ಟಿಯು ಸಚ್ಚಿದಾನಂದದ ಆಧಾರದ ಮೇಲೆ ತೋರಿದ ಪ್ರಕೃತಿಯಲ್ಲಿಯೇ ಇರುತ್ತವೆ. ಜೀವಾತ್ಮನು ಪ್ರಕೃತಿಯ ಸೂಕ್ಷ್ಮ ಮತ್ತು ಸ್ಥೂಲಕಾರ್ಯ ಅಥವಾ ವಿಕಾರಗಳ ಕಡೆಗೆ ತನ್ನ ಲಕ್ಷ್ಯ ಕೊಡುತ್ತಾನೆ. ಅವನು ತನ್ನ ಮೂಲವನ್ನು ಮರೆತಂತಾಗಿದ್ದರೂ ಅತಿ ಮಂದವಾದ (ಅಸ್ಪಷ್ಟವಾದ) ಆನಂದಾನುಭೂತಿಯ ತಿಳಿವಳಿಕೆಯನ್ನು ಕಾಯ್ದಿರಿಸಿಕೊಂಡಿದ್ದಾನೆ. ಈಗ ಜೀವನ ಕರಣವು (ಉಪಾಧಿಯು) ಬಾಹ್ಯಪ್ರವೃತ್ತಿಯುಳ್ಳದ್ದಾಗಿದೆ ಮತ್ತು ಪ್ರಕೃತಿಯ ಮಲಿನಾಂಶಗಳಿಂದ ದೂಷಿತವಾಗಿದೆ. ಜೀವಾತ್ಮನ ಮಲಿನ, ದೂಷಿತ ವಿಕಾರ ಹೊಂದಿದ ಅಂತಃಕರಣದಲ್ಲಿ ಅಥವಾ ಉಪಾಧಿಯಲ್ಲಿ ಪ್ರಥಮಾನುಭೂತಿಯ ಆನಂದದ ನೆನಪು ಇದೆ.

ಜೀವಾತ್ಮನು ಸೋಪಾಧಿಕನಾಗಿ ಬಾಹ್ಯ ಪ್ರವೃತ್ತಿಯನ್ನು ಹೊಂದಿದಾಗ ಮತ್ತು ಸೂಕ್ಷ್ಮ ಮತ್ತು ಸ್ಥೂಲ ಶರೀರಗಳನ್ನು ಧರಿಸಿದಾಗ (ಅಂದರೆ ಆನಂದಮಯ, ವಿಜ್ಞಾನಮಯ, ಮನೋಮಯ, ಪ್ರಾಣಮಯ ಮತ್ತು ಅನ್ನಮಯ ಕೋಶಗಳನ್ನು ಧರಿಸಿದಾಗ)ಈ ಉಪಾಧಿಯು ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರಗಳೆಂಬ ರೂಪಗಳಿಂದ ನಾಲ್ಕು ಬಗೆಯಾಗಿ ಕಾರ್ಯಪ್ರವೃತ್ತವಾಗುತ್ತದೆ. ಪ್ರಥಮಾನುಭೂತಿಯ ಸ್ಥಿತಿಯು ಎಲ್ಲ ಕೋಶಗಳಿಗೆ ಅತೀತವಿರುತ್ತದೆ ಮತ್ತು ಅವುಗಳನ್ನು ಮೀರಿದೆ. ಪ್ರಥಮಾನುಭೂತಿಯಲ್ಲಿ ಎಳ್ಳಷ್ಟೂ ಈ ಕೋಶಗಳ ಭಾವ (ಭಾಸ) ವಿಲ್ಲ. ಅದು ಸಚ್ಚಿದಾನಂದದ ಅನುಭವಪೂರಿತ ಜ್ಞಾನವು. ಅನ್ನಮಯ ಕೋಶಧಾರಣೆಯೇ ಕಟ್ಟಕಡೆಯದು. ಪ್ರಾಣಮಯಕೋಶದ ಧಾರಣೆಯು ಉಪಾಂತವು. ಜೀವನು ಪ್ರಾಣಮಯ ಮತ್ತು ಅನ್ನಮಯ ಕೋಶಗಳನ್ನು ಧರಿಸಿದಾಗ ಶ್ವಾಸೋಚ್ಛ್ವಾಸ ಮತ್ತು ಉಳಿದ ಬಾಹ್ಯಕ್ರಿಯೆಗಳ ಮತ್ತು ಪಂಚಪ್ರಾಣಗಳ, ಪಂಚಜ್ಞಾನೇಂದ್ರಿಯಗಳ ಮತ್ತು ಪಂಚಕರ್ಮೇಂದ್ರಿಯಗಳ ಕ್ರಿಯೆಗಳ ಮತ್ತು ಸ್ಥೂಲ ಮತ್ತು ಸೂಕ್ಷ್ಮ ಶರೀರಗಳ ಘಟಕಗಳ ತಿಳಿವಳಿಕೆಯುಂಟಾಗುವದು.

ಆನಂದದ ತಿಳಿವಳಿಕೆ ಅಥವಾ ಜ್ಞಾನವು ಶ್ವಾಸೋಚ್ಛ್ವಾಸದಲ್ಲಿ, ಪಂಚ ಪ್ರಾಣಗಳಲ್ಲಿ, ಪಂಚ ಜ್ಞಾನೇಂದ್ರಿಯಗಳಲ್ಲಿ ಅಥವಾ ಪಂಚ ಕರ್ಮೇಂದ್ರಿಯಗಳಲ್ಲಿ ಇಲ್ಲ. ಆನಂದದ ತಿಳಿವಳಿಕೆಯು ಮನಸ್ಸು ಅಥವಾ ಅಂತಃಕರಣದಲ್ಲಿರುವದು. ಆನಂದದ ತಿಳಿವಳಿಕೆ ಅಥವಾ ಅನುಭವವವನ್ನು ಜೀವನು ತನ್ನ ಉಪಾಧಿಯಾದ ಅಂತಃಕರಣದಲ್ಲಿ ಕಾಯ್ದಿರಿಸಿಕೊಂಡಿದ್ದಾನೆ. ಜೀವನು ತನ್ನ ಮೂಲ ಶುದ್ಧ ಆನಂದದ ಪ್ರಥಮ ಅನುಭವವನ್ನು ಮರೆತು, ಬಾಹ್ಯ ಪ್ರವೃತ್ತಿಯುಳ್ಳವನಾಗಿ, ಜ್ಞಾನೇಂದ್ರಿಯಗಳ ಮುಖಾಂತರ ಬಾಹ್ಯ ವಿಷಯ ವಸ್ತುಗಳಲ್ಲಿ ಸುಖವನ್ನು ಹುಡುಕುತ್ತಿದ್ದಾನೆ. ಪಂಚಪ್ರಾಣ, ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳಿಗೆ ಆನಂದದ ಅನುಭವ ಅಥವಾ ಜ್ಞಾನವಿಲ್ಲ. ಏಕೆಂದರೆ ಇವು ಪ್ರಕೃತಿಯ ಸ್ಥೂಲ ಘಟಕಗಳ, ನಂತರದ ಜಡ ಕಾರ್ಯಗಳಾಗಿವೆ. ಪ್ರಕೃತಿಯ ಸ್ಥೂಲ ಘಟಕಗಳ ಸ್ಥೂಲ ಕಾರ್ಯಗಳಾದಂಥ ಇವುಗಳಿಗೆ ಕಾಮ ಕ್ರೋಧಗಳ ಶಕ್ತಿ ಅಥವಾ ಸಾಮರ್ಥ್ಯವಿಲ್ಲ. ಏಕೆಂದರೆ ಅವುಗಳಿಗೆ ಮೂಲ ಸಚ್ಚಿದಾನಂದ ಸ್ವರೂಪದ ಪ್ರತಿಬಿಂಬವನ್ನು ಗ್ರಹಿಸುವಂಥ ಸಾಮರ್ಥ್ಯವಿಲ್ಲ. ಮನಸ್ಸಿನಲ್ಲಿ ಸಚ್ಚಿದಾನಂದ ಪರಮಾತ್ಮನ ಪ್ರತಿಬಿಂಬಿತವಾದ ಜೀವಾತ್ಮನು (ಅಂತಃಕರಣ, ಅಹಂಕಾರ) ಬಾಹ್ಯಪ್ರವೃತ್ತಿಯುಳ್ಳವನಾಗಿ ದೂಷಿತನಾಗಿದ್ದರೂ ಆನಂದದ ಅನುಭವವನ್ನು ಹೊಂದುವ ಸಾಮರ್ಥ್ಯವುಳ್ಳವನಾಗಿದ್ದಾನೆ ಮತ್ತು ಅವನೊಬ್ಬನಿಗೇ ಆನಂದ ಮುಂತಾದವುಗಳ ಬಯಕೆಯುಂಟಾಗುವದು. ಆದರೆ ಪಂಚಪ್ರಾಣಗಳು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಪೂರ್ಣ ಜಡವಿರುವದರಿಂದ, ಅವುಗಳಿಗೆ ಯಾವದೇ ಬಯಕೆಯು ಉಂಟಾಗಲಾರದು. ವಿಷಯ ವಸ್ತುಗಳ ಮತ್ತು ವಿಷಯ ಸುಖದ ಆಶೆಯು ಮನಸ್ಸಿನಲ್ಲಿಯೇ ಉದಯವಾಗುವದು.



ಇದರ ಬದಲಾಗಿ ಪಂಚಪ್ರಾಣ, ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯಗಳಲ್ಲಿ ಉಂಟಾಗುವದಿಲ್ಲ. ಜೀವನು ತನ್ನ ಸೂಕ್ಷ್ಮ ಮತ್ತು ಪೂರ್ಣ ಪರಿಶುದ್ಧವಾದ ಮಾಯಾ ತನುವಿನ ಉಪಾಧಿಯ ಆನಂದದ ಪ್ರಥಮ ಅನುಭವವನ್ನು ಮರೆತಂತಾಗಿ ವಿಷಯ ವಸ್ತುಗಳಲ್ಲಿ ಆನಂದವು ಸಿಗುತ್ತದೆ ಎಂಬ ತಪ್ಪು ತಿಳಿವಳಿಕೆಯಿಂದ ಮನಸ್ಸಿನಲ್ಲಿ ಬಾಹ್ಯ ವಿಷಯವಸ್ತುಗಳ ಮತ್ತು ವಿಷಯ ಸುಖದ ಬಯಕೆಯುಂಟಾಗುತ್ತದೆ. ಈ ಮಾಯಾ ತನುವೆಂಬ ಉಪಾಧಿಯು ವ್ಯವಹಾರಿಕ ಜಾಗ್ರದಲ್ಲಿ ಮನಸ್ಸಾಗಿ ಪರಿವರ್ತನೆಗೊಳ್ಳುವದು ಮತ್ತು ಸತ್ವಗುಣದಿಂದ ಕೂಡಿದ್ದರೂ ರಜತಮಗುಣಗಳಿಂದ ಮಲಿನ ಮತ್ತು ದೂಷಿತವಾಗುವದು. ಸಾಮಾನ್ಯವಾಗಿ ಅದು ರಜತಮಗಳಿಂದ ಅತಿ ಅಸ್ಥಿರ, ದೂಷಿತ ಮತ್ತು ಚಂಚಲವಾಗಿರುವದು. ಮನಸ್ಸು ರಜತಮಗಳಿಂದ ಮಲಿನ ಮತ್ತು ದೂಷಿತವಾಗಿರುವದರಿಂದ ಅದಕ್ಕೆ ತನ್ನ ನಿಜವನ್ನು ತಿಳಿದುಕೊಳ್ಳಲು (ಸಾಕ್ಷಾತ್ಕರಿಸಿಕೊಳ್ಳಲು) ಅಸಾಧ್ಯವಾಗಿದೆ. ಮನಸ್ಸು ಪಂಚ ಜ್ಞಾನೇಂದ್ರಿಯಗಳ ಮುಖಾಂತರ ಬಾಹ್ಯವಿಷಯ ವಸ್ತುಗಳ ಬಗ್ಗೆ ರಾಗ ದ್ವೇಷಗಳನ್ನು ಹೊಂದಿದೆ ಮತ್ತು ಸುತ್ತಮುತ್ತಲಿನ ಪರಿಸ್ಥಿತಿಗನುಗುಣವಾಗಿ ಅವುಗಳ ಬಗ್ಗೆ ಆಸಕ್ತಿ, ಅನಾಸಕ್ತಿಗಳನ್ನು ಹೊಂದಿದೆ. ಶ್ವಾಸೋಚ್ಛ್ವಾಸ ಅಥವಾ ಪ್ರಾಣಗಳು ಬಾಹ್ಯವಿಷಯ ವಸ್ತುಗಳ ಬಗ್ಗೆ ರಾಗದ್ವೇಷಗಳನ್ನು ಹೊಂದಲಾರವು. ಅದೇರೀತಿಯಾಗಿ ಕಾಮ, ಕ್ರೋಧ, ಮೋಹ ಮುಂತಾದವುಗಳನ್ನು ಹೊಂದುವದು ಪಂಚಜ್ಞಾನೇಂದ್ರಿಯಗಳ ಮತ್ತು ಪಂಚಕರ್ಮೇಂದ್ರಿಯಗಳ ಕಾರ್ಯವೇ ಅಲ್ಲ.

ಪ್ರಾಣ ಮತ್ತು ಇಂದ್ರಿಯಗಳಿಂದ ಮಾಡಿದ ವ್ರತ, ಕರ್ಮ, ಬಾಹ್ಯ ಸಾಧನೆಗಳಿಗೂ ಶಾಶ್ವತ ಸುಖವನ್ನು ಹೊಂದುವ ಸಾಧನೆಗೂ ಏನೂ ಸಂಬಂಧವೇ ಇಲ್ಲ. ಜೀವನು ದೋಷರಹಿತ ಅಥವಾ ದೋಷಪೂರ್ಣ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳನ್ನು ಹೊಂದಿರಬಹುದು. ಶಾಶ್ವತ ಸುಖ ಹೊಂದಲು ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳ ಅವಶ್ಯಕತೆ ಇಲ್ಲ. ಜೀವನು ಅವುಗಳ ಸಹಾಯವಿಲ್ಲದೇ ಶಾಶ್ವತ ಸುಖವನ್ನು ಹೊಂದಬಲ್ಲನು. ಇದು ಶ್ವಾಸೋಚ್ಛ್ವಾಸಕ್ಕೂ ಅನ್ವಯಿಸುವದು. ಜೀವನು ಅಸ್ತಮಾ ರೋಗದಿಂದ ಬಳಲುತ್ತಿದ್ದರೂ, ಅವನು ಪರಿಶುದ್ಧ ಅಂತಃಕರಣವುಳ್ಳವನಿದ್ದರೆ ಶಾಶ್ವತ ಸುಖವನ್ನು ಹೊಂದಬಲ್ಲನು. ಶಾಶ್ವತಸುಖವನ್ನು ಹೊಂದುವದು ಅತಿ ಪರಿಶುದ್ಧ ಮನಸ್ಸಿನಿಂದ ಮಾತ್ರ ಸಾಧ್ಯ. ಇದು ಅತ್ಯವಶ್ಯಕವು. ಪ್ರಥಮಾನುಭೂತಿಯಲ್ಲಿ ಶ್ವಾಸೋಚ್ಛ್ವಾಸ, ಪ್ರಾಣಗಳ, ಜ್ಞಾನೇಂದ್ರಿಯಗಳ, ಕರ್ಮೇಂದ್ರಿಯಗಳ, ದೇಹ ಮತ್ತು ದೇಹದ ಅವಯವಗಳ ಜ್ಞಾನ ಅಥವಾ ತಿಳಿವಳಿಕೆಯು ಎಳ್ಳಷ್ಟು ಇರಲಿಲ್ಲ. ಶ್ವಾಸೋಚ್ಛ್ವಾಸ,ಪ್ರಾಣಗಳು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಪ್ರಥಮಾನುಭೂತಿಗೆ ಸಂಬಂಧಪಟ್ಟವುಗಳಲ್ಲ. ಪ್ರಥಮಾನುಭೂತಿಯ ಹೊರಗಿನವುಗಳಾಗಿವೆ. ಪ್ರಥಮಾನುಭೂತಿಯಲ್ಲಿ ಅವುಗಳಿಗೆ ಸ್ಥಾನವೇ ಇಲ್ಲ. ಇವುಗಳು ಪ್ರಕೃತಿಯ ಸ್ಥೂಲ ಘಟಕಗಳ ಸ್ಥೂಲ ಕಾರ್ಯಗಳು.

ಇವುಗಳಲ್ಲಿ ಕೆಲವು ಸೂಕ್ಷ್ಮವೆಂದು ತೋರಿದರೂ ಮನಸ್ಸಿಗೆ ಹೋಲಿಸಲಾಗಿ ಅವು ಸ್ಥೂಲವೇ ಇರುವವು. ಪ್ರಥಮಾನುಭೂತಿಯ ಉಪಾಧಿಯಾದ ಮಾಯಾತನುವು ಮಾತ್ರ ಎಲ್ಲವುಗಳಿಗಿಂತಲೂ ಅತಿ ಸೂಕ್ಷ್ಮ ಮತ್ತು ಪರಿಶುದ್ಧವಾದುದು. ಆದರೆ ಸಾಮಾನ್ಯವಾಗಿ ಇವೆಲ್ಲವುಗಳು ಪ್ರಕೃತಿಯ ಸ್ಥೂಲ ಘಟಕಗಳ ಸ್ಥೂಲ ಕಾರ್ಯಗಳು.

ಕಾಮ ಕ್ರೋಧಾದಿಗಳು ಮಲಿನ, ದೂಷಿತ ಮನಸ್ಸಿನಲ್ಲಿ ಉದಯವಾಗುವವು. ಆದರೆ ಪ್ರಾಣ ಅಥವಾ ಇಂದ್ರಿಯಗಳಲ್ಲಿ ಕಾಮ ಕ್ರೋಧಾದಿಗಳು ಉದಯವಾಗುವದಿಲ್ಲ. ಮನಸ್ಸಿನಲ್ಲಿಯ ಕಾಮ ಕ್ರೋಧಾದಿಗಳು ತಪ್ಪು ತಿಳಿವಳಿಕೆ ಮತ್ತು ಅಜ್ಞಾನ ಮುಖಾಂತರವೇ ಇವೆ. ವಿಷಯಗಳಲ್ಲಿ ಸುಖವಿದೆ ಎಂಬ ತಪ್ಪು ತಿಳಿವಳಿಕೆಯು ಜೀವನು ಬಾಹ್ಯ ವಿಷಯ ವಸ್ತುಗಳಲ್ಲಿ ಸುಖವನ್ನು ಹುಡುಕುವಂತೆ ಪ್ರವೃತ್ತಿಸುತ್ತದೆ. ಈ ತಪ್ಪು ತಿಳಿವಳಿಕೆಯು ಪ್ರಾಣ, ಇಂದ್ರಿಯ, ಸ್ಥೂಲ ದೇಹದಲ್ಲಿ ನೆಲೆಗೊಂಡಿಲ್ಲ. ಆದರೆ ಅದು ದೂಷಿತ ಮನಸ್ಸಿನಲ್ಲಿ ನೆಲೆಯಾಗಿದೆ. ಸ್ವರೂಪದ ಅಜ್ಞಾನದ ಮುಖಾಂತರ ಉಂಟಾದ ಈ ತಪ್ಪು ತಿಳಿವಳಿಕೆ ಯಿಂದಲೇ ಮಾನವನು ಸರ್ವ ದುಃಖಗಳಿಂದ ಬಳಲುತ್ತಿದ್ದಾನೆ. ಮನಸ್ಸು ನಿಷ್ಪ್ರಯೋಜ ಕವಾದ ಅನಾತ್ಮ ವಸ್ತುಗಳ ಜ್ಞಾನವನ್ನು ಗಳಿಸುವದರಲ್ಲಿಯೇ ತನ್ಮಯವಾಗಿದೆ. ಮನಸ್ಸು ತನ್ನ ಮೂಲ ಶುದ್ಧ ಮಾಯಾತನುವಿನ ಪ್ರಥಮಾನುಭೂತಿಯನ್ನು ಅಪೂರ್ಣವಾಗಿ ಮರೆತು ವಿಷಯವಾಸನೆಗಳಿಗೆ ಗುಲಾಮವಾಗಿದೆ. ಪ್ರತಿದಿನ, ಆನಂದಮಯ ಕೋಶದ ಅಂಶವಾದ ಗಾಢವಾದ ನಿದ್ರೆಯಲ್ಲಿ ಮಾಯಾವೃತ್ತಿಯ ಮುಖಾಂತರ ಮನಸ್ಸು ಆನಂದಾನುಭವ ಹೊಂದುವದು, ಗಾಢವಾದ ನಿದ್ರೆಯಲ್ಲಿ ಯಾವದೇ ವಿಷಯ ವಸ್ತುಗಳಿಗೂ, ಇಂದ್ರಿಯಗಳಿಗೂ, ಪ್ರಾಣಗಳಿಗೂ ಅವುಗಳ ಕ್ರಿಯೆಗಳಿಗೂ, ಗುಲಾಮಗಿರಿಯಿಲ್ಲ. ಮನಸ್ಸು ವಿಷಯ ವಸ್ತುಗಳ ಮತ್ತು ಪ್ರಾಣೇಂದ್ರಿಯಗಳು ಮತ್ತು ಅವುಗಳ ಕ್ರಿಯೆಗಳ ಯಾವದೇ ಸಂಬಂಧ ಅಥವಾ ಗುಲಾಮಗಿರಿಯಿಲ್ಲದೇ ಗಾಢನಿದ್ರೆಯಲ್ಲಿ ಪೂರ್ಣಾನಂದವನ್ನು ಅನುಭವಿಸುತ್ತದೆ. ಮನಸ್ಸು ಮಾಯಾತನುವಿನ ಅನುಭವವನ್ನಷ್ಟೇ ಏಕೆ, ಗಾಢ ನಿದ್ರೆಯ ಅನುಭವವನ್ನೂ ಮರೆತಿದೆ. ಗಾಢ ನಿದ್ರೆಗೆ ಹೋಗುವಾಗ ಅಥವಾ ಗಾಢನಿದ್ರೆಯಲ್ಲಿ ಯಾವದೇ ಪ್ರಾಣನಿರೋಧ ಅಥವಾ ಇಂದ್ರಿಯಗಳ ನಿಗ್ರಹದ ಭಾನವಿಲ್ಲ ಅಥವಾ ತಿಳಿದು ಅವುಗಳ ನಿಗ್ರಹವನ್ನು ಮಾಡಿಲ್ಲ. ಗಾಢವಾದ ನಿದ್ರೆಯಲ್ಲಿ ಅವೆಲ್ಲವೂ ಲಯವಾಗುವವು. ನಿದ್ರೆಯ ಸುಂದು ಪ್ರಾರಂಭವಾದಾಗಲೇ ಪ್ರಾಣ ಇಂದ್ರಿಯಾದಿಗಳ ತಿಳಿವಳಿಕೆಯು ಮಾಯವಾಗುವದು.

ಸ್ವರೂಪದ ಅಜ್ಞಾನವು, ಜೀವನಿಗೆ ತಾನು ದೇಹವು, ಪ್ರಾಣಗಳು, ಇಂದ್ರಿಯಗಳು, ಎಂಬ ಅಧ್ಯಾಸಕ್ಕೆ ಕಾರಣವಾಗುವದು ಮತ್ತು ಅವುಗಳ ಲಕ್ಷಣಗಳನ್ನು ತಾನೇ ತನ್ನ ಮೇಲೆ ಆರೋಪಿಸಿಕೊಳ್ಳುವನು. ಅವುಗಳ ಲಕ್ಷಣಗಳನ್ನು ಇವನ ಮೇಲೆ ಆರೋಪಿಸುವದಕ್ಕಾಗಿ



ಅಲ್ಲಿ ಯಾವ ಕರ್ತೃವೂ ಇಲ್ಲ. ಜೀವನ ಎಲ್ಲ ವ್ಯವಹಾರಿಕ ಕಾರ್ಯ ಮತ್ತು ಕ್ರಿಯೆಗಳು ಅಧ್ಯಾಸದಲ್ಲಿಯೇ ಮಾಡಲ್ಪಡುವವು. ಇವುಗಳಿಗೆ ಗಾಢನಿದ್ರೆಯಲ್ಲಿ ಕೂಡ ಸ್ಥಾನವೇ ಇದೆ. ಎಲ್ಲ ಧಾರ್ಮಿಕ ಅಥವಾ ಯೋಗದ ಅಥವಾ ವೈಜ್ಞಾನಿಕ ಕಾರ್ಯ ಮತ್ತು ಕ್ರಿಯೆಗಳು ವ್ಯವಹಾರಿಕ ಜಾಗ್ರದಲ್ಲಿಯೇ, ಅವು ಕನಸು ಅಥವಾ ಗಾಢನಿದ್ರೆಯಲ್ಲಿ ಪ್ರವೇಶಿಸಲಾರವು. ಇವೆಲ್ಲವೂ ಅಜ್ಞಾನದ ಕಲ್ಪನೆಗಳು ಮತ್ತು ವ್ಯವಹಾರಿಕ ಜಾಗ್ರದ ಸಮಾನ ದರ್ಜೆಯವು. ಇವು ಕನಸು ಮತ್ತು ಗಾಢನಿದ್ರೆಗೂ ಕೂಡ ನಿಷ್ಪ್ರಯೋಜಕವಾದವು. ರಜ, ತಮಗಳ ಕೊಳೆ ಇಲ್ಲದ, ಅತಿ ಸೂಕ್ಷ್ಮ ಮತ್ತು ಪರಿಶುದ್ಧ ಅರಿವಿನ ಉಪಾಧಿಯ ಸ್ಥಿತಿಯಲ್ಲಿ ಇವೆಲ್ಲವುಗಳಿಗೆ ಸ್ಥಾನವೆಲ್ಲಿ? ಅಂದ ಮೇಲೆ ಪ್ರಾಣ, ಇಂದ್ರಿಯಗಳ ಕ್ರಿಯೆಗಳಿಗೆ ಮತ್ತು ಸ್ಥಿತಿಗತಿಗಳಿಗೆ ಮಾಯಾತನುವಿನ ಸ್ಥಿತಿಯಲ್ಲಿ ಸ್ಥಾನವೆಲ್ಲಿ? ನಿಶ್ಚಿತವಾಗಿ ಅವುಗಳಿಗೆ ಮಾಯಾತನುವಿನ ಸ್ಥಿತಿಯಲ್ಲಿ ಸ್ಥಾನವೇ ಇಲ್ಲ.

ಕರ್ಮ ಮತ್ತು ಉಪಾಸನೆಗಳು ಸಹ ಮುಖ್ಯ ವಾಯುಗಳ (ಪ್ರಾಣಗಳ) ಮತ್ತು ಅವುಗಳ ಕ್ರಿಯೆಗಳ ವರ್ಗದವುಗಳೇ. ಕನಸು ಮತ್ತು ಗಾಢನಿದ್ರೆಯಲ್ಲಿ ಕರ್ಮ, ಉಪಾಸನೆಗಳ ಭಾನವೇ (ಜ್ಞಾನ) ಇಲ್ಲ. ಜಾಗ್ರ ಮತ್ತು ಕನಸುಗಳ ಕಾರ್ಯಕ್ಷೇತ್ರಗಳು ಒಂದಕ್ಕೊಂದು ಭಿನ್ನವಾದವು. ಗಾಢನಿದ್ರೆ ಅಥವಾ ಕನಸನ್ನು ಹೊಂದಲು ಕರ್ಮ ಮತ್ತು ಉಪಾಸನೆಗಳನ್ನು ಮಾಡುವ ಅವಶ್ಯಕತೆ ಇಲ್ಲ. ಗಾಢ ನಿದ್ರೆಯಲ್ಲಿ ಜಾಗ್ರದ ಜ್ಞಾನವೇ ಕಳಚಿ ಬೀಳುವದು ಅಥವಾ ಲಯವಾಗುವದು. ಜಾಗ್ರದ ಲಯದೊಡನೆ ಜಾಗ್ರದ ಧಾರ್ಮಿಕ, ಯೋಗದ, ಪ್ರಾಣನಿರೋಧದ ಕ್ರಿಯೆಗಳು ಮತ್ತು ಕರ್ಮಗಳು ತಮ್ಮಷ್ಟಕ್ಕೆ ತಾವೇ ಕಳಚಿ ಬೀಳುವವು.

ಶಾಶ್ವತ ಸುಖವನ್ನು ಹೊಂದಲು ಅಧ್ಯಾಸವನ್ನು ತೆಗೆದುಹಾಕುವದೊಂದೇ ಸಾಧನ. ತನ್ನ ಸ್ವರೂಪದ ಅಜ್ಞಾನವನ್ನು ಕಳೆದುಕೊಳ್ಳುವದರಿಂದ ಅಧ್ಯಾಸವು ತೆಗೆದುಹಾಕಲ್ಪಡುವದು. ಸ್ವರೂಪದ ಅಜ್ಞಾನವನ್ನು ತೆಗೆದು ಹಾಗಬೇಕಾದರೆ ನಿತ್ಯವಾವುದು, ಅನಿತ್ಯವಾವುದು ಎಂಬ ವಿವೇಕವನ್ನೇ ಆಶ್ರಯಿಸಬೇಕು. ಆದ್ದರಿಂದ ಮಾನವನು ತನ್ನ ನಿಜವೇನೆಂಬುದನ್ನು ತಿಳಿದುಕೊಳ್ಳಬೇಕು. ಕಡೆಗೆ "ತಾನು ನಿಜವಾಗಿ ಯಾರು?" ಎಂಬ ಪ್ರಶ್ನೆಯನ್ನು ಬಗೆಹರಿಸಿಕೊಳ್ಳಲೇಬೇಕು. ಏಕೆಂದರೆ ನಿಜಸುಖದ ಮೂಲವು ತನ್ನ ನಿಜ ಸ್ವರೂಪವೇ ಆಗಿದೆ.

ನಿಜವಾಗಿ ಸುಖ ಹೊಂದುವದಕ್ಕಾಗಿ ಪ್ರಶ್ನಿಸುವವನ ಜ್ಞಾನೇಂದ್ರಿಯ ಅಥವಾ ಕರ್ಮೇಂದ್ರಿಯಗಳ ನಿಗ್ರಹವು ತನ್ನಿಂದ ತಾನೇ ಆಗುತ್ತದೆ. ಎಲ್ಲ ಜೀವಿಗಳಿಗೂ ಶಾಶ್ವತ ಸುಖದ ಬಯಕೆ ಇದೆ. ರಾಗದ ವಿಷಯಗಳು ಸಿಕ್ಕಾಗ, ಮನಸ್ಸು ಕ್ಷಣಿಕವಾಗಿ ನಿಶ್ಚಲವಾದಾಗ ಎಲ್ಲ ಜೀವಿಗಳು ತೋರಿಕೆಯ ಸುಖವನ್ನು ಅನುಭವಿಸುತ್ತವೆ. ಈ ತೋರಿಕೆಯ ಸುಖವು ಕೂಡ ತನ್ನ ನಿಜಸ್ವರೂಪ ಸುಖದ ಪ್ರತಿಭಾಸವೇ ಆಗಿದೆ. ಆದರೆ ಈ ಸುಖವು ವಿಷಯಗಳ

ಮುಖಾಂತರ ಉಟಾದದ್ದೆಂದು ಜೀವನು ತಪ್ಪು ತಿಳಿದುಕೊಂಡಿದ್ದಾನೆ. ಮನಸ್ಸೇ ಜೀವಾತ್ಮನ ಮೂಲಕ ಆನಂದವನ್ನು ಅನುಭವಿಸುವದು. ಆದರೆ ಪ್ರಾಣೇಂದ್ರಿಯಗಳಿಗೆ ಅರಿವಿಲ್ಲದ ಮೂಲಕ (ಜಡವಿರುವದರಿಂದ) ಅವು ಆನಂದವನ್ನು ಅನುಭವಿಸಲಾರವು. ಕನಸು, ಗಾಢನಿದ್ರೆ ಮತ್ತು ತುರ್ಯಾವಸ್ಥೆಗಳಲ್ಲಿ ಮನಸ್ಸು ಮತ್ತು ಅದರ ಭಿನ್ನ ವೃತ್ತಿಗಳಲ್ಲಿ ಸಚ್ಚಿದಾನಂದ ಜೀವಾತ್ಮನು ಪ್ರತಿಫಲಿಸುವನು. ಈ ಪ್ರತಿಫಲದೊಡನೆ ಮನಸ್ಸು ಆನಂದವನ್ನು ಅನುಭವಿಸುವದು. ಬೇರೆ ಬೇರೆ ಅವಸ್ಥೆಗಳಲ್ಲಿ ಜೀವಾತ್ಮನಿಗೆ ಬೇರೆ ಬೇರೆ ನಾಮಗಳನ್ನು ಕೊಡಲಾಗಿದೆ. ಆದ್ದರಿಂದ ಮನಸ್ಸೇ ಆನಂದವನ್ನು ಅನುಭವಿಸುವ ಸಾಧನವು. ಪ್ರಾಣೇಂದ್ರಿಯಗಳು ಸುಖವನ್ನು ಅನುಭವಿಸುವ ಸಾಧನಗಳಲ್ಲ. ಮನಸ್ಸು ಆನಂದವನ್ನು ಅನುಭವಿಸಬೇಕಾದರೆ ನಾವು ಅದನ್ನು ಶಾಂತ ಮತ್ತು ನಿಶ್ಚಲ ಮಾಡಬೇಕು. ವಿವೇಕ ವೈರಾಗ್ಯಗಳ ಮೂಲಕ ತಪ್ಪು ತಿಳಿವಳಿಕೆಯಿಂದ ಸುಖವನ್ನು ಕೊಡುವವು ಎಂದು ತಿಳಿದುಕೊಂಡ ವಿಷಯ ವಸ್ತುಗಳ ಬಗ್ಗೆ ಮನಸ್ಸಿನಲ್ಲಿಯ ವಿಷಯ ವಾಸನೆಗಳನ್ನು ನಾಶ ಮಾಡಿ ಮನಸ್ಸನ್ನು ಶಾಂತಗೊಳಿಸುವದೇ ನಿಜಯೋಗವು.

ಚಿತ್ತವೃತ್ತಿ ನಿರೋಧವೇ ಯೋಗವೆಂದು ವಿವರಿಸಲ್ಪಟ್ಟಿದೆ. ಆದರೆ ಪ್ರಾಣ ಅಥವಾ ವಾಯು ನಿರೋಧವೆಂದು ವಿವರಿಸಿಲ್ಲ. ಪ್ರಾಣವು ಜೀವಾತ್ಮನನ್ನೊಳಗೊಂಡ ಸೂಕ್ಷ್ಮ ಶರೀರವನ್ನು ಒಂದು ಸ್ಥೂಲ ಶರೀರದಿಂದ ಮತ್ತೊಂದು ಸ್ಥೂಲ ಶರೀರಕ್ಕೆ ಒಯ್ಯುವ ವಾಹನವು. ಜೀವಿಗಳಿಗೆ ಅವುಗಳ ಪಾಪ ಪುಣ್ಯ ಕರ್ಮ ಮತ್ತು ವಾಸನೆಗಳಿಗನುಗುಣವಾಗಿ ಹೀನ ಅಥವಾ ಶ್ರೇಷ್ಠ ಜನ್ಮವು ಬರುವದು. ಪ್ರಾಣವನ್ನು ನಿರೋಧಿಸಿದಾಗ ಮನಸ್ಸು ನಿಶ್ಚಲವಾಗುವದು ಮತ್ತು ಪ್ರಾಣ ನಿರೋಧವಿರುವವರೆಗೆ ಅದು ನಿಶ್ಚಲವಿದ್ದು ಆನಂದಾನುಭವವಾಗುವದು. ಆದರೆ ಮನಸ್ಸಿನಲ್ಲಿಯ ವಿಷಯ ವಾಸನೆಗಳು ನಾಶವಾಗಿರುವದಿಲ್ಲ. ಪ್ರಾಣ ನಿರೋಧವು ಮುಗಿದಾಗ ಮನಸ್ಸಿನ ನಿಶ್ಚಲತ್ವವೂ ಕೊನೆಗೊಳ್ಳುವದು ಮತ್ತು ಪ್ರಾಣ ನಿರೋಧದ ಕಾಲಕ್ಕೆ ಪ್ರಾಣ ನಿರೋಧದ ಮೂಲಕ ಮನಸ್ಸಿನಲ್ಲಿ ಸುಪ್ತವಾಗಿರತಕ್ಕ ವಿಷಯವಾಸನೆಗಳು ವ್ಯಕ್ತವಾಗುವವು ಅಥವಾ ಪುಟಿದೇಳುವವು ಮತ್ತು ಜೀವನು ವಿಷಯಗಳು ಇಂದ್ರಿಯಗಳು ನಿಜಸುಖವನ್ನು ಕೊಡುವವೆಂಬ ದೃಢವಾದ ತಪ್ಪು ತಿಳಿವಳಿಕೆಯಿಂದ ಸುಖದುಃಖಗಳ ವ್ಯಾವಹಾರಿಕ ಪ್ರಪಂಚದ ತಿರುಗಣಿ ಮಡದಲ್ಲಿ ಬೀಳುವನು. ಪ್ರಾಣನಿರೋಧದಿಂದ ಸೂಕ್ಷ್ಮ ಶರೀರದಲ್ಲಿಯ ವಿಷಯವಾಸನೆಗಳು ನಾಶವಾಗುವದಿಲ್ಲ. ಏಕೆಂದರೆ ಪ್ರಾಣನಿರೋಧವನ್ನು ಮಾಡದೆ ಇರುವದರಿಂದ ವಿಷಯವಾಸನೆಗಳು ಉಂಟಾಗಿಲ್ಲ. ಪ್ರಾಣ ನಿರೋಧ ಮಾಡದೇ ಇರುವದರಿಂದ ವಿಷಯವಾಸನೆಗಳು ಉಂಟಾಗಿದ್ದರೆ, ಪ್ರಾಣ ನಿರೋಧದಿಂದ ಅವು ನಾಶವಾಗುತ್ತಿದ್ದವು. ಆದರೆ ವಿಷಯವಾಸನೆಗಳು ವಿವೇಕ ವೈರಾಗ್ಯಗಳು ಇಲ್ಲದೇ ಇರುವದರಿಂದ ಅಧ್ಯಾಸದ ಮೂಲಕ ಮತ್ತು ತನ್ನ ನಿಜಸ್ವರೂಪ ಮತ್ತು ಆನಂದದ ಅಜ್ಞಾನದಿಂದ ನೆಲೆಸಿವೆ.



ಮನಸ್ಸು, ವಿವೇಕ, ವೈರಾಗ್ಯ ಮತ್ತು ಸತತ ಅಭ್ಯಾಸದಿಂದ ನಿಗ್ರಹವಾಗುವದು. ಆದ್ದರಿಂದ ಸುಖವಾವುದು ಮತ್ತು ದುಃಖವಾವುದು, ಶಾಶ್ವತವಾವುದು ಮತ್ತು ಅಶಾಶ್ವತವಾವುದು, ಸತ್ಯವಾವುದು ಮತ್ತು ಅಸತ್ಯವಾವುದು ಎಂಬ ವಿವೇಕದ ಸತತ ಅಭ್ಯಾಸವು ನಡೆಯಬೇಕು. ಈ ವಿವೇಕದ ಸತತ ಅಭ್ಯಾಸದಿಂದ ಶಾಶ್ವತ ಸುಖವನ್ನು ಹೊಂದುವ ಸರಿಯಾದ ಸಾಧನೆಯ ತಿಳಿವಳಿಕೆಯುಂಟಾಗುವದು. ಇದು ನಮ್ಮನ್ನು ಶಾಶ್ವತ ಸುಖಕ್ಕೊಯ್ಯುವದು. ವೈರಾಗ್ಯವೇ ಶಾಶ್ವತ ಸುಖವನ್ನು ಹೊಂದುವ ಸರಿಯಾದ ಸಾಧನೆಯು. ವೈರಾಗ್ಯವು ಸ್ವಸಂತೋಷದಿಂದ ಮನಸ್ಸನ್ನು ನಿಗ್ರಹಿಸುವದು. ವಿವೇಕವು ಮನಸ್ಸಿನ ತಪ್ಪು ತಿಳಿವಳಿಕೆಯಿಂದ ಉಂಟಾದ ವಿಷಯಗಳ ಮೋಹ ಮತ್ತು ಆಸಕ್ತಿಯೇ ಅದರ ದುಃಖಕ್ಕೂ ಬಂಧನಕ್ಕೂ ಕಾರಣವು ಮತ್ತು ವಿಷಯಗಳ ವೈರಾಗ್ಯ ಮತ್ತು ಅನಾಸಕ್ತಿಯೇ ಅದರ ಸುಖಕ್ಕೂ ಮುಕ್ತಿಗೂ ಕಾರಣವೆಂಬುದನ್ನು ಮನಸ್ಸಿಗೆ ತಿಳಿಸುವದು. ಕರ್ಮ, ಉಪಾಸನೆ, ಪ್ರಾಣರೋಧ ಮುಂತಾದ ಜಡಕ್ರಿಯೆಗಳು ಶಾಶ್ವತ ಸುಖವನ್ನು ಹೊಂದಲು ಸಹಾಯಕವಾಗುವದಿಲ್ಲ. ಇವೆಲ್ಲವುಗಳು ಅಧ್ಯಾಸದೊಳಗೇ ಮಾಡಲ್ಪಡುತ್ತವೆ. ಅಜ್ಞಾನದ ಕಾರ್ಯಗಳಾದ ಇವು ಅಜ್ಞಾನವನ್ನು ಅಥವಾ ಅಧ್ಯಾಸವನ್ನು ಹೇಗೆ ತೆಗೆದುಹಾಕಬಲ್ಲವು! ಉದಾಹರಣೆಗಾಗಿ ಕತ್ತಲೆಯ (ಅಂಧಃಕಾರದ) ಕಾರ್ಯಗಳು ಕತ್ತಲೆಯನ್ನು ಹೋಗಲಾಡಿಸಾರವು. ಮಂದ ದೃಷ್ಟಿಗೆ ಅಥವಾ ನೆರಳಿನಲ್ಲಿ ನೋಡಿದಾಗ ಅಥವಾ ದೂರಿನಿಂದ ನೋಡಿದಾಗ ಬೆಳ್ಳಿಯು ಕಪ್ಪೆಯ ಚಿಪ್ಪಿನಲ್ಲಿ ಅಧ್ಯಾರೋಪಿತವಾಗಿದೆ. ಆದರೆ ಕಪ್ಪೆಯ ಚಿಪ್ಪಿನಲ್ಲಿ ಬೆಳ್ಳಿಯೆಂಬುದು ಇಲ್ಲವೇ ಇಲ್ಲ. ತಪ್ಪು ತಿಳಿವಳಿಕೆಯಿಂದ ಉಂಟಾದ ಕಪ್ಪೆ ಚಿಪ್ಪಿನಲ್ಲಿಯ ಬೆಳ್ಳಿಯ ಅಧ್ಯಾರೋಪವು, ಕಪ್ಪೆಯ ಚಿಪ್ಪಿನ ಸರಿಯಾದ (ಇದ್ದಕ್ಕಿದ್ದಂತೆ ಇದ್ದ) ತಿಳಿವಳಿಕೆಯಿಂದ ಹೋಗುವದಲ್ಲದೇ ಮತ್ಯಾವ ಕ್ರಿಯೆಗಳಿಂದಲೂ ಹೋಗಲಾರದು. ತಪ್ಪು ತಿಳಿವಳಿಕೆಯಲ್ಲಿಯ ಕ್ರಿಯೆಗಳು ತಪ್ಪು ತಿಳಿವಳಿಕೆಯನ್ನು ತೆಗೆದುಹಾಕಲಾರವು. ಆದ್ದರಿಂದ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಲು ಅಥವಾ ಶಾಶ್ವತ ಸುಖವನ್ನು ಹೊಂದಲು ಸ್ವರೂಪದ ಅನುಭವಗಮ್ಯ ಜ್ಞಾನವನ್ನೇ ಆಶ್ರಯಿಸಬೇಕು. ಅಜ್ಞಾನಾವರಣವು ಸ್ವರೂಪವನ್ನಾವರಿಸಿದಂತಾಗಿದ್ದರೂ ಸರ್ವಕ್ಕೂ ಆಧಾರವಾದ ಸ್ವಯಂಪ್ರಕಾಶದ ಶುದ್ಧ ಆನಂದ ಸ್ವರೂಪದ ನಿಜ ತಿಳಿವಳಿಕೆಯಿಂದ ಅದನ್ನು ಕೊಡವಿಹಾಕಬೇಕು. ಸಚ್ಚಿದಾನಂದದತ್ತ ಮನಸ್ಸನ್ನು ಹೊರಳಿಸಿ ಯೋಗಿಗಳು ಸಚ್ಚಿದಾನಂದವನ್ನು ಅನುಭವಿಸುವರು, ಇದಕ್ಕೆ ಬದಲಾಗಿ ಪ್ರಾಣ, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ಸಚ್ಚಿದಾನಂದದತ್ತ ಹೊರಳಿಸಿ ಸಚ್ಚಿದಾನಂದವನ್ನು ಅನುಭವಿಸುವದಿಲ್ಲ. ಅತಿ ಪರಿಶುದ್ಧವಾದ ಏಕಾಗ್ರವಾದ ಮನಸ್ಸು ಮಾತ್ರ ಸಚ್ಚಿದಾನಂದದ ಕಡೆಗೆ ನಡೆಯಬಲ್ಲದು, ಅನೇಕಾಗ್ರವಾದ ಮಲಿನವಾದ ಮನಸ್ಸು ಸಚ್ಚಿದಾನಂದದ ಕಡೆಗೆ ನಡೆಯಲಾರದು.

ದೇವದೇವತೆಗಳ ಪೂಜೆಗೂ, ಶಾಶ್ವತಸುಖವನ್ನು ಹೊಂದುವದಕ್ಕೂ, ಯಾವದೇ ಸಂಬಂಧವೂ ಇಲ್ಲ. ದೇವ ದೇವತೆಗಳು ಮಾನವನ ಕಲ್ಪನೆಗಳು. ಅವುಗಳಿಗೆ ತಮ್ಮದೇ ಆದ ಅಸ್ತಿತ್ವವಿಲ್ಲ. ಮಾನವನು ತಪ್ಪು ತಿಳಿವಳಿಕೆಯಲ್ಲಿ (ಅಧ್ಯಾಸದಲ್ಲಿ) ಅನೇಕ ರೀತಿಗಳಲ್ಲಿ ದೇವದೇವತೆಗಳನ್ನು ಕಲ್ಪಿಸಿದ್ದಾನೆ. ತನ್ನ ಒಲವಿಗೆ ತಕ್ಕಂತೆ ಅವುಗಳಿಗೆ ಅನೇಕ ರೂಪಗಳನ್ನು ಕೊಟ್ಟಿದ್ದಾನೆ. ಅನೇಕ ರೂಪಗಳನ್ನೊಳಗೊಂಡ ದೇವದೇವತೆಗಳು ತಮ್ಮಿಂದ ತಾವೇ ಮಾನವನ ಎದುರಿಗೆ ಬಂದು ನಿಂತು, ಅವನು ಅವುಗಳಿಗೆ ಆಶೀರ್ವಾದಕ್ಕಾಗಿ ಮತ್ತು ದುಃಖದ ಪರಿಹಾರಕ್ಕಾಗಿ ಪ್ರಾರ್ಥಿಸಬೇಕೆಂದು ಆಜ್ಞೆಯನ್ನಿತ್ತಿಲ್ಲ. ಅದೇ ರೀತಿಯಾಗಿ ಮಾನವನು ಅವುಗಳಿಂದ ಆಶೀರ್ವಾದವನ್ನು ಪಡೆಯುವದಕ್ಕಾಗಿ ಮತ್ತು ಶಾಪ ಪರಿಹಾರಕ್ಕಾಗಿ, ಅವುಗಳನ್ನು ತೃಪ್ತಿಗೊಳಿಸಿಲು ವ್ರತ, ಕರ್ಮಗಳನ್ನು ಆಚರಿಸಬೇಕೆಂದು ಮಾನವನನ್ನು ಅವು ಕೇಳಿಕೊಂಡಿಲ್ಲ. ಅತಿ ಪ್ರಾಚೀನ ಕಾಲದಿಂದ ಮಾನವನು ಈ ವ್ರತ, ಕರ್ಮಗಳನ್ನು ಆಚರಿಸುತ್ತಲೇ ಬಂದಿದ್ದಾನೆ. ಇಷ್ಟೆಲ್ಲವನ್ನು ಮಾಡಿದರೂ ಮಾನವನು ಇನ್ನೂ ಕಷ್ಟ ಮತ್ತು ದುಃಖಗಳಲ್ಲಿಯೇ ಇದ್ದಾನೆ. ಯಾವದೇ ರೀತಿಯಲ್ಲಿ ಎಳ್ಳಷ್ಟೂ ದುಃಖವು ಕಡಿಮೆಯಾಗಿಲ್ಲ. ಇದಕ್ಕೆ ಬದಲಾಗಿ ದುಃಖವು ಹೆಚ್ಚಾಗಿದೆ. ಜೀವಾತ್ಮನು "ತಾನೇ ಸಚ್ಚಿದಾನಂದನು" ಎಂದುಕೊಂಡ ಪ್ರಥಮಾನುಭೂತಿಯಲ್ಲಿ ಯಾವ ದೇವತೆ ಮತ್ತು ಕರ್ಮಾದಿಗಳಿದ್ದವು? ಯಾವೂ ಇರಲಿಲ್ಲ. ಆದ್ದರಿಂದ ಪ್ರಥಮಾನುಭೂತಿಯಲ್ಲಿ ಇಲ್ಲದ ಎಲ್ಲವುಗಳನ್ನು ಕೈ ಬಿಟ್ಟು, ಪ್ರಥಮಾನುಭೂತಿಯ ಸದಾನಂದಸೂತ್ರವನ್ನು ಹಿಡಿದು, ಅದರಲ್ಲಿಯೇ ನೆಲೆಯಾಗಿ ನಿಲ್ಲುವದು ಒಳಿತು.

ಪ್ರಥಮಾನುಭೂತಿಯಲ್ಲಿ ಯಾವ ಧರ್ಮಗಳಿದ್ದವು ? ಯಾವವೂ ಇರಲಿಲ್ಲ. ಧರ್ಮಗಳೆಲ್ಲವೂ ಮಾನವ ನಿರ್ಮಿತ ಅಥವಾ ಜೀವನು ಬಾಹ್ಯ ಪ್ರವೃತ್ತಿಯುಳ್ಳವನಾಗಿ ದೇಹೇಂದ್ರಿಯ ಭಾವ ಬಂದ ನಂತರದವುಗಳು. ಧರ್ಮವು ಮನಸ್ಸಿನ ನಂತರದ ಕಾರ್ಯವು (ಕಲ್ಪನೆಯು). ಗಾಢ ನಿದ್ರೆಯಲ್ಲಿ ಮನಸ್ಸು ಲಯವಾದಾಗ ಧರ್ಮವಷ್ಟೇ ಏಕೆ; ದೇಹ, ಜಗತ್ತು, ದೇವದೇವತೆಗಳು ಧಾರ್ಮಿಕ ಕರ್ಮಗಳೂ ಇಲ್ಲ. ಅಂದಾಗ ಇವೆಲ್ಲವೂ ಪ್ರಥಮಾನುಭೂತಿಯಲ್ಲಿ ಹೇಗೆ ಇರಬಲ್ಲವು ? ಮಾನವನು ಪ್ರಥಮಾನುಭೂತಿಯ ಸಚ್ಚಿದಾನಂದ ಸ್ವರೂಪಕ್ಕೆ ಹಿಂತಿರುಗಿ, ಅದರಲ್ಲಿಯೇ ನೆಲೆ ನಿಲ್ಲುವದೇ ಸಾಧನವು. ಹೀಗೆ ಸಾಧಿಸುವದನ್ನು ಬಿಟ್ಟು ಅತಿ ಪ್ರಾಚೀನ ಕಾಲದಿಂದ ಮಾನವನು ಧರ್ಮ ಮತ್ತು ಸುಖದ ಹೆಸರಿನಲ್ಲಿ ಅಸಂಖ್ಯ ಕಾಳಗ ಮತ್ತು ಯುದ್ಧಗಳನ್ನು ಮಾಡಿ ಅಪರಿಮಿತ ಪ್ರಮಾಣದಲ್ಲಿ ರಕ್ತದ ಕಾಲುವೆಯನ್ನು ಹರಿಸಿದ್ದಾನೆ. ಆಧುನಿಕ ನಾಗರಿಕತೆಯ ಇಂದಿನ ದಿನಗಳಲ್ಲಿಯೂ ಕೂಡ, ಧರ್ಮದ ಹೆಸರಿನಲ್ಲಿ, ಜಗಳ ಕಾಳಗಗಳು ನಡೆದೇ ಇವೆ. ಒಬ್ಬನು ಒಂದು ಧರ್ಮವು ಜಾಗತಿಕ ಧರ್ಮವೆಂದು ಹೇಳಿದರೆ, ಮತ್ತೊಬ್ಬನು ಮತ್ತೊಂದು ಧರ್ಮವು ಜಾಗತಿಕ ಧರ್ಮವೆಂದು ಹೇಳುತ್ತಾನೆ. ಮಾನವನು ಜಾಣನಾಗಿ ಪ್ರಥಮಾನುಭೂತಿ ಅಥವಾ



ಪ್ರಥಮಾನುಭೂತಿಯ ಸೂತ್ರದ ಕಡೆಗೆ ಲಕ್ಷ್ಯ ಹೊರಳಿಸುವವರೆಗೆ ಇದೆಲ್ಲವೂ ನಡೆಯುವದೇ. ಪ್ರಥಮಾನುಭೂತಿಯಲ್ಲಿ ಯಾವ ಜಗತ್ತು ಅಥವಾ ಧರ್ಮವಿದ್ದವು? ಅಲ್ಲಿ ಯಾವ ಜಗದ್ಗುರುಗಳಿದ್ದರು? ಯಾರೂ ಇರಲಿಲ್ಲ. ಅಂದಾಗ ವ್ಯರ್ಥವಾಗಿ ಏಕೆ ಬಡಿದಾಟ ? ಆದ್ದರಿಂದ ಮಾನವನು ತನ್ನ ನಿಜಧಾಮವನ್ನು ನೆನಪಿಸಿಕೊಂಡು ಅದರಲ್ಲಿ ನೆಲೆ ನಿಲ್ಲುವದೇ (ಅದನ್ನು ಹೊಂದುವದೇ) ಕೆಲಸ. ಸಾಧಕನು, ಯಾರು ತಮ್ಮ ನಿಜಧಾಮವನ್ನು ಹೊಂದಿರುವರೋ ಅಂಥವರ ಮಾರ್ಗದರ್ಶನವನ್ನು ಪಡೆಯಬಹುದು. ಇದರ ಬದಲಾಗಿ ಸರಿಯಾದ ದಾರಿ ಕಾಣದೆ, ಗೊತ್ತುಗುರಿಯಿಲ್ಲದೆ, ಮುಳ್ಳುಗಳಿಂದ ತುಂಬಿದ, ಅಭೇದ್ಯ ಪರ್ವತದ ಬದಿಯಲ್ಲಿ ತಿರುಗಾಡುತ್ತಿರುವಂಥವರನ್ನು ಅನುಸರಿಸಿದರೆ ಏನು ಪ್ರಯೋಜನ? ಇದೆಲ್ಲವೂ ನಿರರ್ಥಕವಾಗಿ ಕಾಲಹರಣ, ಶಕ್ತಿಹರಣವೇ ಸರಿ. ಮಾನವನ ಜನ್ಮಸಿದ್ಧ ಹಕ್ಕಾದ , ಸ್ವರೂಪವನ್ನು ಬಿಟ್ಟು ಬಾಹ್ಯ ಅನಾತ್ಮವಸ್ತುಗಳಲ್ಲಿ ತನ್ಮಯರಾದ ಯಾರೂ ಶಾಶ್ವತಶಾಂತಿಯನ್ನು ಹೊಂದಿಲ್ಲ. ಆನಂದವು ತನ್ನೊಳಗೇ ಇದೆ, ತನ್ನ ಹೊರಗೆ ಇಲ್ಲ. ಆನಂದವು ಬಾಹ್ಯ ಉಪಾಧಿಗಳನ್ನು ಅವಲಂಬಿಸಿಲ್ಲ. ಪ್ರಥಮಾನುಭೂತಿಯ ಸೂತ್ರವನ್ನು ಹಿಡಿಯುವದೇ ಶಾಶ್ವತಸುಖವನ್ನು ಹೊಂದುವ ಏಕೈಕ ದಾರಿ.

ವಿಷಯವಾಸನೆಗಳು ಅಂತಃಕರಣದಲ್ಲಿಯೇ ಇವೆ. ಅಂದರೆ ಜೀವನಲ್ಲಿಯೇ ವಿಷಯ ವಾಸನೆಗಳಿವೆ. ಜೀವನು ತನ್ನ ಕಾಲ್ಪನಿಕ ವಿಷಯವಸ್ತುಗಳ ಜಗತ್ತನ್ನು ಸೃಷ್ಟಿಸಿ ಅವುಗಳ ಕಡೆಗೆ ಲಕ್ಷ್ಯವನ್ನು ಕೊಟ್ಟಾಗ ಅಂತಃಕರಣ (ಮನಸ್ಸು) ಎಂಬ ಉಪಾಧಿಯುಳ್ಳವನಾದನು. ನಂತರ ತಪ್ಪು ತಿಳಿವಳಿಕೆಯ ಮುಖಾಂತರ ವಿಷಯಗಳಿಂದ ಸುಖವು ಸಿಗುತ್ತದೆ, ಆದ್ದರಿಂದ ವಿಷಯಗಳನ್ನು ಗಳಿಸಬೇಕು, ಸಂರಕ್ಷಿಸಬೇಕು, ಭೋಗಿಸಬೇಕು, ಅವುಗಳಿಗಾಗಿ ಹೋರಾಡಬೇಕು ಎಂಬ ವಾಸನೆಗಳು ಮನಸ್ಸು ಅಥವಾ ಅಂತಃಕರಣವೆಂಬ ಉಪಾಧಿಯುಳ್ಳ ಜೀವನಲ್ಲಿ ಉದಯವಾಗಿ ನೆಲೆ ನಿಂತಿವೆ. ಸಾಮಾನ್ಯವಾಗಿ ಜಾಗ್ರತ್ತೆ ಜೀವನ ವಿಷಯವಸ್ತುಗಳ ಕಾಲ್ಪನಿಕ ಜಗತ್ತು ಎಂದು ಹೇಳಿದೆ. ಏಕೆಂದರೆ ದೇಹೇಂದ್ರಿಯ ವಿಷಯ ವಸ್ತುಗಳ ಜ್ಞಾನವು ಮನಸ್ಸಿನ ಕಲ್ಪನಾ ಶಕ್ತಿಯಿಂದಲೇ ಉಂಟಾಗುತ್ತದೆ. ಮನಸ್ಸು ಗಾಢ ನಿದ್ರೆಯಲ್ಲಿ ಲಯವಾದಾಗ ದೇಹ, ಇಂದ್ರಿಯಗಳು, ವಿಷಯ ವಸ್ತುಗಳು, ವಿಷಯಭೋಗಗಳಿಲ್ಲ. ಮನಸ್ಸು ನಿಷ್ಕ್ರಿಯವಾದಾಗ ಜಗತ್ತು ಅಥವಾ ವಿಶ್ವಕ್ಕೆ ಇರುವಿಕೆಯೆಲ್ಲಿಯದು? ಮತ್ತು ಅದು ಯಾರಿಗಿರುವದು? ಇದೆಲ್ಲವೂ ಅಧ್ಯಾಸದ ಮೂಲಕ ಮನಸ್ಸಿನ ಆಟವೇ ಆಗಿದೆ. ಮನಸ್ಸಿಲ್ಲದೇ ಮನಸ್ಸಿಗೆ ಅತೀತವಾಗಿ ವಿಶ್ವವೆಂಬುದಿಲ್ಲ. ಮನಸ್ಸು ಗಾಢವಾದ ನಿದ್ರೆಯಲ್ಲಿ ತಮದೊಡನೆ ಅಥವಾ ಅಜ್ಞಾನದೊಡನೆ ಅಥವಾ ಮಾಯಾವೃತ್ತಿಯೊಡನೆ ಒಂದಾದಂತಾಗಿರುವದು ಮತ್ತು ಜೀವನು ತನ್ನ ನಿಜವಾದ ಸಚ್ಚಿದಾನಂದ ಸ್ವರೂಪದಲ್ಲಿ ಒಂದಾದಂತಾಗಿರುವನು. ಆದರೆ

ಗಾಢನಿದ್ರೆಯಲ್ಲಿ ಮನಸ್ಸು ಮತ್ತು ಜೀವತ್ವವು ನಾಶವಾಗಿಲ್ಲ. ಆದ್ದರಿಂದ ಮನಸ್ಸಿನಿಂದೊಡಗೂಡಿದ ಜೀವನು ಬಾಹ್ಯ ಪ್ರವೃತ್ತಿಯುಳ್ಳವನಾದಾಗ ವಿಶ್ವ, ದೇಹ, ಇಂದ್ರಿಯ, ವಿಷಯವಸ್ತುಗಳನ್ನು ಕಲ್ಪಿಸುವನು ಮತ್ತು ಅಧ್ಯಾಸದ ಮೂಲಕ ಇಂದ್ರಿಯ ವಿಷಯವಸ್ತು, ವಿಷಯಭೋಗ,ದುರ್ಗತಿ ಮತ್ತು ದುಃಖಗಳ ಬಲೆಯಲ್ಲಿ ಬಂಧಿತನಾಗಿದ್ದಾನೆ.

ಅದರಂತೆ ಕನಸಿನ ಸ್ಥಿತಿಯೂ ವ್ಯಾವಹಾರಿಕ ಜಾಗ್ರದಂತೆಯೇ ಇದೆ. ಏಕೆಂದರೆ ಮನಸ್ಸೇ ಕನಸಿನ ವಿಶ್ವವನ್ನು ಸೃಷ್ಟಿಸುವದು. ಬೇರೆ ಯಾವದೇ ಕರ್ತೃವು ಕನಸಿನ ವಿಶ್ವವನ್ನು ಸೃಷ್ಟಿಸಿ, ಅದರಲ್ಲಿ ಕಾರ್ಯಪ್ರವೃತ್ತನಾಗಲು, ಭೋಗಿಸಲು, ಕಷ್ಟದಿಂದ ಬಳಲುವದನ್ನು ಜೀವನಿಗೆ ಹೇಳಿಲ್ಲ. ಮನಸ್ಸು ಕನಸಿನಿಂದ ವ್ಯಾವಹಾರಿಕ ಜಾಗ್ರಕ್ಕೆ ಬಂದಾಗ, ಕನಸು ಮಾಯವಾದಾಗ, ಆ ಕನಸಿನ ವಿಶ್ವವು ಯಾರಿಗಿರುವದು? ಜೀವನಿಗೆ ಕನಸಿನ ನೆನಪು ಇರಬಹುದು, ಆದರೆ ಕನಸಿನ ಪ್ರಪಂಚವು (ವ್ಯವಹಾರವು) ಕನಸಿನ ಕಷ್ಟ, ಭೋಗಗಳು ಇರುವದಿಲ್ಲ. ಕನಸಿನಲ್ಲಿ, ಕನಸಿನ ಪ್ರಪಂಚವು ಮನಸ್ಸಿನಿಂದಲೇ ಸೃಷ್ಟಿಸಲ್ಪಟ್ಟಿರುವದು. ಆಗ ಮನಸ್ಸು ಅನೇಕ ಭಾವನೆ ಪ್ರವೃತ್ತಿವಾಸನೆಗಳನ್ನುಂಟುಮಾಡಿಕೊಂಡು, ಅವುಗಳನ್ನು ಉಳಿಸಿಕೊಂಡರೂ, ಕನಸು ಮಾಯವಾದೊಡನೆ ಅವುಗಳೆಲ್ಲವೂ ಮಾಯವಾಗುವವು. ಕೆಲವೊಂದು ಸಮಯದವರೆಗೆ ಅವುಗಳ ನೆನಪು ಇದ್ದು ನಂತರ ಅವುಗಳೆಲ್ಲವೂ ಮರೆತು ಹೋಗುವವು.

ವ್ಯವಹಾರಿಕ ಜಾಗ್ರವೆಂಬ ಕನಸಿನ ಪ್ರಪಂಚವು ಮನಸ್ಸಿನಿಂದಲೇ ಸೃಷ್ಟಿಸಲ್ಪಟ್ಟಿದೆ, ವಿಸ್ತರಿಸಲ್ಪಟ್ಟಿದೆ, ರಕ್ಷಿಸಲ್ಪಟ್ಟಿದೆ, ಭೋಗಿಸಲ್ಪಟ್ಟಿದೆ, ದುಃಖಿಸಲ್ಪಟ್ಟಿದೆ. ಮನಸ್ಸು ಗಾಢನಿದ್ರೆಯಲ್ಲಿ ತನ್ನ ನಿಜಕಾರಣವಾದ ಅಜ್ಞಾನದಲ್ಲಿ ಒಂದಾದಂತೆ ಆದಾಗ ಜಾಗ್ರ ಪ್ರಪಂಚವು ಮಾಯವಾಗುವದು. ಗಾಢನಿದ್ರೆಯಲ್ಲಿ ಜೀವನು ಮಾಯಾವೃತ್ತಿಯ ಮುಖಾಂತರ, ಅಜ್ಞಾನದ ಮೂಲಕ ಸ್ವರೂಪದ ಆನಂದವನ್ನು ಅನುಭವಿಸುವನು. ಈ ವ್ಯಾವಹಾರಿಕ ಜಾಗ್ರವೆಂಬ ಕನಸಿನ ವ್ಯವಹಾರವು, ಮನಸ್ಸಿನಲ್ಲಿಯ ವಾಸನೆಗಳು, ವಿವೇಕ, ವೈರಾಗ್ಯಗಳ ಮೂಲಕ ಸಂಪೂರ್ಣವಾಗಿ ನಾಶವಾಗುವವರೆಗೆ ಮುಂದುವರಿಯುವದು. ವಾಸನೆಗಳು ಪೂರ್ಣ ನಾಶವಾದಾಗ, ಅಂತಃಕರಣವು ಪೂರ್ಣ ಪರಿಶುದ್ಧವಾಗಿ ಮಾಯಾತನುವಾಗಿ ರೂಪಾಂತರ ಹೊಂದಿ, ಜೀವನಿಗೆ ಸಚ್ಚಿದಾನಂದಮಯದೊಡನೆ ಇರುವ ಅಖಂಡತ್ವ ಮತ್ತು ಏಕತ್ವವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧನವಾಗುವದು. ವಾಸನೆಗಳು ನಾಶವಾದಾಗ ಅಥವಾ ನಿರ್ಮೂಲನವಾದಾಗ ಯೋಗವು ಸಂಭವಿಸುವದು. ಆದ್ದರಿಂದ ಯೋಗವೆಂದರೆ ಮನಸ್ಸಿನ ಅಥವಾ ಅಂತಃಕರಣದ ವಾಸನಾನಾಶವೆಂದು ಹೇಳಬಹುದು. ವಾಯುವನ್ನು ನಿರೋಧಿಸುವದರಿಂದ ಮನಸ್ಸು ತಡೆಹಿಡಿಯಲ್ಪಡುವದು ಅಥವಾ



ನಿರೋಧಿಸಲ್ಪಡುವದು, ಆದರೆ ಬರೇ ಪ್ರಾಣನಿರೋಧನ ಮುಖಾಂತರ ಮನಸ್ಸನ್ನು ನಿರೋಧಿಸುವದರಿಂದ ಮನಸಿನಲ್ಲಿರುವ ವಾಸನೆಗಳು ನಾಶವಾಗುವದಿಲ್ಲ. ಪ್ರಾಣನಿರೋಧದಿಂದ ಮನಸ್ಸಿನ ದೋಷವು ಅಥವಾ ಕೊಳೆಯು ಹೋಗುವದಿಲ್ಲ. ವಿವೇಕ, ವೈರಾಗ್ಯಗಳಿಂದ ಮಾತ್ರ ಮನಸ್ಸಿನ ದೋಷವನ್ನು ಕಳೆದುಕೊಳ್ಳುವದು ಸಾಧ್ಯ. ಲಗಾಮನ್ನು ಎಳೆಯುವದರಿಂದ ಕುದುರೆಗಳನ್ನು ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲು ಬರುವಂತೆ ಪ್ರಾಣನಿರೋಧದಿಂದ ಮನಸ್ಸಿನ ಕ್ರಿಯೆಯು ಬಿಗಿ ಹಿಡಿಯಲ್ಪಡುವದು. ಬರೇ ಲಗಾಮನ್ನು ಎಳೆಯುವದರಿಂದ ಕುದುರೆಯ ಮನಸ್ಸಿನ ಓಡಬೇಕೆಂಬ ಅಂತರಿಕ ಭಾವನೆಗಳ ಶಕ್ತಿಯು ಅಥವಾ ಉತ್ಸಾಹ ಅಥವಾ ಉಲ್ಲಾಸವು ನಿರ್ಮೂಲನ ಅಥವಾ ನಾಶವಾಗುವದಿಲ್ಲ. ಅದೇ ರೀತಿಯಾಗಿ ಕುದುರೆಯ ಲಗಾಮುಗಳಂತಿರುವ ಪ್ರಾಣಗಳನ್ನು ನಿರೋಧಿಸುವದರಿಂದ, ವಿಷಯಾಸಕ್ತಿಯ ರೂಪದಲ್ಲಿರುವ ಮನಸ್ಸಿನ ಆಂತರಿಕ ಕ್ರಿಯಾಸಕ್ತಿಯು ನಾಶ ವಾಗಿರುವದಿಲ್ಲ. ಗಾಢನಿದ್ರೆಯಲ್ಲಿ ಮನಸ್ಸಿನಲ್ಲಿರುವ ವಾಸನೆಗಳು ಬಿಗಿಹಿಡಿಯಲ್ಪಟ್ಟಿವೆ ಮತ್ತು ಅಡಗಿವೆ. ಗಾಢನಿದ್ರೆಯಿಂದ ವ್ಯಾವಹಾರಿಕ ಎಚ್ಚರಿಕೆಗೆ ಬಂದಾಗ ಮನಸ್ಸಿನಲ್ಲಿ ಸುಪ್ತವಿದ್ದ ವಾಸನೆಗಳು ಪುಟಿದೆದ್ದು ಮತ್ತೆ ಮೊದಲಿನಂತೆ ಕ್ರಿಯಾಶೀಲವಾಗುತ್ತವೆ. ಅದರಂತೆ ಕುಂಭಕದಲ್ಲಿ ಪ್ರಾಣವು ನಿರೋಧಿಸಲ್ಪಟ್ಟಾಗ, ಮನಸ್ಸಿನ ವಾಸನೆಗಳು ಹತ್ತಿಕ್ಕಲ್ಪಟ್ಟಿವೆ ಮತ್ತು ಅಡಗಿವೆ ಮತ್ತು ಸುಪ್ತವಾಗಿವೆ ಮತ್ತು ವಾಯುವು ಬ್ರಹ್ಮರಂಧ್ರದಲ್ಲಿಯ ಕುಂಭಕದಿಂದ ಕೆಳಗಿಳಿದಾಗ ಮನಸ್ಸಿನಲ್ಲಿರುವ ವಾಸನೆಗಳು ಮತ್ತೆ ಪುಟಿದೇಳುತ್ತವೆ ಮತ್ತು ಜಾಗ್ರದಲ್ಲಿ ಹಾವಳಿಯನ್ನುಂಟು ಮಾಡುತ್ತವೆ ಮತ್ತು ಜೀವನ ವಾಸನೆಗಳಿಗನುಸಾರವಾಗಿ ಅವನನ್ನು ನರಕ (ವಿನಾಶ) ಅಥವಾ ಸ್ವರ್ಗಕ್ಕೊಯ್ಯುತ್ತವೆ. ಗಾಢನಿದ್ರೆಯಲ್ಲಿ ವಾಸನೆಗಳು ತಾತ್ಕಾಲಿಕವಾಗಿ ಮನಸ್ಸಿನೊಡನೆ ಲಯವಾಗುವದರಿಂದ ಜೀವನು ತಾತ್ಕಾಲಿಕವಾಗಿ ಆನಂದವನ್ನು ಅನುಭವಿಸುತ್ತಾನೆ. ಅದರಂತೆ ಬ್ರಹ್ಮರಂಧ್ರದಲ್ಲಿ ವಾಯುವಿನ ನಿರೋಧದಿಂದ ವಾಸನೆಗಳು ತಾತ್ಕಾಲಿಕವಾಗಿ ಹತ್ತಿಕ್ಕಲ್ಪಟ್ಟಿರುವದರಿಂದ ಮತ್ತು ಅಡಗಿರುವದರಿಂದ ಮಾನವನು ತಾತ್ಕಾಲಿಕವಾಗಿ ಆನಂದವನ್ನು ಅನುಭವಿಸುತ್ತಾನೆ. ಅದರಂತೆ ವಾಯುವು ಬ್ರಹ್ಮರಂಧ್ರದಿಂದ ಕೆಳಗಿಳಿದಾಗ ಮತ್ತೆ ವಾಸನೆಗಳು ಕ್ರಿಯಾಶೀಲವಾಗುವವು.

ಪುನರ್ಜನ್ಮಕ್ಕೆ ಮೂಲ ಕಾರಣವಾಗಿ ವಾಸನೆಗಳು ಅವಿವೇಕ ಮತ್ತು ರಾಗದ (ರಾಗ, ದ್ವೇಷ) ಮೂಲಕ ಉಂಟಾಗಿರುವದರಿಂದ, ಅವುಗಳನ್ನು ವಿವೇಕ ವೈರಾಗ್ಯಗಳಿಂದಲೇ ನಿರ್ಮೂಲನ ಮಾಡಬೇಕು. ಜಗತ್ತು ಮತ್ತು ಅದಕ್ಕೆ ಸಂಬಂಧಿಸಿದ್ದರ ಬಗ್ಗೆ ಇರುವ ರಾಗ ದ್ವೇಷಗಳೇ ಪುನರ್ಜನ್ಮದ ಬೀಜವು. ಇದೆಲ್ಲವೂ ಸ್ವರೂಪದ ಅಜ್ಞಾನದಿಂದಲೇ ಇದೆ. ಸ್ವರೂಪದ ಅಜ್ಞಾನವು ಅಧ್ಯಾಸಕ್ಕೆ ಕಾರಣವಾಗುವದು. ಅಧ್ಯಾಸವು ಜೀವನ ಬಂಧನಕ್ಕೆ ಕಾರಣವಾಗುವದು, ಆದ್ದರಿಂದ ಸ್ವರೂಪದ ಅಜ್ಞಾನವನ್ನು ಕಳೆದುಕೊಳ್ಳುವದೇ ಕೆಲಸ.

ಇದಕ್ಕಾಗಿ ಪ್ರಥಮಾನುಭೂತಿಗೆ ಹಿಂತಿರುಗಿ, ಮಾಯಾತನುವಿನ ಮುಖಾಂತರ ಸಚ್ಚಿದಾನಂದ ದೊಡನೆ ಇರುವ ತನ್ನ ಅಖಂಡತ್ವವನ್ನು ಮತ್ತು ಏಕತ್ವವನ್ನು ಸಾಕ್ಷಾತ್ಕರಿಸಿ ಕೊಳ್ಳಬೇಕು. ಈ ಮಾಯಾತನುವಿನ ಸ್ಥಿತಿಯಲ್ಲಿ ಸ್ವರೂಪದ ಅಜ್ಞಾನವು ತುಂಡುತುಂಡಾಗಿ ನಾಶ ಮಾಡಲ್ಪಟ್ಟಿದೆ ಮತ್ತು ಸಂಪೂರ್ಣವಾಗಿ ಮಾಯವಾಗಿದೆ. ಪುನರ್ಜನ್ಮಕ್ಕೆ ಕಾರಣವಾದ ಸ್ವರೂಪದ ಅಜ್ಞಾನವು, ಅದರ ಎಳ್ಳಷ್ಟೂ ಯಾವದೇ ರೀತಿಯ ಕ್ರಿಯಾಶೀಲತೆಯ ಅಂಶವು ಉಳಿಯದಂತೆ ಬೇರು ಸಹಿತ ತೆಗೆದುಹಾಕಲ್ಪಟ್ಟಿದೆ ಅಥವಾ ಕತ್ತರಿಸಲ್ಪಟ್ಟಿದೆ. ಆದ್ದರಿಂದ ಪುನರ್ಜನ್ಮದ ಪ್ರಶ್ನೆಯೇ ಇಲ್ಲ.

ಮನಸ್ಸು ಅಥವಾ ಚಿದಾಭಾಸನು ತಾನೇ ತನ್ನನ್ನು ಬಂಧನಕ್ಕೀಡುಮಾಡಿಕೊಂಡಿದ್ದಾನೆ ಮತ್ತು ತಾನೇ ಆ ಬಂಧನದಿಂದ ಮುಕ್ತಿಯನ್ನು ಪಡೆಯಬೇಕು. ಮನಸ್ಸು ನರಕವನ್ನು ಸ್ವರ್ಗವನ್ನಾಗಿ ಮಾಡುವದು ಮತ್ತು ಸ್ವರ್ಗವನ್ನು ನರಕವನ್ನಾಗಿ ಮಾಡುವದು. ಮನಸ್ಸು ತಾನೇ ಅಜ್ಞಾನದಿಂದ ದೇಹವು ತಾನೆಂದು ಕಲ್ಪಿಸಿಕೊಂಡಂತೆ, ದೇಹವು ತಾನಲ್ಲ ಎಂಬ ಜ್ಞಾನವಾಗಿ ಅದು ತನ್ನ ನಿಜಸ್ವರೂಪದ ಅರಿವಿನಲ್ಲಿ ನೆಲೆನಿಂತ ಕೂಡಲೇ ಮುಕ್ತಿಯನ್ನು ಪಡೆಯುವದು ಮತ್ತು ಶಾಶ್ವತವಾಗಿ ಸುಖಿಯಾಗಿರುವದು. ತನಗೆ ಬಂಧನವಿದೆಯೆಂಬುದು ಮನಸ್ಸಿನ ಕಲ್ಪನೆಯು ಅಥವಾ ಸೃಷ್ಟಿಯು. ಮನಸ್ಸು ಲಯವಾದಾಗ ದೇಹ ಮತ್ತು ವಿಶ್ವ ಲಯವಾದರೂ, ದೇಹ ಮತ್ತು ವಿಶ್ವ ಮನಸ್ಸಿನ ಕಲ್ಪನೆಯೆಂಬುದು ಅತಿ ವಿಚಿತ್ರವಿದೆ. ತನ್ನ ಕಲ್ಪನೆಯಿಂದಲೇ ಉಂಟಾದ ಬಂಧನವನ್ನು ವಿವೇಕದಿಂದ ಕಳೆದುಕೊಳ್ಳಲಾರದಷ್ಟು ಅಜ್ಞಾನದ ಆವರಣವು ಗಾಢ ಮತ್ತು ಬಲವಾನವಾಗಿರುವದು. ಆದರೂ ಕೂಡ ಜೀವನು ಇದೇ ಮಾನವ ಜನ್ಮದಲ್ಲಿ, ವಿವೇಕದಿಂದ ತನಗೆ ಬಂಧನವೂ ಇಲ್ಲ ಮತ್ತು ಮುಕ್ತಿಯೂ ಇಲ್ಲ ಮತ್ತು ತಾನು ಶುದ್ಧ ಅರಿವುಸ್ವರೂಪನೆಂಬುದನ್ನು ಸುನಿಶ್ಚಿತವಾಗಿ ಅನುಭವಿಸಲು ಬರುವದು. ಜೀವನ ಬಂಧನ ಅಥವಾ ಮುಕ್ತಿಗೆ ಕಾರಣವಾದ ವಸ್ತು ಇನ್ನೊಂದಿಲ್ಲ. ಪ್ರತಿದಿನವೂ ಜೀವನು ವ್ಯಾವಹಾರಿಕ ಎಚ್ಚರಿಕೆಗೆ ಬಂದಾಗ, ತನ್ನ ಬಂಧನವನ್ನು ತಾನೇ ಸೃಷ್ಟಿಸಿದಂತಾಗಿರುವದು ಮತ್ತು ಅವನು ಗಾಢನಿದ್ರೆಗೆ ಹೋದಾಗ ತನ್ನ ಮುಕ್ತಿಯನ್ನು ತಾನೇ ಹೊಂದಿದಂತಾಗಿರುವದು. ಇವನನ್ನು ಗಾಢನಿದ್ರೆಯಿಂದ ಎಚ್ಚರಿಸುವವರು ಯಾರೂ ಇಲ್ಲ ಮತ್ತು ಜಾಗ್ರದಿಂದ ಗಾಢನಿದ್ರೆಗೆ ಹೋಗುವಂತೆ ಮಾಡುವವರು ಯಾರೂ ಇಲ್ಲ. ಅವನನ್ನು ಯಾರು ಗಾಢನಿದ್ರೆಯಿಂದ ಎಚ್ಚರಿಸಿದರು ? ಯಾರೂ ಇಲ್ಲ ಮತ್ತು ಯಾರು ಅವನನ್ನು ಗಾಢನಿದ್ರೆಗೆ ಹೋಗುವಂತೆ ಒತ್ತಾಯಿಸಿದರು ? ಯಾರೂ ಇಲ್ಲ. ಅದೇ ರೀತಿಯಾಗಿ ಜೀವನು ತನ್ನ ನಿಜಧಾಮವನ್ನು ಬಿಟ್ಟು, ದೇಹಭಾವ, ಬಂಧನ, ಮುಂತಾದವುಗಳನ್ನು ಕಲ್ಪಿಸಿಕೊಳ್ಳುವಂತೆ ಯಾರು ಮಾಡಿದರು? ಯಾರೂ ಇಲ್ಲ. ಈಗ ಅವನು ತನ್ನ ನಿಜವನ್ನು ಸಾಕ್ಷಾತ್ಕರಿಸಿಕೊಳ್ಳುವಂತೆ ಮಾಡುವವರು ಯಾರಿದ್ದಾರೆ ? ಯಾರೂ ಇಲ್ಲ. ಆದ್ದರಿಂದ ತನ್ನ ನಿಜವನ್ನು ತಾನೇ ಸಾಕ್ಷಾತ್ಕರಿಸಿಕೊಳ್ಳಬೇಕು. ಅಹಂಕಾರವಿದ್ದಾಗ



ಬಂಧನವಿರುವದು ಮತ್ತು ಅಹಂಕಾರವಿಲ್ಲದಾಗ ಮುಕ್ತಿ ಇರುವದು. ಮುಕ್ತಿಯು ಅಹಂಕಾರಕ್ಕೇ ಮತ್ತಾರಿಗೂ ಅಲ್ಲ. ಅಹಂಕಾರವನ್ನು ನಾಶಮಾಡಿ ಸುಮ್ಮನಾದಾಗ ಸುಖವಿರುವದೇನಗಾಧ ! ಸುಮ್ಮನಿರುವದೇ ನಿಜ ಯೋಗವು. ಅಹಂಕಾರವಿದ್ದಾಗ ಎಲ್ಲ ಜಾತಿ, ಮತ, ಧರ್ಮ, ಯೋಗಗಳು, ಆದರೆ ಅಹಂಕಾರ ನಾಶವಾದಾಗ, ಜಾತಿ, ಮತ, ಧರ್ಮ ಯೋಗಗಳು ಯಾರಿಗಿರುವವು ? ಈ ರೀತಿಯಾಗಿ ವಿಚಾರಿಸಿ, ಅರಿವು ನೀನೆಂದು ನೆಲೆಯಾಗಿ ನಿಲ್ಲು. ಅನೇಕ ಕನಸುಗಳು ಬೀಳುವವು ಮತ್ತು ಹೋಗುವವು ಮತ್ತು ಅನೇಕ ಗಾಢನಿದ್ರೆಗಳು ಬೀಳುವವು ಮತ್ತು ಹೋಗುವವು. ಆದರೆ ಅಹಂಕಾರವು ಅವುಗಳೊಡನೆ ಯಾವದೇ ಬದಲಾವಣೆಯನ್ನು ಹೊಂದದೇ, ಇದ್ದಕ್ಕಿದ್ದಂತೆಯೇ ಇರುವದು. ಜಾಗ್ರದಲ್ಲಿ ಕನಸುಗಳ ನೆನಪಾಗುವದು.ಆದರೆ ಅವುಗಳ ಪ್ರಪಂಚವಿರುವದಿಲ್ಲ. (ವ್ಯವಹಾರವಿರುವದಿಲ್ಲ) ಮತ್ತು ಅವು ಸುಳ್ಳೆಂದು ಮನವರಿಕೆಯಾಗಿದೆ. ಆದರೆ ಜಾಗ್ರಗಳು ಕನಸಿನಲ್ಲಿ ನೆನಪಾಗುವದಿಲ್ಲ. ಕನಸಿನಲ್ಲಿದ್ದಾಗ ಕನಸು ಸತ್ಯ ಮತ್ತು ಜಾಗ್ರದಲ್ಲಿದ್ದಾಗ ಜಾಗ್ರವು ಸತ್ಯವೆಂದು ನಾವು ತಿಳಿದುಕೊಂಡಿದ್ದೇವೆ. ಆದರೆ ಜಾಗ್ರ ಕನಸುಗಳೆಲ್ಲವೂ ಕಲ್ಪನೆಗಳು. ಶುದ್ಧ ಚೈತನ್ಯಮಯವಾದ ನಿಮ್ಮಲ್ಲಿ ಅವುಗಳಿಗೆ ಇರುವಿಕೆ ಇಲ್ಲ. ಇದರಂತೆ ಎಲ್ಲ ಜನ್ಮಗಳೂ ಕೂಡ. ಒಂದು ಜನ್ಮವು ಇನ್ನೊಂದು ಜನ್ಮದಲ್ಲಿ ಇರುವದಿಲ್ಲ. ಅಹಂಕಾರವು ತನಗೆ ಬೇಕಾದಷ್ಟು ಜನ್ಮಗಳನ್ನು ಪಡೆಯಬಹುದು ಮತ್ತು ಕರ್ಮ ಮತ್ತು ವಾಸನೆಗಳಿಗನುಗುಣವಾಗಿ ಅನೇಕ ಪ್ರಕಾರದ ದೇಹ (ಜನ್ಮ)ಗಳನ್ನು ಪಡೆಯಬಹುದು. ಆದರೆ ಅವೆಲ್ಲವೂ ಜೀವನ ಅಹಂಕಾರದ ಕಲ್ಪನೆಗಳು. ಏಕೆಂದರೆ ಅಹಂಕಾರವು ಅಡಗಿದಾಗ ಜನ್ಮಗಳಿಲ್ಲ. ಒಂದು ಜನ್ಮದ ಸಜೀವ ಅಥವಾ ನಿರ್ಜೀವ ಆಸ್ತಿಗಳು ಮತ್ತು ವ್ಯವಹಾರಗಳು ಮತ್ತೊಂದು ಜನ್ಮಕ್ಕೆ ಬರುವದಿಲ್ಲ. ಅವುಗಳ ನೆನಪುಕೂಡ ಉಳಿಯುವದಿಲ್ಲ. ಅಂದಮೇಲೆ ಅವುಗಳಿಗಾಗಿ ಚಿಂತಿಸುವದೇಕೆ ? ಎಲ್ಲ ಜನ್ಮಗಳು ಮಿಥ್ಯಾ ಸ್ವಪ್ನಗಳಂತೆ ತೋರಿ ಹೋಗುವ ತೋರಿಕೆಗಳು ಮಾತ್ರ. ದೆವ್ವ ಅಥವಾ ಭೂತಗಳು ಕೆಲವೊಂದು ಸಲ ತಮ್ಮ ಪೂರ್ವ ಅಥವಾ ಹಿಂದಿನ ಜನ್ಮಗಳ ನೆನಪನ್ನು ಹೇಳುವವು. ಅವೆಲ್ಲವುಗಳು ಪಿಶಾಚಿಗಳಿಗೆ ಈಗ ಕನಸಾಗಿ ಬಿಟ್ಟಿವೆ. ಅವು ಈ ಪಿಶಾಚಿಯ ಜನ್ಮದಲ್ಲಿ ಮತ್ತೆ ಹಿಂದಿನ ಜನ್ಮಗಳನ್ನು ಹೊಂದಲಾರವು. ಕೆಲವು ಸಲ ಅತಿ ವಿರಳವಾಗಿ ಕೆಲವರು ತಮ್ಮ ಹಿಂದಿನ ಜನ್ಮಗಳ ಘಟನೆ, ಸ್ಥಳ, ತಂದೆ, ತಾಯಿಗಳ ಬಗ್ಗೆ ಹೇಳುವರು. ಆದರೆ ಅವೆಲ್ಲವೂ ಈಗ ಅವರಿಗೆ ಕನಸಾಗಿವೆ. ಆದ್ದರಿಂದ ಮುಂದೆ ಎಂದಾದರೂ ಒಂದು ದಿನ ಕನಸಾಗುವ ವರ್ತಮಾನಕ್ಕಾಗಿ ಚಿಂತಿಸುವದೇಕೆ ?

ನಾವು ಇಲ್ಲಿಯವರೆಗೆ ಸಾವಿರಾರು ಜನ್ಮಗಳನ್ನು ಪಡೆದಿದ್ದೇವೆ ಮತ್ತು ಟನ್ನುಗಟ್ಟಲೆ ದೈಹಿಕ, ವಾಚಿಕ ಮತ್ತು ಮಾನಸಿಕ ಕೆಲಸಗಳನ್ನು ಮಾಡಿದ್ದಾಗಿದೆ. ಆದರೆ ಶಾಶ್ವತ ಸುಖವು ಲಭಿಸಿಲ್ಲ. ಈ ಮಾನವ ಜನ್ಮದಲ್ಲಿಯೂ ಅದೇ ರೀತಿಯ ಜೀವನ

ಕ್ರಮವು (ದೈಹಿಕ, ವಾಚಿಕ ಮಾನಸಿಕ ಕ್ರಿಯೆಗಳು) ಮುಂದುವರೆದಿದೆ. ಈ ಎಲ್ಲ ಕ್ರಿಯೆಗಳ ಕೊನೆಯ ಫಲ ದುಃಖವೇ (ದುರ್ಗತಿ) ಆಗಿದೆ. ಎಂಬುದನ್ನು ಇನ್ನೂ ನಮಗೆ ಸುಖ ಮತ್ತು ಶಾಂತಿಯ ಬಯಕೆ ಇರುವದು, ಸ್ಪಷ್ಟವಾಗಿ ಸಿದ್ಧ ಮಾಡಿ ತೋರಿಸಿದೆ. ಶಾಂತಿಯನ್ನು ಕೊಡದೇ ಇರುವಂಥ ಜಡ ಕರ್ಮಗಳನ್ನು ಮಾಡುವದರಿಂದಾಗುವ ಪ್ರಯೋಜನ ಅಥವಾ ಫಲವು ಏನಿದೆ ? ಅಜ್ಞಾನಸಮಾಧಿಯು ಕೂಡ ಏನೂ ಪ್ರಯೋಜನವಿಲ್ಲ. ಏಕೆಂದರೆ ಅದು ಜೀವನನ್ನು ಐಹಿಕ ಸುಖ ದುಃಖಗಳಿಗೆ ಹಿಂತಿರುಗಿಸುವದು. ಅಜ್ಞಾನಸಮಾಧಿಯೂ ಕೂಡ ಕೃತ್ರಿಮವಿದೆ. ಏಕೆಂದರೆ ಅದು ದೇಹ, ಇಂದ್ರಿಯ ಪ್ರಾಣಗಳೇ ತಾನೆಂಬ ಅಧ್ಯಾಸದಲ್ಲಿ ಹೊಂದಿದ್ದಾಗಿದೆ. ಈ ಕೃತ್ರಿಮ ಜಡಸಮಾಧಿಯಲ್ಲಿ ಜಗತ್ತು ಮತ್ತು ಅದಕ್ಕೆ ಸಂಬಂಧಿಸಿದವುಗಳ ಮೋಹವು ಹೋಗಿಲ್ಲ. ಸುಖದಿಂದಿರಲು ಏನನ್ನೂ ಮಾಡಬೇಕಾಗಿಲ್ಲ. ಸರ್ವ ರೀತಿಗಳಿಂದ ಮೌನವಾದರೆ ಮುಗಿಯಿತು. ಒಂದು ವೇಳೆ ಆನಂದವು ಈ ಎಲ್ಲ ಕ್ರಿಯೆಗಳ ಕಾರ್ಯವಾಗಿದ್ದರೆ ಅವುಗಳನ್ನು ಮಾಡವದರಿಂದ ಆನಂದವು ಲಭಿಸಬಹುದಾಗಿತ್ತು. ಕ್ರಿಯೆಗಳನ್ನು ಮಾಡುವದು ಕಷ್ಟಮಯವು. ಯಾವದೇ ಕ್ರಿಯೆಯ ಸಂಕಲ್ಪವು (ನೆನಪು) ಮನಸ್ಸಿನ ಸಮತೆಯನ್ನು (ಸಹಜಸಮಾಧಿ) ತಪ್ಪಿಸುವದು. ಇದನ್ನು ಸುನಿಶ್ಚಿತವಾಗಿ ತಿಳಿದುಕೊಂಡು ಮೌನಿಯಾಗಿರಬೇಕು ಮತ್ತು ಸದಾಸುಖಿಯಾಗಿರಬೇಕು. ಒಂದು ವೇಳೆ ಬುದ್ಧಿಯು ಇದ್ದರೆ ಅದನ್ನು ಸಮ ಮಾಡಬೇಕಾಗುತ್ತಿತ್ತು. ಆದರೆ ಆನಂದವು ಬುದ್ಧಿಯನ್ನು ಮೀರಿದೆ ಮತ್ತು ಅದಕ್ಕೆ ಅತೀತವಿದೆ. ಸಹಜಸಮಾಧಿ ಎಂಬುದೂ ಇಲ್ಲ. ಇರುವು ಇದ್ದಕ್ಕಿದ್ದಂತೆಯೇ ಇದೆ. ಅದರಲ್ಲಿ ಏನೂ ತೋರುವದೂ ಇಲ್ಲ, ಅಡಗುವದೂ ಇಲ್ಲ.

ಇರುವು ಬುದ್ಧಿಗೆ ಅತೀತವಾಗಿದೆ. ಪ್ರಥಮಾನುಭೂತಿಯ ಸ್ಥಿತಿಯಲ್ಲಿ ಅಧ್ಯಾಸವಿಲ್ಲ. ನಾನು ಆ ಸಚ್ಚಿದಾನಂದ ಸ್ವರೂಪನೇ ಇರುವೆನು. ಒಂದು ವೇಳೆ ಅಜ್ಞಾನ ಅಥವಾ ಅಧ್ಯಾಸವು ನಿಜವಾಗಿ ಇದ್ದದ್ದಾಗಿದ್ದರೆ "ನಾನು ಸಚ್ಚಿದಾನಂದನು" ಎಂಬ ಪ್ರಥಮಾನುಭೂತಿಯ ಅನುಭವ ಉಂಟಾಗುತ್ತಿರಲಿಲ್ಲ. ಸಚ್ಚಿದಾನಂದ ಸ್ವರೂಪದ ಆಧಾರದ ಮೇಲೆ ಪ್ರಥಮಾನುಭೂತಿಯ ನಂತರ ಹೇಗೋ ಅಜ್ಞಾನವು ತೋರುವದು. ಇದೆಲ್ಲ ಸಾಧನ ಸಾಮಗ್ರಿಯು ಶಾಶ್ವತ ಸುಖವನ್ನು ಬಯಸುವವನಿಗೆ ಮಾತ್ರ. ಶಾಶ್ವತಸುಖವನ್ನು ಹೊಂದಲು ಮುಮುಕ್ಷುವು ಸ್ವರೂಪ ಜ್ಞಾನದ ಅನುಸಂಧಾನವನ್ನು ಕೈಕೊಳ್ಳಬೇಕು. ಆದ್ದರಿಂದಲೇ ಅಜ್ಞಾನಕ್ಕೆ ಆದಿ ಇದೆ ಎಂದೂ ಹೇಳಲಾಗಿದೆ. ಅದು ಅನಾದಿಯಲ್ಲ. ಅಜ್ಞಾನಕ್ಕೆ ಆದಿಯೂ ಉಂಟು, ಅಂತ್ಯವೂ ಉಂಟು. ಸಚ್ಚಿದಾನಂದ ಸ್ವರೂಪದಲ್ಲಿ ಮೂಲಾವಿದ್ಯೆ ಅಥವಾ ಅಜ್ಞಾನವು ಇಲ್ಲ. ಒಂದು ವೇಳೆ ಸ್ವರೂಪದಲ್ಲಿ ಅಜ್ಞಾನವು ನಿಜವಾಗಿ ಇದ್ದದ್ದಾಗಿದ್ದರೆ, ಅದನ್ನು ತೆಗೆದುಹಾಕುವದು ಎಂದಿಗೂ ಸಾಧ್ಯವಾಗುತ್ತಿರಲಿಲ್ಲ. ಸ್ವರೂಪದ ಜ್ಞಾನದಿಂದ ಸ್ವರೂಪದ ಅಜ್ಞಾನವು ತೆಗೆದುಹಾಕಲ್ಪಡುತ್ತದೆ. ಆದ್ದರಿಂದ ಸ್ವರೂಪದ ಅಜ್ಞಾನವು ಪ್ರಥಮಾನುಭೂತಿಯ ನಂತರದ



ತೋರಿಕೆಯು. ಆದ್ದರಿಂದ ಅದು ಸಾದಿ ಸಾಂತವು. ಸಚ್ಚಿದಾನಂದ ಸ್ವರೂಪವು ತನಗನ್ಯವಾಗಿ ಇನ್ನೊಂದೇನೂ ಇಲ್ಲದೇ ಎಂದೆಂದೆಗೂ ಇದ್ದಕ್ಕಿದ್ದಂತೆ ಇರುವದು. ಇದು ಪ್ರಥಮಾನುಭೂತಿಯ ಮೂಲಕ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಜಗತ್ತು ಮತ್ತು ಅದಕ್ಕೆ ಸಂಬಂಧಪಟ್ಟದ್ದೆಲ್ಲವೂ ಮನಸ್ಸಿನ ಅಜ್ಞಾನ ನಂತರದ ಕಲ್ಪನೆಯು ಮತ್ತು ಸಚ್ಚಿದಾನಂದ ಆಧಾರದ ಮೇಲೆ ತೋರಿದ ಮಾಯೆ ಅಥವಾ ಪ್ರಕೃತಿಯ ಸೂಕ್ಷ್ಮ ಕಾರ್ಯವು. ಅತಿ ಸೂಕ್ಷ್ಮಕರಣವಾದ ಮಾಯಾತನುವನ್ನೊಳಗೊಂಡ ತುರಿಯಾತ್ಮನು ಮಾಯೆ ಮತ್ತು ಮಾಯೆಯ ಸ್ಥೂಲ ಮತ್ತು ಸೂಕ್ಷ್ಮಕಾರ್ಯಗಳಿಗೆ ಸಾಕ್ಷಿಯಾಗಿರುವನು. ಈ ಸಾಕ್ಷಿಯು ಕೂಡ ಅದರ ಮೂಲವಾದ ಸಚ್ಚಿದಾನಂದದೊಡನೆ ಅಖಂಡತ್ವ ಮತ್ತು ಐಕ್ಯತ್ವವನ್ನು ಹೊಂದುವದು ಮತ್ತು ಸಾಕ್ಷಿಭಾವವು ಮಾಯವಾಗುವದು. ಮೂಲ ಸಚ್ಚಿದಾನಂದ ಸ್ವರೂಪ ಮಾತ್ರ ಉಳಿಯುವದು.

ಪ್ರಥಮಾನುಭೂತಿಯಲ್ಲಿ ಆನಂದ ಅಥವಾ ಸುಖದ ಬಯಕೆಯು ಉಂಟಾಗುವದಿಲ್ಲ. ಏಕೆಂದರೆ ಅಲ್ಲಿ ಶುದ್ಧ (ಕಲಬೆರಕೆ ಇಲ್ಲದ ) ಆನಂದವಿರುವದು. ಜೀವನು ತುರ್ಯಾವಸ್ಥೆಯಲ್ಲಿ ಉಳಿದ ಮೂರೂ ಅವಸ್ಥೆಗಳಿಗೆ ಸಾಕ್ಷಿಯಾಗಿರುವನು ಮತ್ತು ಇದೇ ಆತ್ಮಸಾಕ್ಷಾತ್ಕರದ ಸ್ಥಿತಿಯು. ಆದ್ದರಿಂದ ಶುದ್ಧ ಆನಂದದಲ್ಲಿದ್ದವನು ಆನಂದವನ್ನು ಬಯಸುವದಿಲ್ಲ. ಉದಾಹರಣೆಗೆ, ಗಾಢನಿದ್ರೆಯಲ್ಲಿಯೂ ಸಹ ಜೀವನು ಸುಖವನ್ನು ಬಯಸುವದಿಲ್ಲ. ಏಕೆಂದರೆ ಆಗ ಮಾಯಾವೃತ್ತಿ ಎಂಬ ಉಪಾಧಿಯ ಮೂಲಕ ಅಜ್ಞಾನದಿಂದ ಸ್ವರೂಪದ ಆನಂದವನ್ನು ಅನುಭವಿಸುತ್ತಿರುವನು. ಅಂದಾಗ ಅತಿ ಸೂಕ್ಷ್ಮವಾದ, ಅತಿ ಶುದ್ಧವಾದ, ಜ್ಞಾನದ ಸ್ಥಿತಿಯಾದ ಮಾಯಾತನು ಎಂಬ ಉಪಾಧಿಯ ಮೂಲಕ ಚಿದಾನಂದದಲ್ಲಿ ತನ್ಮಯನಾದಾಗ ಸುಖವನ್ನು ಹೇಗೆ ಬಯಸುವನು ? ತಾನು ಚಿದಾನಂದಕ್ಕಿಂತ ಬೇರೆ ಎಂಬ ಭಾವವಿದ್ದಾಗ ಸುಖವನ್ನು ಬಯಸಬಹುದು. ಆದರೆ ಜೀವನು ಶುದ್ಧ ಜ್ಞಾನದ ಸ್ಥಿತಿಯಾದ ಮಾಯಾತನುವಿನ ಮುಖಾಂತರ ಚಿದಾನಂದದೊಡನೆ ಅಖಂಡತ್ವ ಮತ್ತು ಐಕ್ಯತ್ವದ ಅನುಭವವನ್ನು ಹೊಂದುತ್ತಿರುವಾಗ ಸುಖವನ್ನು ಬಯಸಲಾರನು. ಬೇಕಾದರೆ ಇದನ್ನು ಪ್ರಯೋಗ ಮಾಡಿ ನೋಡಿಕೊಳ್ಳಿರಿ. ಗಾಢ ನಿದ್ರೆಯಲ್ಲಿ ಪ್ರವೇಶಿಸಿ ಸುಖವನ್ನು ಬಯಸಲು ಪ್ರಯತ್ನಿಸಿರಿ. ಇದು ಅಸಾಧ್ಯವು. ಏಕೆಂದರೆ ಸುಖವನ್ನು ಬಯಸುವವನೇ ಗಾಢ ನಿದ್ರೆಯಲ್ಲಿ ಅಥವಾ ಅಜ್ಞಾನದಲ್ಲಿ ತನ್ಮಯನಾಗಿದ್ದಾನೆ (ಮುಳುಗಿದ್ದಾನೆ).

ಅದರಂತೆ ಪ್ರಥಮಾನುಭೂತಿಯ ಆನಂದದ ಸ್ಥಿತಿಯಲ್ಲಿರುವವನು ತಿಳುವಳಿಕೆಯಿಂದ ಆನಂದದಲ್ಲಿ ತನ್ಮಯನಾಗಿದ್ದಾನೆ (ಮುಳುಗಿದ್ದಾನೆ). ಇದು ಜ್ಞಾನಾನಂದದ ಪೂರ್ಣ ಸ್ಥಿತಿಯು. ಆದ್ದರಿಂದ ಅಲ್ಲಿ ಸುಖದ ಬಯಕೆ ಉಂಟಾಗಲಾರದು. ಉದಾಹರಣೆಗೆ

ಸಿಹಿ, ಶುದ್ಧ ಮತ್ತು ತಂಪಾದ ಕುಡಿಯುವಂಥಹ ನೀರಿನ ಸರೋವರದಲ್ಲಿ ನಿಂತ ಮಾನವನು ನೀರನ್ನು ಬಯಸನು.

ಮನಸ್ಸು ತಾನೇ ಕಲ್ಪಿಸಿದ ಜಾಗ್ರದ ದೇಹವನ್ನು ಸತ್ಯವೆಂದು ಭಾವಿಸಿ, ವಿಷಯೇಂದ್ರಿಯ ಭೋಗದಿಂದ ಸುಖವನ್ನೂ ಮತ್ತು ಜ್ಞಾನೇಂದ್ರಿಯಗಳ ಮುಖಾಂತರ ನೋವಿನ ದುಃಖವನ್ನೂ ಅನುಭವಿಸಿ, ಅವುಗಳ ಪ್ರಬಲ ಸಂಸ್ಕಾರ (ವಾಸನೆ)ಗಳನ್ನು ಹೊಂದುವದು. ಆದರೆ ಮನಸ್ಸು ತಾನೇ ಕಲ್ಪಿಸಿದ ಕನಸಿನ ದೇಹವನ್ನು ಸತ್ಯವೆಂದು ಭಾವಿಸುವದಿಲ್ಲ. ಆದರೆ ಕನಸಿನಲ್ಲಿ ಹೊಂದಿದ ಸಂಸ್ಕಾರ (ವಾಸನೆ)ಗಳನ್ನು ಕಾಯ್ದಿರಿಸಿಕೊಳ್ಳುವದು. (ನೆನಪಿನಲ್ಲಿಟ್ಟುಕೊಳ್ಳುವದು) ಆದರೆ ಮಾನವನು ಜಾಗ್ರದ ದೇಹ ಮತ್ತು ಅದರ ಕ್ರಿಯೆಗಳು, ಕನಸಿನ ದೇಹ ಮತ್ತು ಅದರ ಕ್ರಿಯೆಗಳನ್ನು ಸಮಾನದರ್ಜೆಯವು ಎಂದು ಪರಿಗಣಿಸಬೇಕು. ಜಾಗ್ರದ ದೇಹ ಮತ್ತು ಕನಸಿನ ದೇಹ ಇವೆರಡೂ ಮನಸ್ಸಿನ ಕಲ್ಪನೆಗಳಿರುವದರಿಂದ, ಇವೆರಡೂ ದೇಹಗಳಿಗೂ ಸಾಕ್ಷಿಯಾಗಬೇಕು. ಇವೆರಡೂ ದೇಹಗಳಿಗೆ ಜೀವನು ಸಾಕ್ಷಿಯಾಗಿರುವದರಿಂದ ಅವು ಯಾವದೇ ರೀತಿಯಲ್ಲಿ ಅವನಿಗೆ ಅಂಟಿಕೊಳ್ಳುವದಿಲ್ಲವಾದ್ದರಿಂದ, ಜಾಗ್ರ ಮತ್ತು ಕನಸಿನ ದೇಹಗಳನ್ನು, ಅವುಗಳ ಘಟಕಗಳನ್ನು ಮತ್ತು ಅವುಗಳ ಸಂಗಾತಿಗಳನ್ನು ಬಿಟ್ಟು ಬಿಡಬೇಕು. ಜೀವನು ಜಾಗ್ರ ಮತ್ತು ಕನಸುಗಳಿಗೆ ಸಾಕ್ಷಿಯಾಗಿದ್ದು ತನ್ನ ಜಡ ತಪ್ಪು ತಿಳಿವಳಿಕೆಯಲ್ಲಿ ಅವೆರಡನ್ನೂ ನಿಷ್ಪಕ್ಷಪಾತೀಯ ದೃಷ್ಟಿಯಿಂದ ಪರಿಗಣಿಸದೆ, ಜಾಗ್ರಕ್ಕಷ್ಟೇ ಅಂಟಿಕೊಂಡು ಪಕ್ಷಪಾತ ಮಾಡಿದ್ದಾನೆ. ಮಾನವನು ಜಾಗ್ರ, ಕನಸುಗಳಿಗೆ ಅಷ್ಟೇ ಏಕೆ, ಗಾಢ ನಿದ್ರೆಗೂ ಸಾಕ್ಷಿಯಾಗಬೇಕಾಗುವದು. ಏಕೆಂದರೆ ಜಾಗ್ರ, ಕನಸು, ಗಾಢನಿದ್ರೆ ಇವು ಮೂರೂ ಅವನ ಕಲ್ಪನಾಶಕ್ತಿಯ ಸೃಷ್ಟಿಯು. ಮೂರೂ ಅವಸ್ಥೆಗಳು ಪ್ರಥಮಾನುಭೂತಿಯಲ್ಲಿ ಇಲ್ಲ. ಪ್ರಥಮಾನುಭೂತಿಯ ಸ್ಥಿತಿಯಲ್ಲಿ ಜೀವನಿಗೆ ಪ್ರಕೃತಿಯ ಕಾರ್ಯಗಳು ಕಾಣಿಸುವದಿಲ್ಲ ಮತ್ತು ಪರಮಾತ್ಮನೊಡನೆ (ಸಚ್ಚಿದಾನಂದ) ಇರುವ ಐಕ್ಯತೆಯನ್ನು ಅನುಭವಿಸುವನು. ಜೀವನು ಸ್ವರೂಪನಿಷ್ಠನಿದ್ದು ಬಹಿರ್ಮುಖತೆಯನ್ನು ಹೊಂದದೇ ಇದ್ದಾಗ ಪ್ರಕೃತಿಯ ಕಾರ್ಯಗಳು ಹೇಗೆ ಕಾಣಿಸಬಲ್ಲವು ? ಅಂದಾಗ ಪ್ರಥಮಾನುಭೂತಿಯ ಸ್ಥಿತಿಯಲ್ಲಿ ಬಂಧನ ಅಥವಾ ಮುಕ್ತಿಯೆಲ್ಲಿ? ಸಾಕ್ಷಿ ಸ್ಥಿತಿಯನ್ನು ಹೊಂದಿದವನಿಗೆ ಪ್ರಕೃತಿಯ ಕಾರ್ಯಗಳು ತನಗೆ ಅಂಟಲಾರವು ಎಂಬ ತಿಳಿವಳಿಕೆಯುಂಟಾಗುವದು ಮತ್ತು ಅವನು ಅವುಗಳನ್ನು ತಿಳಿವಳಿಕೆಯಿಂದ ಅಥವಾ ಜ್ಞಾನದಿಂದ ಮರೆಯುವನು. ನಿಜವಾಗಿ ಸಚ್ಚಿದಾನಂದ ಸ್ವರೂಪ ಮಾತ್ರವಿರುವದು. ಪ್ರಕೃತಿ ಮತ್ತು ಪ್ರಕೃತಿಯ ಕಾರ್ಯಗಳು ಸಚ್ಚಿದಾನಂದದ ಆಧಾರದ ಮೇಲೆ ತೋರಿದ ತೋರಿಕೆಗಳು ಮಾತ್ರ.

ಒಂದು ವೇಳೆ ನಿಜವಾಗಿ ಲೌಕಿಕ ಬಂಧನವಿದ್ದದ್ದಾದರೆ , ಶಾಶ್ವತ ಸುಖವನ್ನು ಅಥವಾ ಸತ್ಯವನ್ನು ಹೊಂದುವದಕ್ಕಾಗಿ ಬಂಧನವನ್ನು ಅಥವಾ ಜಗತ್ತನ್ನು ಮತ್ತು ಅದಕ್ಕೆ



ಸಂಬಂಧಿದವುಗಳನ್ನು ಅಥವಾ ವ್ಯವಹಾರಿಕ ಜೀವನವನ್ನು ತೆಗೆದು ಹಾಕಬೇಕು ಎಂಬ ಮತ ಮತ್ತು ಸಿದ್ಧಾಂತಗಳ ವಾದ ಅಡ್ಡಿ ಇಲ್ಲ. ಮಾನವನ ಸ್ವರೂಪದ ಅಧ್ಯಾಸದ ಮೂಲಕವೇ ಅನೇಕ ಮತ, ಸಿದ್ಧಾಂತಗಳು ಉದಯಿಸಿವೆ . ಇವುಗಳನ್ನು ಧರ್ಮ, ತತ್ವಜ್ಞಾನ, ಈಶ್ವರವಾದ, ನಾಸ್ತಿಕವಾದ, ಏಕೇಶ್ವರವಾದ, ಬಹುದೇವವಾದ, ಏಕದೇವೋಪಾಸನೆ (ತಾನು ನಂಬಿರುವ ದೇವರು ಒಬ್ಬನೇ ದೇವರೆಂದು ಪ್ರತಿಪಾದಿಸದೇ ಇರುವ ವಾದ) ಅಥವಾ ಇನ್ನುಳಿದ ಯಾವದೇ ವಾದ ಅಥವಾ ಸಂಧಿವಾತವಾದವೆಂದು ಕರೆಯಬಹುದು. ಮಾನವನು ತಾನು ಬಯಸುವ ಅವಿಕಾರಿ, ನಾಶರಹಿತವಾದ ಆನಂದದ ಪರಂಧಾಮವಾದ, ತನ್ನ ನಿಜಸ್ವರೂಪದ ಕಡೆಗೆ ಲಕ್ಷ್ಯವನ್ನು ಹೊರಳಿಸದೆ ಶಾಶ್ವತ ಸುಖವನ್ನು ಹೊಂದುವದಕ್ಕಾಗಿ ಅನೇಕ ಸಿದ್ಧಾಂತಗಳನ್ನು ಕಟ್ಟಿದರೆ ಕತ್ತಲೆಯಲ್ಲಿ ತಡವರಿಸಿದಂತಾಗುತ್ತದೆ. ನಿಜವಾಗಿ ಲೌಕಿಕ ಅಥವಾ ಪಾರಲೌಕಿಕ ಬಂಧನವಿಲ್ಲ. ಈ ಪ್ರಥಮಾನುಭೂತಿಯಲ್ಲಿ ಯಾವದೇ ವಾದ, ಸಿದ್ಧಾಂತ ಅಥವಾ ತತ್ವಜ್ಞಾನಗಳು ಇಲ್ಲ. 'ನಾನು ಸಚ್ಚಿದಾನಂದನು' ಎಂಬ ತಿಳಿವಳಿಕೆ ಮಾತ್ರ ಇರುವದು. ಇಲ್ಲಿ ಯಾವದೇ ಜಗಳ, ಕಾಳಗ, ಯುದ್ಧ, ಚರ್ಚೆ, ಸಮ್ಮೇಳನಗಳಿಲ್ಲ. ತನಗನ್ಯವಾಗಿ ಏನೊಂದು ಇಲ್ಲದಾಗ ಯಾರೊಡನೆ ಕೂಡುವದು, ಚರ್ಚಿಸುವದು, ಯಾವದರ ಬಗ್ಗೆ, ಯಾವ ಸಿದ್ಧಾಂತಗಳು, ಏನನ್ನು ನಿರೋಧಿಸುವದು, ಎಲ್ಲಿ ನಿರೋಧಿಸುವದು, ಯಾವುದರಿಂದ ನಿರೋಧಿಸುವದು ? ಅಲ್ಲಿ 'ನಾನು ಸಚ್ಚಿದಾನಂದನು' ಎಂಬ ಪ್ರಥಮಾನುಭೂತಿಯು ಮಾತ್ರ ಇರುವದು. ಅಂದಮೇಲೆ ಮಾನವನು ತನ್ನ ಲಕ್ಷ್ಯವನ್ನು ಪ್ರಥಮಾನುಭೂತಿಯ ಕಡೆಗೆ ಏಕೆ ಹೊರಳಿಸಬಾರದು ? ಪ್ರಥಮಾನುಭೂತಿಯಲ್ಲಿ ಮಾಯೆ ಅಥವಾ ಪ್ರಕೃತಿ ಮತ್ತು ಅದರ ಕಾರ್ಯಗಳು, ಅಜ್ಞಾನ, ಅಧ್ಯಾಸ ಯಾವೂ ಇಲ್ಲ. ವ್ಯರ್ಥವಾಗಿ ಧರ್ಮದ ಹೆಸರಿನಲ್ಲಿ ರಕ್ತಪಾತಗಳು ಸಂಭವಿಸಿವೆ. ಆದರೆ ಈ ಅಗಾಧವಾದ ಗಡಿಬಿಡಿಯ ಗದ್ದಲದ ನುಗ್ಗಾಟದಿಂದ ಮಾನವನು ಏನು ಗಳಿಸಿದ್ದಾನೆ ? ಇದೆಲ್ಲವೂ ಪರ್ವತವನ್ನು ಅಗೆದು ಹೆಗ್ಗಣವನ್ನು ಹೊರಗೆ ತೆಗೆದಂತೆ ವ್ಯರ್ಥವೇ ಸರಿ.

ಇಂದು ಮಾನವನು ತನ್ನ ಅನೇಕ ಕ್ರಿಯಾಕ್ಷೇತ್ರಗಳಲ್ಲಿಯ ಮಾಹಿತಿ ಮತ್ತು ಜಾಣತನದ ಬಗ್ಗೆ ಜಂಬಕೊಚ್ಚುವದೆಷ್ಟು ! ಆದರೆ ಅವನು ಪ್ರಾಚೀನ ಋಷಿ ಮುನಿಗಳು ಹೇಳಿದ ಒಂದು ವಾಕ್ಯದ ಸತ್ಯತೆಯನ್ನು ಸಹ ಸಂಶೋಧಿಸಲು ಅಶಕ್ತನಾಗಿದ್ದಾನೆ. ತನಗೆ ಪ್ರಥಮಾನುಭೂತಿಯ 'ತಾನು ಸಚ್ಚಿದಾನಂದನು' ಎಂಬ ಅನುಭವವಿದ್ದರೂ ಶಾಶ್ವತವಾಗಿ ಸುಖಿಯಾಗಲು ಅಶಕ್ತನಾಗಿದ್ದಾನೆ. ತನ್ನ ಮನಸ್ಸನ್ನು ತನ್ನ ಮೂಲದ ಕಡೆಗೆ ಹಿಂತಿರುಗಿಸದೇ, ಹೀಗೆ ಎಲ್ಲಿಯ ತನಕ ಮನಸ್ಸಿನ ಕಲ್ಪನೆಯ ಬಾಹ್ಯ ಸೃಷ್ಟಿಯಲ್ಲಿ ಶಾಶ್ವತಸುಖವನ್ನು ಹುಡುಕುವವ ? ಪ್ರಥಮಾನುಭೂತಿಯಲ್ಲಿ ಯಾವದೇ ಬಂಧನ ಅಥವಾ ಸಂಸಾರವಿಲ್ಲ. ಆದ್ದರಿಂದ ಅದನ್ನು ತೆಗೆದುಹಾಕುವ ಅವಶ್ಯಕತೆಯಿಲ್ಲ. ಸದ್ವಸ್ತುವಿನಲ್ಲಿ ಯಾವದೇ ಬಂಧನವಿದ್ದದ್ದಾದರೆ, ಅದನ್ನು ತೆಗೆದುಹಾಕುವ ಸಮಸ್ಯೆಯು ಉದ್ಭವಿಸುವದು. ಆದರೆ

ಅಲ್ಲಿ ಯಾವದೇ ಬಂಧನವಿಲ್ಲ. ಆದ್ದರಿಂದ ಬಂಧನವಿಲ್ಲ, ಮುಕ್ತಿಯೂ ಇಲ್ಲ. ತನಗೆ ಬಂಧನ ಇದೆಯೆಂಬುವದೂ, ಅದನ್ನು ಕಳೆದುಕೊಳ್ಳಬೇಕೆಂಬುವದೂ ಭ್ರಾಂತಿಯೇ. ಭ್ರಾಂತಿಗೆ ತನ್ನದೇ ಆದ ಲಕ್ಷಣಗಳಿಲ್ಲ. ಭ್ರಾಂತಿಯು ಭ್ರಾಂತಿಯೇ. ಒಂದು ವೇಳೆ ಭ್ರಾಂತಿಗೆ ಲಕ್ಷಣಗಳಿದ್ದದ್ದಾಗಿದ್ದರೆ ಅದು ಸ್ವಯಂ ಇರುವಿಕೆಯುಳ್ಳ ಸದ್ವಸ್ತುವಾಗಿರುತ್ತಿತ್ತು. ಆದ್ದರಿಂದ ಮಾನವನು ನಿರಂತರ (ಸದಾ) ಸುಖಿಯಾಗಿರಬೇಕಾದರೆ ತನ್ನ ಪ್ರಥಮಾನುಭೂತಿಯನ್ನು ನೆನಪಿಸಿಕೊಂಡು ತನ್ನ ನಿಜವಾದ ಸಚ್ಚಿದಾನಂದವೇ ಇರುವದು, ಇದನ್ನು ಬಿಟ್ಟು ಮತ್ತೇನನ್ನೂ ಮಾಡಬೇಕಾಗಿಲ್ಲ. ಯಾವದೇ ವ್ಯಕ್ತಿಯ ಅಥವಾ ವಸ್ತುವಿನ ಬಗೆಗೆ ಯಾವದೇ ದೇಶದಲ್ಲಿಯೂ, ಯಾವದೇ ಕಾಲಕ್ಕೂ ಚಿಂತಿಸಬೇಕಾಗಿಲ್ಲ. ಏಕೆಂದರೆ ತನ್ನ ನಿಜಸ್ವರೂಪದಲ್ಲಿ ಕಾಲ, ದೇಶ, ಕಾರಣ, ಪ್ರಮಾಣ ಮುಂತಾದವುಗಳಿಗೆ ಎಡೆಯಿಲ್ಲ. ಆದ್ದರಿಂದ ಎಲೆ ಮಾನವನೇ ! ನಿನ್ನ ನಿಜಸ್ವರೂಪವೇ ಇರು. ಇದೇ ಸಾಧನೆ. ನಿನ್ನ ನಿಜವನ್ನು ಬಿಟ್ಟು ಅನ್ಯವನ್ನು ನೀನೆಂದು ತಿಳಿದುಕೊಳ್ಳಲು ನಿನಗೆ ಯಾರು ಹೇಳಿದರು ?

ಇಲ್ಲಿ ಧ್ಯಾನದ ಬಗ್ಗೆ ಸ್ವಲ್ಪದರಲ್ಲಿ ವಿವರಿಸಿದೆ. ಪ್ರತಿಯೊಬ್ಬನೂ ತನ್ನಷ್ಟಕ್ಕೆ ತಾನೇ "ನಾನು ಯಾರು" ? ನಾನು ಯಾರನ್ನು ಧ್ಯಾನಿಸಬೇಕು ? ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳಲಿ. ಈ ಪ್ರಶ್ನೆಗಳನ್ನು ಉತ್ತರಿಸಲು ತನಗೇನಾದರೂ ಅಂಗಗಳು ಇವೆಯೇ ? ತನಗನ್ಯವಾಗಿ ಏನಾದರೂ ಇದೆಯೇ ? ಎಂಬುದನ್ನು ವಿಚಾರಿಸಿಕೊಳ್ಳಬೇಕು. ತನಗೆ ಅವಯುವಗಳೇ ಇಲ್ಲದಿದ್ದರೆ ಮತ್ತು ತನಗನ್ಯವಾಗಿ ಏನೂ ಇರದೆ ತಾನು ಪೂರ್ಣನಿದ್ದರೆ ಏನನ್ನಾದರೂ ಕಲ್ಪಿಸುವ ಮತ್ತು ಅದನ್ನು ಧ್ಯಾನಿಸುವದೆಂಬುವದು ಇರುವದೇ ಇಲ್ಲ. ಒಂದು ವೇಳೆ ತನಗನ್ಯವಾಗಿ ಏನನ್ನಾದರೂ ಬಯಸಿದರೆ ಅವನು ಪೂರ್ಣನಲ್ಲ. ಅಪೂರ್ಣನಿರುವನು. ಆದ್ದರಿಂದ ತಾನು ಬಯಸಿದ ಅನ್ಯವನ್ನು ಪಡೆದು ಪೂರ್ಣನಾಗಬೇಕು. ಈ ರೀತಿಯಾಗಿ ಕೂಡಿದವುಗಳು ಒಂದಿಲ್ಲ ಒಂದು ದಿನ ಬೇರ್ಪಡಲೇಬೇಕು. ಏಕೆಂದರೆ ಅವು ಕಾಲ ದೇಶಗಳಲ್ಲಿರಬೇಕು ಮತ್ತು ಕಾರಣದ ನಿಯಮಗಳನ್ನು ಅನುಸರಿಸಬೇಕು. ಆದ್ದರಿಂದ ಅವು ಶಾಶ್ವತವಲ್ಲ. ಇದೆಲ್ಲವೂ ಮನಸ್ಸಿನ ಲೆಕ್ಕವು. ನೈಸರ್ಗಿಕವಾಗಿ ಬಾಹ್ಯ ಪ್ರವೃತ್ತಿಯುಳ್ಳ ಇಂದ್ರಿಯಗಳ ಜ್ಞಾನವನ್ನು ಬದಿಗಿರಿಸಿ ತನ್ನ ಪ್ರಥಮಾನುಭೂತಿಯನ್ನು ಸಾಕ್ಷಾತ್ಕರಿಸಿಕೊಂಡದ್ದಾದರೆ, ತಾನೇ ಸಚ್ಚಿದಾನಂದ ಎಂಬ ಸುನಿಶ್ಚಿತ ಅನುಭವವಾಗುವದು. ಆದ್ದರಿಂದ ಧ್ಯಾನದ ಪ್ರಶ್ನೆಯೇ ಇಲ್ಲ. ಮೊಟ್ಟ ಮೊದಲಿಗೆ ಧ್ಯಾನಿಸುವವನು ಯಾರು ಎಂಬುದನ್ನು ತಿಳಿದುಕೊಳ್ಳಬೇಕು. ನಮ್ಮ ನಿಜಸ್ವರೂಪದಲ್ಲಿ ಧ್ಯಾನಿಸುವವನು ಧ್ಯಾನಿಸಲ್ಪಟ್ಟಿದ್ದು, ಧ್ಯಾನವೂ ಯಾವದೂ ಇಲ್ಲ ; ಜ್ಞಾತೃ, ಜ್ಞೇಯ, ಜ್ಞಾನಗಳಿಲ್ಲ. ನಾನು ಸಚ್ಚಿದಾನಂದನೇ ಇರುವೆನು.

ದೇಹವನ್ನು ಬಿಡುವದು ಅಥವಾ ಮುಕ್ತಿ ಅಥವಾ ಜೀವನ್ಮುಕ್ತಿಯು, ದೇಹವು



ಜೀವಂತವಿರುವಾಗಲೇ ಸಂಭವಿಸುವದು, ಬದಲಾಗಿ ದೇಹವು ಸತ್ತ ಮೇಲೆ ಅಲ್ಲ. ದೇಹವು ಎಲ್ಲಿ ಹಿಡಿಯಲ್ಪಟ್ಟಿದೆ ? ದೇಹವನ್ನು ಯಾರು, ಎಲ್ಲಿ ಹಿಡಿದಿದ್ದಾರೆ ? ಅತಿ ಸೂಕ್ಷ್ಮ ಸಾಧನ ಅಥವಾ ಕರಣವು ಚಿದಾಭಾಸನ ಮುಖಾಂತರ ಕಾರಣ, ಸೂಕ್ಷ್ಮ ಮತ್ತು ಸ್ಥೂಲ ಶರೀರಗಳನ್ನು ಕಲ್ಪಿಸಬಹುದು. ಜೀವಾತ್ಮನು ಅಹಂಕಾರ ಉಪಾಧಿಯ ಮೂಲಕ ದೇಹವನ್ನು ಹಿಡಿದಿದ್ದಾನೆ. ಆದರೆ ದೇಹದಲ್ಲಾಗುವ ಬದಲಾವಣೆಯಿಂದ ಜೀವಾತ್ಮನು ಯಾವದೇ ವಿಕಾರವನ್ನು ಹೊಂದುವದಿಲ್ಲ. ಪ್ರಾಣಗಳು ತಾವೇ ದೇಹವೆಂದು ಹೇಳಿ, ದೇಹವನ್ನು ಹಿಡಿದಿಲ್ಲ. ಪ್ರಾಣಗಳು ಜಡವಿವೆ, ಅವುಗಳಿಗೆ ತಿಳಿಯುವ ಶಕ್ತಿಯಿಲ್ಲ. ಆದ್ದರಿಂದ ಅವು ತಾವು ದೇಹವೆಂದು ತಿಳಿದುಕೊಳ್ಳಲಾರವು. ದೇಹವೆಂದರೆ ಬರೇ ಸ್ಥೂಲ ದೇಹ ಮಾತ್ರವಲ್ಲ, ಅದರಲ್ಲಿ ಸೂಕ್ಷ್ಮ, ಕಾರಣ, ಮಹಾಕಾರಣ (ಮಾಯಾತನು) ಶರೀರಗಳೂ ಇವೆ. ಆದ್ದರಿಂದ ಪ್ರಾಣಗಳು ಅಥವಾ ಇಂದ್ರಿಯಗಳು ಶರೀರ (ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣ) ಗಳನ್ನು ಕಲ್ಪಿಸಿಲ್ಲ. ಆದ್ದರಿಂದ ಯಾವದೇ ಪ್ರಾಣ ಅಥವಾ ಇಂದ್ರಿಯವು ದೇಹವನ್ನು ಬಿಡುವದರಲ್ಲಿ ಪ್ರಮುಖ ಅಥವಾ ಅತಿ ಮಹತ್ವದ ಪಾತ್ರವನ್ನು ವಹಿಸುವದಿಲ್ಲ.

ಪ್ರಾಣಗಳು ಶರೀರವನ್ನು ಬಿಡುವವು. ದೇಹೇಂದ್ರಿಯಗಳು ಸಾಯುವವು, ಆದರೆ 'ನಾನು ದೇಹ' ಎಂಬ ಭಾವ ಅಥವಾ ಅನಿಸುವಿಕೆಯು ಸಾಯುವದಿಲ್ಲ. ಸ್ಥೂಲ ದೇಹವು ಮರಣ ಹೊಂದಿದರೂ 'ನಾನು ದೇಹ' ಎಂಬ ತಿಳಿವಳಿಕೆಯು ಸೂಕ್ಷ್ಮ ಶರೀರದಲ್ಲಿ ಮುಂದುವರಿಯುವದು. ಜೀವಂತವಿರುವಾಗ ಗಾಢ ನಿದ್ರೆಯಲ್ಲಿ 'ನಾನು ದೇಹ' ಎಂಬ ತಿಳಿವಳಿಕೆಯು ಕಾರಣ ಶರೀರ (ಅಜ್ಞಾನ) ದೊಡನೆ ಒಂದಾದಂತಾಗಿರುವದು. ಮಾಯಾತನು ಎಂಬ ಕರಣದ ಮೂಲಕ ಸ್ವರೂಪದ ಸಾಕ್ಷಾತ್ಕಾರವನ್ನು ಹೊಂದುವಾಗ, ತಾನು (ಅಹಂಕಾರವು) ಮೂರೂ ಅವಸ್ಥೆಗಳಿಗೂ ಸಾಕ್ಷಿ ಚೈತನ್ಯದ ರೂಪದಲ್ಲಿರುವದು. ಈ ಸ್ಥಿತಿಯಲ್ಲಿ ತಾನು ದೇಹ (ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣ) ವೆಂಬ ಭಾವವನ್ನು ಬಿಡುವನು. ಏಕೆಂದರೆ ತಾನು ಎಲ್ಲ ಶರೀರಗಳಿಗೂ (ಮಾಯಾ ಶರೀರಕ್ಕೂ ಕೂಡ ) ಸಾಕ್ಷಿಯಾಗಿರುವನು. ಮಾಯಾತನುವಿನ ಲಕ್ಷಣವೆಂದರೆ, ಅದು ಜೀವನಿಗೆ ತಾನು ಸಚ್ಚಿದಾನಂದ ಸ್ವರೂಪನು ಎಂಬುದನ್ನು ಸಾಕ್ಷಾತ್ಕರಿಸಿಕೊಳ್ಳುವಂತೆ ಮಾಡುವದು. ಆದ್ದರಿಂದ ಈ ಸಾಕ್ಷಿ ಸ್ಥಿತಿಯಲ್ಲಿ ಜೀವನು ಎಲ್ಲ ದೇಹಗಳನ್ನು ಬಿಡುವನು. ತಾನೇ ಸತ್ಯವೆಂದು ಸಾಕ್ಷಾತ್ಕಾರ ಹೊಂದುವನು. ಇದೇ ಜೀವನ್ಮುಕ್ತಿಯ ಸ್ಥಿತಿ. ಸ್ಥೂಲ ಶರೀರವು ಉಸಿರಾಡುತ್ತಿರುವದು. ಆದರೆ ತಾನು ಯಾವದೇ ದೇಹಗಳಿಂದ ಬಾಧೆ ಹೊಂದಿಲ್ಲ. ಯಾವದೇ ದೇಹಗಳಿಗೆ ತಾನು ಅಂಟಿಕೊಂಡಿಲ್ಲ ಎಂಬ ಸಾಕ್ಷಾತ್ಕಾರವನ್ನು ಹೊಂದುವನು. ದೇಹಭಾವವು ಅಹಂಕಾರದಲ್ಲಿಯೇ ಉಳಿದಿದೆ, ಬದಲಾಗಿ ಪ್ರಾಣ ಅಥವಾ ಇಂದ್ರಿಯ ಗಳಲ್ಲಲ್ಲ. ದೇಹಭಾವವನ್ನು ಉಳಿಸಿಕೊಂಡ ಅಹಂಕಾರವು ಮಾಯಾತನುವಾಗಿ ಪರಿವರ್ತನೆ ಹೊಂದಿ, ಉಳಿದ ಮೂರು ಶರೀರಗಳನ್ನು ಬಿಟ್ಟು, ಸಚ್ಚಿದಾನಂದವನ್ನು ಮಾತ್ರ

ಉಳಿಸಿಕೊಳ್ಳುವದು. ಆತ್ಮಸಾತಕ್ಷಾತ್ಕಾರದ ಮೂಲಕ ಉಳಿದ ಮೂರು ಶರೀರಗಳ ಜ್ಞಾನವು ಸಂಪೂರ್ಣವಾಗಿ ಇಲ್ಲದಂತಾಗುವದು. ಸ್ವರೂಪ ಸಾಕ್ಷಾತ್ಕಾರದ ಸ್ಥಿತಿಯಿಂದ ವ್ಯಾವಹಾರಿಕ ಜಾಗ್ರದ ಭೌತಿಕ ಶರೀರದ ಎಚ್ಚರಿಕೆಗೆ ಬಂದರೂ, ಸ್ವರೂಪ ಸಾಕ್ಷಾತ್ಕಾರದ ಜ್ಞಾನವು ಮಾಜುವದಿಲ್ಲ. ಏಕೆಂದರೆ ಸ್ವರೂಪದ ಅಜ್ಞಾನವು ಸಂಪೂರ್ಣವಾಗಿ ನಾಶವಾಗಿರುವದು. ಬಾಜೀಗಾರನು ಹೇಗೆ ಅನೇಕ ಯುಕ್ತಿ ಮತ್ತು ಪ್ರದರ್ಶನಗಳನ್ನು ಯಾವಾಗಲೂ ಸುಳ್ಳೆಂದು ಪ್ರದರ್ಶಿಸುವಂತೆ, ಜೀವನ್ಮುಕ್ತನು ಇಹಲೋಕದ ದೈನಂದಿನ ಕ್ರಿಯೆಗಳನ್ನು ಅವು ತನ್ನನ್ನು ಎಂದೆಂದಿಗೂ ಬಾಧಿಸಲಾರವು ಎಂಬ ತಿಳಿವಳಿಕೆಯಿಂದ ಮಾಡುತ್ತಿರುವನು. ಸ್ವರೂಪದ ಅಜ್ಞಾನವುಳ್ಳವನಿಗೆ ದೇಹ ಭಾವವು ಸತ್ಯವೇ ಇರುವದು. ಸ್ವರೂಪದ ಜ್ಞಾನಿಗೆ ದೇಹಭಾವವು ಸುಳ್ಳಾಗಿರುವದು. ಇದೆಲ್ಲವೂ ಅಹಂಕಾರವೆಂಬ ಉಪಾಧಿಯ ಕೆಲಸವು. ಯಾವಾಗ ಅಹಂಕಾರವು ಮಿಥ್ಯಾ ಅಥವಾ ಹುಸಿಯಾಗುವದೋ, ಆಗ ಸಚ್ಚಿದಾನಂದ ಸ್ವರೂಪವನ್ನು ಬಿಟ್ಟು ಉಳಿದೆಲ್ಲವೂ ಮಿಥ್ಯೆಯಾಗುವದು.

ಗರ್ಭಾಶಯದಲ್ಲಿ ದೇಹವು ಬೆಳೆದನಂತರ, ಪ್ರಾಣಗಳಿಂದ ಸಾಗಿಸಲ್ಪಟ್ಟ ಸೂಕ್ಷ್ಮ ಶರೀರದೊಡನೆ ತಲೆಯ, ಮಧ್ಯದಲ್ಲಿಯ ಮೃದುವಾದ ಭಾಗವಾದ ಬ್ರಹ್ಮರಂಧ್ರದ ಮೂಲಕ ಜೀವಾತ್ಮನು ದೇಹದಲ್ಲಿ ಪ್ರವೇಶಿಸುವನು. ಆದ್ದರಿಂದ ಹಟಯೋಗ ಅಭ್ಯಾಸಿಗಳು ದೇಹವನ್ನು ಬಿಡುವ ಕಾಲದಲ್ಲಿ, ದೀರ್ಘಉಸಿರಾಟದ ಮೂಲಕ ಪ್ರಾಣವು ಸುಷುಮ್ನನಾಡಿಯೊಳಗೆ ಹಾಯುವಂತೆ ಮಾಡಿ, ಅದನ್ನು ಬ್ರಹ್ಮರಂಧ್ರದಲ್ಲಿರಿಸುವರು. ಕೊನೆಗೆ ಬ್ರಹ್ಮರಂಧ್ರದ ಮುಖಾಂತರ ದೇಹವನ್ನು ಬಿಡುವರು. ಗಾಢನಿದ್ರೆಯಂತಿರುವ ಬ್ರಹ್ಮಲೋಕದ ಸುಖವನ್ನು ಅನುಭವಿಸುವದಕ್ಕಾಗಿ ಬ್ರಹ್ಮಲೋಕವನ್ನು ಹೊಂದುವರು. ಅಲ್ಲಿಯ ಸುಖವನ್ನು ಅನುಭವಿಸಿ, ಪುಣ್ಯವು ತೀರಿದ ಮೇಲೆ ಮತ್ತೆ ಅವರು ಇಹಲೋಕಕ್ಕೆ ಮರಳಬೇಕಾಗುವದು. ಆದ್ದರಿಂದ ಇದು ಜೀವನ್ಮುಕ್ತಿಯಲ್ಲ. ಏಕೆಂದರೆ ಸೂಕ್ಷ್ಮ ಶರೀರ ದಲ್ಲಿಯ ವಾಸನೆಗಳು ನಾಶವಾಗಿಲ್ಲ. ಪರಮಾತ್ಮನ ಪ್ರತಿಬಿಂಬವಾದ ಜೀವಾತ್ಮನನ್ನೊಳಗೊಂಡ ಸೂಕ್ಷ್ಮ ಶರೀರದ ಅಂತಃಕರಣದಲ್ಲಿ ವಾಸನೆಗಳುಂಟಾಗಿವೆ. ಸೂಕ್ಷ್ಮಶರೀರವು ಪ್ರಾಣಗಳ ಮುಖಾಂತರ ಒಂದು ಸ್ಥೂಲ ಶರೀರದಿಂದ ಮತ್ತೊಂದು ಸ್ಥೂಲ ಶರೀರಕ್ಕೆ ಒಯ್ಯಲ್ಪಡುವದು. ತುರ್ಯದಲ್ಲಿಯ ಮಾಯಾತನುವೆಂಬ ಉಪಾಧಿಯ ಮುಖಾಂತರ ಸ್ವರೂಪದ ತಿಳಿವಳಿಕೆಯ ಮೂಲಕ ಸ್ವರೂಪ ಸಾಕ್ಷಾತ್ಕಾರವನ್ನು ಹೊಂದಿ ವಾಸನಾನಾಶ ಮಾಡುವದೇ ಜೀವನ್ಮುಕ್ತಿಯು. ಈ ರೀತಿಯಾಗಿ ಸ್ವರೂಪಸಾಕ್ಷಾತ್ಕಾರವನ್ನು ಹೊಂದಿದವರು ಮತ್ತೆ ಇಹಲೋಕಕ್ಕೆ ಮರಳುವದಿಲ್ಲ ಅಥವಾ ಪುನರ್ಜನ್ಮವನ್ನು ಹೊಂದುವದಿಲ್ಲ.

ಹಟಯೋಗ ಅಭ್ಯಾಸದಿಂದ ಮುಕ್ತಿ ಹೊಂದುವದು ಸಾಧ್ಯವಿಲ್ಲ. ಮುಕ್ತಿಯನ್ನು ಹೊಂದಬೇಕಾದರೆ ಶ್ರದ್ಧೆ ಮತ್ತು ನಿಷ್ಠೆಯಿಂದ, ವಿವೇಕ ವೈರಾಗ್ಯಗಳನ್ನು ಹೊಂದಬೇಕು.



ನಂತರ ಎರಡು ಕಲ್ಪನೆಗಳ ನಡುವಿನ ಕಲ್ಪನಾರಹಿತ, ಅರಿವು ಸಹಿತ, ಶಾಶ್ವತ ಆನಂದದ ಸೂತ್ರ (ಸಂಧ್ಯಾಸೂತ್ರ) ದ ಏಕಾಗ್ರತೆಯ ಮುಖಾಂತರ, ಮೂರೂ ಅವಸ್ಥೆಗಳಿಗೆ (ಜಾಗ್ರ, ಕನಸು, ಗಾಢನಿದ್ರೆ) ಸಾಕ್ಷಿಯಾಗಿ ತುರ್ಯಸ್ಥಿತಿಯನ್ನು ಹೊಂದಬೇಕು. ಎಲ್ಲರೂ ಬಯಸುವ, ಜೀವನ ಪರಂಧಾಮವಾದ ಶಾಶ್ವತ ಸುಖವನ್ನು (ವಿವೇಕ, ವೈರಾಗ್ಯಗಳ ಮೂಲಕ ಸ್ವರೂಪ ಸಾಕ್ಷಾತ್ಕರಿಸಿಕೊಂಡು) ಹೊಂದಿರುವದರಿಂದ ಎಲ್ಲ ವಾಸನೆಗಳು (ದೇಹವಾಸನೆ, ಲೋಕವಾಸನೆ, ಶಾಸ್ತ್ರವಾಸನೆಗಳು) ನಾಶವಾಗಿರುತ್ತವೆ. ಆದ್ದರಿಂದ ಯಾವದೇ ಲೋಕದಲ್ಲಿ ಜನ್ಮತಾಳುವ ಪ್ರಶ್ನೆಯೇ ಇಲ್ಲ.

ಮಾದಕಪದಾರ್ಥಗಳ ಸೇವನೆಯಿಂದ ಹೊಂದಿದ ವಿಶ್ರಾಂತಿ ಅಥವಾ ಶಾಂತಿಯು, ಶಾಂತಿಯೇ ಅಲ್ಲ. ಏಕೆಂದರೆ ಅದು ಕ್ಷಣಿಕವೂ ಮತ್ತು ಅನಾರೋಗ್ಯಕರವೂ ಆಗಿದೆ. ಯಾವದೇ ಮಾದಕ ಪದಾರ್ಥಗಳಾಗಲಿ, ಉದಾಹರಣೆಗೆ ಅಫೀಮು, ಶೆರೆ, ಎಲ್.ಎಸ್.ಡಿ. ಮುಂತಾದವುಗಳು ಶರೀರದ ರಚನೆ ಮತ್ತು ಭೌತಿಕ ಮತ್ತು ಮಾನಸಿಕ ಶಕ್ತಿಯನ್ನು ನಾಶ ಮಾಡುವವು. ಅವು ಭೌತಿಕ ಶರೀರವನ್ನು, ಭೌತಿಕ ಮತ್ತು ಮಾನಸಿಕ ಶಕ್ತಿಯನ್ನು ಕ್ಷಯಿಸುವವು. ಈ ಮಾದಕ ಪದಾರ್ಥಗಳ ಚಟಗಳು ಮೊದಲು ಬೆಳೆಯುತ್ತ ಹೋಗುವವು. ನಂತರ ಬಲಶಾಲಿಯಾಗುವವು. ಮಾನವನು ಈ ಚಟಗಳಿಗಾಗಿ ಹೇರಳವಾಗಿ ಹಣವನ್ನು ಹಾಳು ಮಾಡುತ್ತಾನೆ. ಈ ಚಟಗಳು ಅವನ ವಿಶ್ರಾಂತಿ ಮತ್ತು ಶಾಂತಿಯ ಹಸಿವನ್ನು ಹಿಂಗಿಸಲಾರವು. ಒಮ್ಮೆ ಈ ಚಟಗಳು ಬಲಶಾಲಿಯಾದರೆ ಅವುಗಳನ್ನು ಬಿಡುವದು ಅತಿ ಕಠಿಣವಾಗುವದು. ಇವು ನಿದ್ರೆಯನ್ನು ಮಾಡುವದಕ್ಕೂ ಕೂಡ ವಿಘ್ನವಾಗುವವು. ಅವುಗಳಿಂದ ಬುದ್ಧಿ ವಿಕಲವಾಗುವದು. ಈ ಚಟಗಳಿಗೆ ಅಂಟಿಕೊಂಡವರು ಹೆಚ್ಚಾಗಿ ಹುಚ್ಚರಾಗುವ ಸಂಭವವಿರುವದು. ಇವು ನಿದ್ರೆಯ ಹಾಗೆ ಎಂದಿಗೂ ನೈಸರ್ಗಿಕ ವಿಶ್ರಾಂತಿ ಅಥವಾ ಶಾಂತಿ ಕೊಡಲಾರವು. ನಿದ್ರೆಯು ಆರೋಗ್ಯಕರವಿರುವದು. ಏಕೆಂದರೆ ಅದು ನೈಸರ್ಗಿಕವಾಗಿ ದೈನಿಕ ದಣಿವನ್ನು ಅಥವಾ ಬೇಸರಿಕೆಯನ್ನು ಕಳೆಯುವದು. ಆದರೆ ಮಾದಕ ಪದಾರ್ಥಗಳು ವಿಶ್ರಾಂತಿಯನ್ನು ಕೊಡುವವು ಎಂದು ತೋರಿದರೂ ಅಶಕ್ತತೆಯನ್ನುಂಟು ಮಾಡುವವು. ಇವುಗಳ ಸುಖವು ಪ್ರಥಮಾನುಭೂತಿಯ ಆನಂದಕ್ಕೆ ಹೋಲಿಸಲು ಸಾಟಿಯೇ ಅಲ್ಲ. ಗಾಢನಿದ್ರೆಯ ಆನಂದವನ್ನು ಪ್ರಥಮಾನುಭೂತಿಯ ಆನಂದಕ್ಕೆ ಹೋಲಿಸಿದಾಗ, ಅದು ಕ್ಷಣಿಕವೂ ಪರಿಚ್ಛಿನ್ನವೂ ಇರುವದು. ಗಾಢನಿದ್ರೆಯು ಸಹ ನಮ್ಮನ್ನು ಶಾಶ್ವತ ಶಾಂತಿಗೆ ಒಯ್ಯಲಾರದು. ಅಂದಾಗ ಅಜ್ಞಾನಾಂಧಕಾರದ ಮಹಾರಣ್ಯಕ್ಕೆ ಒಯ್ಯುವ ಇವುಗಳು ನಮ್ಮನ್ನು ಶಾಶ್ವತ ಸುಖದೆಡೆಗೆ ಒಯ್ಯುವದು ಅಸಾಧ್ಯವು. ಪ್ರಥಮಾನುಭೂತಿಯ ಸೂತ್ರವು ಮಾನವನನ್ನು ಶಾಶ್ವತಶಾಂತಿ ಅಥವಾ ಸ್ವರೂಪದ ಪ್ರಕಾಶ ಅಥವಾ ಜ್ಞಾನಕ್ಕೊಯ್ಯುವದು. ಸ್ವರೂಪಜ್ಞಾನದಿಂದ ಮಾನವನು ನಿರಂತರ ಮತ್ತು ಅನಂತಸುಖದಲ್ಲಿ ನೆಲೆ ನಿಲ್ಲುವನು.

# ಗಾಢನಿದ್ರೆ ಮತ್ತು ಸಮಾಧಿ

ಸಚ್ಚಿದಾನಂದ ಸ್ವರೂಪ್ಪಕನ್ಯವಾಗಿ ಏನೂ ಇಲ್ಲ. ಆದ್ದರಿಂದ ಯಾವುದರ ಹೆದರಿಕೆಯೂ ಇಲ್ಲ. ಸಚ್ಚಿದಾನಂದ ಸ್ವರೂಪನೇ ನಾನು. ನಾನೇ ನಾನು. ನನಗನ್ಯವಾಗಿ ಏನೂ ಇಲ್ಲದಿದ್ದಾಗ ಶೋಕ, ಮೋಹ, ಭಯಗಳಿರಲಾರವು. ಸಚ್ಚಿದಾನಂದ ಸ್ವರೂಪಕ್ಕನ್ಯವಾದುದೆಲ್ಲವೂ ಸಚ್ಚಿದಾನಂದ ಸ್ವರೂಪದ ಆಧಾರದ ಮೇಲೆ ತೋರಿದ, ಅಜ್ಞಾನದಿಂದ ದೂಷಿತವಾದ ಮನಸ್ಸಿನ ಭ್ರಾಂತಿಯು. ನಾನೇ ಸಚ್ಚಿದಾನಂದನು ಎಂಬುದನ್ನು ತಿಳಿಸುವ ಪ್ರಥಮಾನುಭೂತಿಯು ತ್ರಿಕಾಲಗಳಲ್ಲಿಯೂ ಇದೆ. ವಿಷಯಾಸಕ್ತಿಯಿಂದ ವಿಷಯ ಸುಖಕ್ಕಾಗಿ ಮೋಹಾಂಧನಾದ ಅವಿವೇಕಿ ಜೀವಿಯು ಪರಿಶುದ್ಧ ಪ್ರಥಮಾನುಭೂತಿಯ ಜ್ಞಾನದ ಕಹಳೆಯ ಕಡೆಗೆ ಲಕ್ಷಕೊಡಲಾರನು. ಆದರೆ ವಿವೇಕಿಗಳು, ತಾವೇ ಸಚ್ಚಿದಾನಂದ ಸ್ವರೂಪರು ಎಂಬ ಪ್ರಥಮಾನುಭೂತಿಯನ್ನು ನೆನಪಿಗೆ ತಂದು ಕೊಳ್ಳುವರು.ಅಜ್ಞಾನಾಂಧಕಾರದಿಂದ ದೂಷಿತನಾಗದೇ ಈ ಅವಿನಾಶಿ, ಅವಿಕಾರಿ, ಪರಿಶುದ್ಧ, ನಿಜವಾದ ಪಾರಮಾರ್ಥ ದೃಷ್ಟಿಯಿಂದ ವಿಚಾರಿಸಿ ನೋಡಿದಾಗ ಇಹದ ಕರ್ಮಗಳು ಮತ್ತು ಅವುಗಳ ಫಲಗಳು, ಪರಿಶುದ್ಧ, ಶಾಶ್ವತ ಮತ್ತು ಅವಿನಾಶಿಯಾದ ಆನಂದ ಸ್ವರೂಪವನ್ನು ಮುಟ್ಟಲಾರವು. (ಸ್ಪರ್ಶಿಸಲಾರವು) .ಮತ್ತು ದೂಷಿತಗೊಳಿಸಲಾರವು ಎಂಬುದು ಸ್ಪಷ್ಟವಾಗುತ್ತದೆ.

ತನ್ನ ಸ್ವರೂಪದ ಪ್ರಥಮಾನುಭೂತಿಯ ಆನಂದವನ್ನು ನೆನಪಿಗೆ ತೆಗೆದುಕೊಂಡು, ಅದರಲ್ಲಿ ನೆಲೆಗೊಂಡು ನಿಂತವನು ಯಾವುದರಿಂದಲೂ ವಿಕಾರವನ್ನು ಹೊಂದುವುದಿಲ್ಲ. ಜೀವನು ಆನಂದ ಸ್ವರೂಪವೇ ಇದ್ದಾನೆ, ತನಗನ್ಯವೇನೂ ಇಲ್ಲದೆ, ತನ್ನಷ್ಟಕ್ಕೆ ತಾನೇ ಶ್ರೇಷ್ಠ ಸಾಮ್ರಾಟನಿದ್ದಾನೆ. ಪ್ರಥಮಾನುಭೂತಿಯಲ್ಲಿ ನಾಮ, ರೂಪ ಕ್ರಿಯೆಗಳಿಲ್ಲ.

ಸ್ವರೂಪದ ಆಧಾರದ ಮೇಲೆ ತೋರಿದ ಅಜ್ಞಾನಾವೃತ ಜೀವಿಗಳಿಗೆ ಇಹಲೋಕವೆಂದರೆ ನಾಮ, ರೂಪ, ಕ್ರಿಯೆ ಎಂಬ ತಿಳುವಳಿಕೆಯೇ ಇರುವುದು. ಸ್ವರೂಪಾವಸ್ಥಿತಿಯನ್ನು ಹೊಂದಿದವನು ಅಥವಾ ಜೀವನ್ಮುಕ್ತನು ಒಳಗೂ ಹೊರಗೂ ಏನನ್ನೂ ಮಾಡದೇ ತನ್ನ ನಿಜಸ್ವರೂಪದಲ್ಲಿಯೇ ಪೂರ್ಣ ತೃಪ್ತಿಯನ್ನು ಹೊಂದಿ, ತನ್ನ ಸ್ವರೂಪಾನಂದದಲ್ಲಿಯೇ ನೆಲೆಯಾಗಿ ನಿಂತಿರುತ್ತಾನೆ. ಸಚ್ಚಿದಾನಂದ ಸ್ವರೂಪವು ಸ್ವತಂತ್ರವಿದೆ. ಅನಾತ್ಮವೆಲ್ಲಕ್ಕೂ ಸಚ್ಚಿದಾನಂದ ಸ್ವರೂಪವೇ ಆಧಾರವು. ದೇವ ದೇವತೆಗಳು ಸ್ವರೂಪದ ಆಧಾರದ ಮೇಲೆ ತೋರಿದ ಜೀವನ ಕಲ್ಪನೆಯಲ್ಲಿಯ ಕಲ್ಪನಾತರೆಗಳು ಮಾತ್ರ. ಭಿನ್ನ ಭಿನ್ನ ದೇವ ದೇವತೆಗಳನ್ನು ಕೆಲವೇ ಮಾನವರು ಕಲ್ಪಿಸಿಕೊಂಡಿದ್ದಾರೆ. ಅವರು ತಮ್ಮ ಇಚ್ಛೆಗನುಸಾರವಾಗಿ ಬೇರೆ ಬೇರೆ ನಾಮ, ರೂಪಗಳ ದೇವ ದೇವತೆಗಳನ್ನು ಕಲ್ಪಿಸಿಕೊಂಡಿದ್ದಾರೆ.ಇಂಥ ಕಾಲ್ಪನಿಕ ದೇವ



ದೇವತೆಗಳ ಗೊಡವೆ ನಮಗೇತಕೆ ? ಆತ್ಮಜ್ಞಾನಿಗಳು ತಮ್ಮ ನಿಜ ಸ್ವರೂಪದಲ್ಲಿಯೇ ತೃಪ್ತಿಯನ್ನು ಹೊಂದಿ, ಸ್ವರೂಪವೇ ಉಳಿಯುತ್ತಾರೆ.

ಸ್ವರೂಪವೆಂದರೆ ಸಚ್ಚಿದಾನಂದವು, ಸ್ವರೂಪವೇ ಸತ್ಯವು ; ನಾಮ, ರೂಪಗಳು ಕಾಲ್ಪನಿಕ ಮತ್ತು ಮಿಥ್ಯವಾಗಿವೆ. ನಾಮ, ರೂಪಗಳು ಮಿಥ್ಯೆ ಎಂಬುದನ್ನು ತಿಳಿದುಕೊಂಡರೆ ಸಾಕು, ಎಲ್ಲವನ್ನು ತಿಳಿದಂತೆಯೇ. ಆಗ ತಿಳಿಯಬೇಕಾದದ್ದೆಂಬುದು ಉಳಿಯುವುದಿಲ್ಲ. ನಾಮ ರೂಪಗಳ ಆಸಕ್ತಿಯಿಂದಲೇ ವ್ಯಾವಹಾರಿಕ ಜಾಗ್ರವು ತೋರುತ್ತದೆ. ಸಚ್ಚಿದಾನಂದ ಅಥವಾ ಪಾರಮಾರ್ಥಿಕ ದೃಷ್ಟಿಯಿಂದ ವ್ಯಾವಹಾರಿಕ ಜ್ಞಾನವು ಸುಳ್ಳಿರುವುದು. ನಾಮ, ರೂಪಗಳು ಸತ್ಯವೆಂಬ ತಿಳುವಳಿಕೆ ಇದ್ದಾಗ ಬಂಧನವಿರುವುದು. ನಾಮ, ರೂಪಗಳು ಮಿಥ್ಯವೆಂಬ ತಿಳುವಳಿಕೆ ಇದ್ದಾಗ ಮುಕ್ತಿ ಇರುವುದು. ನಿಜವಾಗಿ ಬಂಧನವೆನ್ನುವುದು ಇಲ್ಲ, ಮುಕ್ತಿ ಎನ್ನುವುದೂ ಇಲ್ಲ. ದೇಹ ಇಂದ್ರಿಯಗಳು, ಪ್ರಾಣಗಳು, ವಿಷಯವಸ್ತುಗಳು, ಮನ, ಬುದ್ಧಿ, ಅಹಂಕಾರ, ಚಿತ್ತ ಮತ್ತು ಸ್ವರೂಪದ ಅಜ್ಞಾನ ಇವೆಲ್ಲವೂ ಸ್ವರೂಪವಲ್ಲ, ತೋರಿಕೆಗಳು. ಆದ್ದರಿಂದ ಇವೆಲ್ಲವೂ ಸುಳ್ಳು ಮತ್ತು ಕಾಲ್ಪನಿಕವಾಗಿವೆ. ಸಚ್ಚಿದಾನಂದ ಸ್ವರೂಪವೇ ಶೇಷವು, ಸತ್ಯವು. ಇದೇ ಎಲ್ಲ ತೋರಿಕೆಗಳಿಗೂ ಆಧಾರವು. ಸ್ವರೂಪವು ಸ್ವತಃ ಸಿದ್ಧವಿದೆ. ಅದನ್ನು ಹೊಸದಾಗಿ ಪಡೆಯಬೇಕಾಗಿಲ್ಲ, ಮಾಡಬೇಕಾಗಿಲ್ಲ. ಅದು ಮಹಾಮೌನವು, ಮನಸ್ಸಿನ ಮೌನವು, ಅಂದರೆ ಮಹಾನಿದ್ರೆ ಅಥವಾ ವರಸುಷ್ಟಿಯು. ಬ್ರಾಹ್ಮಣನು ನಿಜವಾದ ಪಾಂಡಿತ್ಯವನ್ನು ಹೊಂದಬೇಕು. ನಿಜವಾದ ಪಾಂಡಿತ್ಯವೆಂದರೆ ಬ್ರಹ್ಮಾಕಾರವೃತ್ತಿ ಸ್ಥಿತಿಯನ್ನು ಹೊಂದುವುದು. ಬ್ರಹ್ಮಾಕಾರವೃತ್ತಿ ಸ್ಥಿತಿಯನ್ನು ಹೊಂದಿದ ನಂತರ ಬ್ರಾಹ್ಮಣ ಅಥವಾ ಬ್ರಹ್ಮನಿಷ್ಠನು ಉಳಿದವರಿಗೆ ಪೀಡೆಯನ್ನು ಏಕೆ ಕೊಡುವನು? ಸಾಧ್ಯವಿಲ್ಲ. ಬ್ರಾಹ್ಮಣನಿಗೆ ದೇಹ, ನಾಮ, ರೂಪ, ಕ್ರಿಯೆಗಳಿಲ್ಲ. ಆದ್ದರಿಂದ ರಾಗ ದ್ವೇಷಗಳು ಅವನನ್ನು ಸ್ಪರ್ಶಿಸಲಾರವು. ಅಥವಾ ಅವನಲ್ಲಿ ಯಾವುದೇ ವಿಕಾರವನ್ನುಂಟು ಮಾಡಲಾರವು. ಆದ್ದರಿಂದ ಸ್ವರೂಪ ಧ್ಯಾನದಲ್ಲಿಯೇ ಆನಂದ ಹೊಂದಬೇಕು. ಸ್ವಪ್ನದಂತಿರುವ ವಿಶ್ವದ ಯಾವುದನ್ನೂ ನೆನಪಿಗೆ ತೆಗೆದುಕೊಳ್ಳಬಾರದು. ವಿಶ್ವ ಮತ್ತು ವಿಶ್ವದಲ್ಲಿಯ ಎಲ್ಲವೂ (...ಉದಾಹರಣೆಗೆ ...ಧನ, ಗಂಡ, ಹೆಂಡತಿ, ಮಕ್ಕಳು, ಅಣ್ಣ ತಮ್ಮಂದಿರು,ಅಕ್ಕ ತಂಗಿಯರು...) ಪ್ರಾರಂಭದಲ್ಲಿ ಸುಖವನ್ನು ಕೊಡುವವುಗಳೆಂದು ತೋರಿದರೂ, ಅವು ಕಟ್ಟ ಕಡೆಗೆ ದುಃಖದಲ್ಲಿಯೇ ಪರ್ಯವಸಾನ ಹೊಂದುವವು, ಆದ್ದರಿಂದ ನಿದ್ರೆಯಿಂದ ಎಚ್ಚೆತ್ತು ಮರಳಿ ನಿದ್ರೆಗೆ ಹೋಗುವವರೆಗೆ ನಿರಂತರ ಸ್ವರೂಪದ ನೆನಪಿನಲ್ಲಿಯೇ ಇರಬೇಕು.

ವಿಷಯೇಂದ್ರಿಯ ಸಂಪರ್ಕಭೋಗದಿಂದುಂಟಾದ ಸುಖವು ಕ್ಷಣಿಕವು. ಆದರೆ ಇಂದ್ರಿಯಗಳ ಭೋಗದ ವಿಷಯಗಳನ್ನು ದೊರಕಿಸುವದಕ್ಕಾಗಿ ಪಡುವ ದುಃಖವು ಅಪಾರವಾಗಿದೆ. ಅಲ್ಲದೆ ವಿಷಯೇಂದ್ರಿಯ ಸಂಪರ್ಕಭೋಗದಿಂದುಂಟಾದ ಕ್ಷಣಿಕ ಸುಖವು

ಆ ವಿಷಯಗಳಲ್ಲಿಲ್ಲ. ಏಕೆಂದರೆ ವಿಷಯ ವಸ್ತುಗಳು ಜಡವಿರುತ್ತವೆ. ರಾಗದ ವಿಷಯಗಳು ಸಿಕ್ಕಾಗ ಮನಸ್ಸು ನಿಶ್ಚಲವಾಗಿ ಆನಂದವು ಅನುಭವಕ್ಕೆ ಬರುತ್ತದೆ. ಮನಸ್ಸು ನಿಶ್ಚಲವಾದಾಗ ಸ್ವರೂಪಾನಂದವೇ ಮನಸ್ಸಿನಲ್ಲಿ ಪ್ರತಿಫಲಿಸುವುದು. ಆತ್ಮಜ್ಞಾನಿಗೆ ಸ್ವರೂಪವು ಪೂರ್ಣಾನಂದವೂ, ಅವಿಕಾರಿಯಾಗಿಯೂ, ಅವಿನಾಶಿಯೂ, ಅಕ್ಷಯವೂ, ಸದಾ ಸ್ವತಃ ಸಿದ್ಧವಾದದ್ದೂ, ಸ್ವತಂತ್ರವಾದದ್ದೂ ಇರುವದು. ಇಂಥವನಿಗೆ ಯಾವುದರಿಂದಲೂ, ಎಲ್ಲಿಯೂ ಭಯವಿಲ್ಲ. ಶಾಶ್ವತ ಸುಖವನ್ನು ಹೊಂದುವದು ಸ್ವರೂಪಜ್ಞಾನದಿಂದ ಮಾತ್ರ ಸಾಧ್ಯ. ಅಧ್ಯಾಸದ ಮುಖಾಂತರ ತೋರಿದ ನಾಮ, ರೂಪ, ಕ್ರಿಯೆಗಳು, ಭ್ರಾಂತಿಯ ತೋರಿಕೆಗಳೆಂದು ಅವುಗಳನ್ನು ತ್ಯಾಗಮಾಡಿ, ಸಚ್ಚಿದಾನಂದವೇ ಸತ್ಯವು ಮತ್ತು ತನ್ನ ನಿಜಸ್ವರೂಪವೆಂದು ಗ್ರಹಿಸಬೇಕು. ಸ್ವರೂಪಾನಂದವನ್ನು ಅನುಭವಿಸುವುದು ಅತಿ ಸುಲಭವು. ಏಕೆಂದರೆ ಅದು ತನ್ನ ನಿಜಸ್ವರೂಪವಿರುವುದರಿಂದ ತನ್ನಿಂದ ದೂರವಿಲ್ಲ. ಸ್ವರೂಪಾವ ಸ್ಥಿತಿಯನ್ನು ಹೊಂದುವದು ಮಾನವ ಜನ್ಮದಲ್ಲಿ ಮಾತ್ರ ಸಾಧ್ಯ. ಉಳಿದ ಯಾವದೇ ಜನ್ಮದಲ್ಲಿ ಸಾಧ್ಯವಿಲ್ಲ. ದೇವ ...ದೇವತೆಗಳು ಸಹ ಸ್ವರೂಪಾವ ಸ್ಥಿತಿಯನ್ನು ಹೊಂದಲಾರರು.ಏಕೆಂದರೆ ಅವರು ವಿಷಯಸುಖ ಮತ್ತು ವಿಷಯ ಭೋಗಗಳಲ್ಲಿ ಮುಳುಗಿ ಹೋಗಿದ್ದಾರೆ. ರಾಕ್ಷಸ ಪಿಶಾಚಿಗಳಿಗೆ ಸ್ವರೂಪಾವ ಸ್ಥಿತಿಯ ಕಲ್ಪನೆಯು ಸಹ ಇಲ್ಲ. ಆದ್ದರಿಂದ ಮಾನವ ಜನ್ಮದ ಸಾರ್ಥಕತೆಯೆಂದರೆ ಸ್ವರೂಪಾವ ಸ್ಥಿತಿಯನ್ನು ಹೊಂದುವುದು. ಮಾನವ ಜನ್ಮವನ್ನು ಬಿಟ್ಟು ಉಳಿದ ಎಲ್ಲ ಜನ್ಮಗಳು ಸ್ವರೂಪ ಜ್ಞಾನ ಮತ್ತು ಶಾಶ್ವತ ಸುಖವನ್ನು ಹೊಂದಲು ಅಯೋಗ್ಯವಾಗಿವೆ.

ಜಾತಿ, ಮತ, ಪಂಥ, ಭಾಷೆ, ದೇಶ ಮೊದಲಾದವುಗಳ ಪ್ರೇಮ ಮತ್ತು ಅಭಿಮಾನಗಳಿಂದ ದುಃಖದ ಬಂಧನದಿಂದ ಮುಕ್ತಿಯಾಗಲಾರದು. ಬಣ್ಣದ ಅಥವಾ ಕಾವಿ ಬಟ್ಟೆಗಳನ್ನು ಧರಿಸುವದರಿಂದ, ಗಡ್ಡ, ಮೀಸೆಗಳನ್ನು ಬಿಡುವದರಿಂದ ಅಥವಾ ಬೋಳಿಸುವದರಿಂದ, ಕೈ ಯಲ್ಲಿ ಕಟ್ಟಿಗೆಯ, ಕುಂಬಳಕಾಯಿಯ ಅಥವಾ ಮಣ್ಣಿನ ಪಾತ್ರೆಯನ್ನು ಹಿಡಿಯುವದರಿಂದ ಅಥವಾ ಯಾವದೇ ಬಾಹ್ಯ ಗುರುತು ಸಂಕೇತಗಳಿಂದ ದುಃಖದಿಂದ ಬಿಡುಗಡೆ ಅಥವಾ ಶಾಶ್ವತ ಸುಖದ ಪ್ರತೀಕವಾಗಲಾರವು. ಏಕೆಂದರೆ ಶಾಶ್ವತ ಸುಖವು ಕೃತ್ರಿಮವಲ್ಲ ಅಥವಾ ಅದು ಮಾನವನ ಅಥವಾ ದೇವರ ಕ್ರಿಯೆಗಳ ಕಾರ್ಯವಲ್ಲ. ವಾಚಿಕ ಅಥವಾ ಮಾನಸಿಕ ನಾಮ ಅಥವಾ ಶಬ್ದಗಳ ಜಪದಿಂದ ಶಾಶ್ವತ ಸುಖವು ದೊರೆಯಲಾರದು. ಉದಾಹರಣೆಗೆ ಅಹಂ ಬ್ರಹ್ಮಾಸ್ಮಿ, ಸೋಹಂ, ಓಂ. ಮುಂತಾದವುಗಳು ಯಾವದೇ ಉಪಾಧಿಯಿಂದುಂಟಾದ ಭೇದತ್ವವಿಲ್ಲದ, ಸರ್ವವೂ ಏಕತ್ವವೇ ಎಂಬ ಭಾವದ, ಸಮಸ್ಥಿತಿಯ ಇರುವಿಕೆಯೇ ಜೀವನ ನಿಜಸ್ವರೂಪವು ಅಥವಾ ಶಾಶ್ವತ ಸುಖದ ಸ್ಥಿತಿಯು. ಇದಕ್ಕೆ ಅನ್ಯವಾದದ್ದೆಲವೂ ಬಂಧನಕಾರಿಯೂ, ದುಃಖದಾಯಕವೂ ಇರುವದು. ಅಭೇದತ್ವವೇ ಸುಖವು. ಭೇದತ್ವವೇ ಭೀತಿಕರವು ಮತ್ತು ದುಃಖಮಯವು ಇರುವದು.



ನಾಮ, ರೂಪ ಮತ್ತು ಕ್ರಿಯಾತ್ಮಕವಾದ ಈ ಜಗತ್ತು ಇಂದ್ರಜಾಲದ ಆಟದಂತಿದೆ. ದೇಹದ ರಚನೆಯಂತೆಯೇ ವಿಶ್ವದ ರಚನೆ ಇರುವದು. ನಿಜದಲ್ಲಿ ವಿಶ್ವಕ್ಕೆ ಅಸ್ತಿತ್ವವೇ ಇಲ್ಲ. ಗಾಢ ನಿದ್ರೆಯಲ್ಲಿ ಸಹ ವಿಶ್ವಕ್ಕೆ ಅಸ್ತಿತ್ವವಿಲ್ಲ. ಘಟಾಕಾಶವು ಮಹಾಕಾಶವಿದ್ದಂತೆ ಜೀವಾತ್ಮನೆಂದರೆ ಸಚ್ಚಿದಾನಂದ ಸ್ವರೂಪನೇ ಅಂದರೆ ಬ್ರಹ್ಮನೇ ಇರುವನು.

स्वमपीतो भवति तस्मात् एनं स्वपिति इति आचक्षते ।

(छा 5.6/8/1)

ಗಾಢನಿದ್ರೆಯಲ್ಲಿಯೇ ನಾಮರೂಪಗಳಿಲ್ಲವೆಂದ ಮೇಲೆ, ಅವು ವರಸುಪ್ತಿಯಲ್ಲಿ ಹೇಗೆ ಇರಬಲ್ಲವು ?

ಯತ್ರ ಏತತ್ಪುರುಷಃ ಸ್ವಪಿತಿ ನಾಮ ಸತಾ ಸೋಮ್ಯ
ತದಾ ಸಂಪನ್ನೋ ಭವತಿ ಸ್ವಮಪೀತೋ ಭವತಿ
ತಸ್ಮಾದೇನಂ ಸ್ವಪಿತೀತ್ಯಾಚಕ್ಷತೆ, ಸ್ವಂ ಹ್ಯಪೀತೋ. ಭವತಿ.

(ಛಾ.ಉ. 6/8/1)

ಇರುವಿಗೆ ಅನ್ಯವಾಗಿ ಇರುವಿಲ್ಲ.ಅರಿವಿಗೆ ಅನ್ಯವಾಗಿ ಅರಿವಿಲ್ಲ.ಆನಂದಕ್ಕೆ ಅನ್ಯವಾಗಿ ಆನಂದವಿಲ್ಲ.ಆದ್ದರಿಂದ ಆತ್ಮನು ಆತ್ಮನೇ ಇರುವನು. ಆತ್ಮನಲ್ಲಿ ಯಾವುದೇ ಭೇದವಿಲ್ಲ. ಆತ್ಮನೊಬ್ಬನೇ ಇರುವನು. ಆತ್ಮನು ಅಥವಾ ಸ್ವರೂಪವು ಸಚ್ಚಿದಾನವೆಂಬುದು 'ನಾನು' ಎನ ಪ್ರಥಮಾನುಭೂತಿಯ ಮೂಲಕವೇ ಗುರುತಾಗಿದೆ. ಯಾಕೆಂದರೆ ಪ್ರಥಮಾನುಭೂತಿಯಲ್ಲಿ ತನಗನ್ಯವಾಗಿ ಯಾರೂ ಇಲ್ಲ.''ನಾನು ಇದ್ದೇನೆ'' ''ನಾನು ಅರಿವು ಇದ್ದೇನೆ'' ಇವೇ ಪ್ರಥಮಾನುಭೂತಿಯಲ್ಲಿಯ ನಾನುವಿನ ಅಂಶಗಳು. ಇರುವು, ಅರಿವು, ಆನಂದ ಎಂದರೆ ಒಂದೇ. ಅವುಗಳಲ್ಲಿ ಯಾವ ಭೇದವೂ ಇಲ್ಲ. ಏಕೆಂದರೆ ಇರುವು ಅರಿವಿಗೆ ಭಿನ್ನವಿಲ್ಲ ಮತ್ತು ಅರಿವು ಆನಂದಕ್ಕೆ ಭಿನ್ನವಿಲ್ಲ. ಈ 'ನಾನು'ವನ್ನು ಭಿನ್ನ ಭಿನ್ನ ಭಾಷೆಗಳಲ್ಲಿ, ಭಿನ್ನ ಭಿನ್ನ ಕಾಲಕ್ಕೆ ಯಾವುದೇ ಹೆಸರಿನಿಂದಾದರೂ ಕರೆಯಬಹುದು ಅಥವಾ ಅದಕ್ಕೆ ಯಾವುದೇ ಹೆಸರನ್ನು ಕೊಡಬಹುದು. ಆದರೆ 'ನಾನು'ವು ಯಾವುದೇ ಬದಲಾವಣೆಯನ್ನು ಹೊಂದದೆ ಇದ್ದಕ್ಕಿದ್ದಂತೆಯೇ ಇರುವುದು. ವೈಯಕ್ತಿಕ ಸಮಾಧಾನಕ್ಕೋಸ್ಕರ ಯಾವದಾದರೂ ಪ್ರಮಾಣಗಳು ಬೇಕೆನಿಸಿದರೆ ಎಲ್ಲ ಅನುಭವಾನುಸಾರಿ ಅಧ್ಯಾತ್ಮಿಕ ಗ್ರಂಥಗಳನ್ನು ವಿವರಣಾತ್ಮಕವಾಗಿ ತೆಗೆದುಕೊಳ್ಳಬಹುದು.

ಆತ್ಮನಿಗನ್ಯವಾಗಿ ಯಾವದೇ ಇರುವಿಕೆಯು ಇಲ್ಲ.ಎಲ್ಲವೂ ತಮ್ಮ ಇರುವಿಕೆಗಾಗಿ ಆತ್ಮನನ್ನೇ ಅವಲಂಬಿಸಿವೆ. ಎಲ್ಲವೂ ತಮ್ಮ ಅರಿವು ಮತ್ತು ಆನಂದಕ್ಕಾಗಿ ಆತ್ಮನ ಅರಿವು ಮತ್ತು ಆನಂದವನ್ನೇ ಅವಲಂಬಿಸಿವೆ. ವಿಷಯೇಂದ್ರಿಯ ಸಂಪರ್ಕಭೋಗದಿಂದ ಅನುಭವಕ್ಕೆ ಬಂದ ಆನಂದವು ಮೊದಲೇ ಮೇಲೆ ಹೇಳಿದಂತೆ

ಆತ್ಮನ ಅಥವಾ ಸ್ವರೂಪದ ಆನಂದವೇ ಆಗಿದೆ.

ತಾನು ಎಲ್ಲಕ್ಕೂ ಸಾಕ್ಷೀ ಇದ್ದಾನೆ. ಆದ್ದರಿಂದ ದೃಶ್ಯದ ನ್ಯೂನ್ಯತೆ ಅಥವಾ ಶ್ರೇಷ್ಠತೆಗಳು ಸ್ವರೂಪವನ್ನು ಯಾವದೇ ರೀತಿಯಿಂದ ಕಲುಷಿತ ಅಥವಾ ಪವಿತ್ರಗೊಳಿಸಲಾರವು. ಈ ಸಾಕ್ಷೀ ಸ್ಥಿತಿಯನ್ನು ಹೊಂದಿದ ಮೇಲೆ, ಸಾಕ್ಷೀ ಭಾವವೂ ಮಾಜಿ ಹೋಗಿ ಕೇವಲ ಸಚ್ಚಿದಾನಂದವೇ ಉಳಿಯುವದು. ಅಲ್ಲಿ ಸುಖ ದುಃಖಗಳಿಲ್ಲ. ಈ ಸ್ಥಿತಿಯಲ್ಲಿ ತಾನು ಎಲ್ಲದಕ್ಕೂ ಸಾಕ್ಷೀ ಇದ್ದೇನೆಂದು ಹೇಳುವದು ಅನುಭವಕ್ಕೆ ಹೊಂದುವದಿಲ್ಲ. ಏಕೆಂದರೆ ಸಚ್ಚಿದಾನಂದ ಸ್ವರೂಪಕನ್ಯವಾದದ್ದೆಲ್ಲ ಮಾಯಿಕ ಅಥವಾ ಭ್ರಾಂತಿದಾಯಕವು ಮತ್ತು ಭ್ರಾಂತಿಯಾಗಿದೆ. ಸ್ವರೂಪವು ಸ್ವರೂಪವೇ ಇದೆ. ಕನಸಿನಲ್ಲಿಯ ಕನಸನ್ನು ನೋಡುವವನು ಹೇಗೆ ಭ್ರಾಂತಿಮಯನಿರುವನೋ, ಹಾಗೆ ಭ್ರಾಂತಿ ಮತ್ತು ಭ್ರಾಂತಿಯ ಕಾರ್ಯದ ಸಾಕ್ಷಿಯು ಕೂಡ ಭ್ರಾಂತಿಮಯವೇ ಇದೆ. ಕನಸು ಹೋದ ಕೂಡಲೇ ಕನಸನ್ನು ನೋಡುವವನೂ ಮಾಯವಾಗುತ್ತಾನೆ.

೧. ಅಜ್ಞಾನವು ತೋರಿಕೆಯು, ಸ್ವರೂಪದಲ್ಲಿ ಅಜ್ಞಾನಕ್ಕೆ ಅಸ್ತಿತ್ವವೇ ಇಲ್ಲ. ಗಾಢನಿದ್ರೆಯಲ್ಲಿ ಅಜ್ಞಾನಾವರಣ ಇಲ್ಲವೆಂದು ಕೆಲವರು ಅಭಿಪ್ರಾಯಪಡುತ್ತಾರೆ.

೨. ಗಾಢನಿದ್ರೆಯಲ್ಲಿ ಅಜ್ಞಾನಾವರಣವು ಇಲ್ಲದಿದ್ದರೆ, ಗಾಢನಿದ್ರೆಯಿಂದ ಎಚ್ಚೆತ್ತ ನಂತರ, ಗಾಢನಿದ್ರೆಯಲ್ಲಿ ತಾನು ಏನನ್ನೂ ತಿಳಿಯಲಿಲ್ಲ ಎಂಬ ನೆನಪು ಗಾಢನಿದ್ರೆಯಲ್ಲಿ ಅಜ್ಞಾನವು ಅನುಭವಿಸಲ್ಪಡುವದು ಎಂಬುದನ್ನು ನಿರೂಪಿಸುತ್ತದೆ. ಯಾವುದೇ ವಸ್ತುವಿನ ಜ್ಞಾನ ಅಥವಾ ಅನುಭವವಿಲ್ಲದೆ ಅದರ ನೆನಪು ಉಂಟಾಗಲಾರದು.

೩. ಗಾಢನಿದ್ರೆಯಲ್ಲಿ ಅಜ್ಞಾನಾವರಣವು ಇಲ್ಲದಿದ್ದರೆ ದೇಹ, ಕೈ, ಕಾಲುಗಳು, ತಲೆ, ಇವು ಅಸ್ತವ್ಯಸ್ತವಾಗಿ ಬೀಳಬಾರದಾಗಿತ್ತು.

೪. ಗಾಢನಿದ್ರೆಯಲ್ಲಿ ಅಜ್ಞಾನಾವರಣವು ಇಲ್ಲದಿದ್ದರೆ, ವ್ಯಾವಹಾರಿಕ ಜಾಗ್ರದಲ್ಲಿ ತಾನು ಹೇಗೆ ತಿಳಿಯುವನೋ ಹಾಗೆ ಗಾಢನಿದ್ರೆಯಲ್ಲಿ ತಿಳಿಯಬೇಕಾಗಿತ್ತು. ಆದರೆ ಗಾಢನಿದ್ರೆಯಲ್ಲಿ ಪೂರ್ಣಾನಂದದ ಅನುಭವವಿದೆ. ಅಲ್ಲಿ ಅನುಭವಿಸಿದ ಪೂರ್ಣಾನಂದವನ್ನು ವ್ಯಾವಹಾರಿಕ ಎಚ್ಚರಿಕೆಗೆ ಬಂದಾಗ ನೆನಪಿಸಿಕೊಳ್ಳುತ್ತೇವೆ.

೫. ಗಾಢನಿದ್ರೆಯಲ್ಲಿ ಅಜ್ಞಾನ ಅಥವಾ ಅಜ್ಞಾನಾವರಣವು ಇಲ್ಲದೆ, ಪೂರ್ಣ ತಿಳುವಳಿಕೆಯು ಇದ್ದದ್ದಾದರೆ, ಆತ್ಮ ಸಾಕ್ಷಾತ್ಕಾರಕ್ಕಾಗಿ ಪರಿಶುದ್ಧ ಜ್ಞಾನದ ಸ್ಥಿತಿಯಾದ ತುರ್ಯಾವಸ್ಥೆಯನ್ನು ಹೊಂದುವ ಅವಶ್ಯಕತೆ ಇಲ್ಲದೆ, ತಾನು ಸಚ್ಚಿದಾನಂದನು ಮತ್ತು ಎಲ್ಲ ಬಂಧನದಿಂದಲೂ ಮುಕ್ತನು ಎಂಬ ತಿಳುವಳಿಕೆಯು ಇರಲೇಬೇಕಾಗಿತ್ತು.



೬. ಬರೇ ಜಾಗ್ರ, ಸ್ವಪ್ನ ಮತ್ತು ಗಾಢನಿದ್ರೆ ಇವುಗಳ ವಿಚಾರಣೆಯಿಂದ ಆತ್ಮಸಾಕ್ಷಾತ್ಕಾರ ಮತ್ತು ಸರ್ವ ಬಂಧನದಿಂದ ಬಿಡುಗಡೆಯಾಗುವಂತಿದ್ದರೆ ವಿವೇಕ, ವೈರಾಗ್ಯ, ಮುಂತಾದ ಸಾಧನ ಸಾಮಗ್ರಿಗಳನ್ನು ವ್ಯಾವಹಾರಿಕ ಜಾಗ್ರದಲ್ಲಿ ಹೊಂದಿ, ವರಸುಪ್ತಿ ಅಥವಾ ಶ್ರೇಷ್ಠವಾದ ಅಧ್ಯಾತ್ಮಿಕ ಪರವಶತೆ ಅಥವಾ ಜ್ಞಾನಸಮಾಧಿಯನ್ನು ಹೊಂದುವ ಅವಶ್ಯಕತೆ ಇರುತ್ತಿರಲಿಲ್ಲ.

೭. ಗಾಢನಿದ್ರೆಯಲ್ಲಿ ಅಜ್ಞಾನಾವರಣವು ಇಲ್ಲದಿದ್ದರೆ, ಅಧ್ಯಾತ್ಮ ಗ್ರಂಥಗಳು ಜೀವನು ತನ್ನ ನಿಜಸ್ಥಿತಿಯಲ್ಲಿರಲು, ವ್ಯಾವಹಾರಿಕ ಜಾಗ್ರದಲ್ಲಿ ಮೊದಲಿಗೆ ವಿವೇಕ, ವೈರಾಗ್ಯ ಮುಂತಾದ ಸಾಧನ ಸಾಮಗ್ರಿಗಳನ್ನು ಹೊಂದುವ, ನಂತರ ಶ್ರವಣ, ಮನನ, ನಿದಿಧ್ಯಾಸನಗಳಲ್ಲಿ ತೊಡಗುವ ಮತ್ತು ಕಟ್ಟಕಡೆಗೆ ಜ್ಞಾನ ಸಮಾಧಿಯನ್ನು ಪಡೆಯುವ ಈ ಮೂರು ನಿಯಮಗಳನ್ನು ಅತ್ಯಾವಶ್ಯಕವಾಗಿ ಹೊಂದುವ ಕಟ್ಟಳೆಯನ್ನು ವಿಧಿಸಬಾರದಾಗಿತ್ತು.

೮. ಗಾಢನಿದ್ರೆಯಲ್ಲಿ ಅಜ್ಞಾನಾವರಣವು ಇಲ್ಲದಿದ್ದರೆ, ಭೂತ ಮತ್ತು ವರ್ತಮಾನ ಕಾಲದಲ್ಲಿ ಉಳಿದವರು ಅನುಕರಿಸುವದಕ್ಕೆ ಅನೇಕ ಸಮಾಧಿ ದ್ವಾರಾ ಆತ್ಮ ಸಾಕ್ಷಾತ್ಕಾರವನ್ನು ಹೊಂದಿದ ಮಹಾತ್ಮರ ಉದಾಹರಣೆ ಮತ್ತು ದೃಷ್ಟಾಂತಗಳು ಇರಬಾರದಾಗಿತ್ತು. ಕೇವಲ ನಿದ್ರೆಯಿಂದಲೇ ಮೋಕ್ಷ ಇರಬೇಕಾಗಿತ್ತು. ವರಸುಪ್ತಿ (ಮಹಾನಿದ್ರಾ) ಇರಬಾರದಾಗಿತ್ತು.

೯. ಗಾಢನಿದ್ರೆಯಲ್ಲಿ ಅಜ್ಞಾನಾವರಣವು ಇಲ್ಲದಿದ್ದರೆ, ಆತ್ಮಸಾಕ್ಷಾತ್ಕಾರದ ಲಾಭ ಪಡೆಯಲು ಮನುಷ್ಯತ್ವ ಮತ್ತು ಮುಮುಕ್ಷುತ್ವ, ನೀತಿ ನಿಯಮಗಳ ಪಾಲನೆ ಮತ್ತು ಚಿತ್ತ ಶುದ್ಧಿಗಾಗಿ ವಿವೇಕ, ವೈರಾಗ್ಯಗಳನ್ನು ಹೊಂದುವ ವಿಧಿಯು ಇರಬಾರದಾಗಿತ್ತು.

೧೦. ಬರೇ ಬೌದ್ಧಿಕ ಚತುರತೆಯಿಂದ ಶಾಶ್ವತ ಸುಖವನ್ನು ಹೊಂದುವುದು ಸಾಧ್ಯವಿಲ್ಲ. ಏಕೆಂದರೆ ಅನೇಕ ಬೌದ್ಧಿಕ ಚತುರರು ಎಳ್ಳಷ್ಟೂ ಅಧ್ಯಾತ್ಮಿಕ ಅನುಭವ ಜ್ಞಾನವಿಲ್ಲದೆ, ಮಾನಸಿಕ ಶಾಂತಿಯಿಲ್ಲದೆ, ಹುಚ್ಚರಾಗಿದ್ದಾರೆ ಮತ್ತು ಹುಚ್ಚರಾಗುತ್ತಾರೆ ಮತ್ತು ಹುಚ್ಚರಾಗಿ ಸತ್ತಿದ್ದಾರೆ ಮತ್ತು ಸಾಯುತ್ತಾರೆ. ಆದ್ದರಿಂದ ಶಾಶ್ವತ ಸುಖವನ್ನು ಹೊಂದಲು ಬರೇ ಜಾಗ್ರ, ಕನಸು ಮತ್ತು ಗಾಢನಿದ್ರೆಗಳ ಬೌದ್ಧಿಕ ತರ್ಕ ಅತ್ಯವಶ್ಯವಿಲ್ಲ.

೧೧. ಗಾಢನಿದ್ರೆಯನ್ನು ಹೊಂದಲು ನೀತಿಯ ಮತ್ತು ಅಧ್ಯಾತ್ಮಿಕ ನಿಯಮಗಳನ್ನು ಪಾಲಿಸುವ ಅವಶ್ಯಕತೆ ಇಲ್ಲ. ಪ್ರಾಮಾಣಿಕರು ಮತ್ತು ಅಪ್ರಾಮಾಣಿಕರು, ಘಟಿಂಗರು, ವ್ಯಭಿಚಾರಿಗಳು, ನೈಷ್ಠಿಕ ಬ್ರಹ್ಮಚಾರಿಗಳು, ಸನ್ಯಾಸಿಗಳು, ಸಾಮ್ರಾಟರು, ತಪಸ್ವಿಗಳು,

ಗೃಹಸ್ಥರು ಯಾವುದೇ ಭೇದವಿಲ್ಲದೆ ಗಾಢನಿದ್ರೆಯನ್ನು ಹೊಂದುವರು. ಇವರೆಲ್ಲರೂ ಜಾಗ್ರ, ಕನಸು, ಗಾಢನಿದ್ರೆಯ ಬಗ್ಗೆ ಧಾರಾಳವಾಗಿ, ಆಕರ್ಷಕವಾಗಿ ಮತ್ತು ಮೋಹಕವಾಗಿ, ಪ್ರೇಕ್ಷಕರು ಮಂತ್ರಮುಗ್ಧರಾಗುವಂತೆ ಮಾತನಾಡಬಲ್ಲರು. ನೀತಿಭ್ರಷ್ಟರು ಮತ್ತು ವ್ಯಭಿಚಾರಿಗಳು ತಮ್ಮ ವಾಗ್ವೈಖರಿ ಮತ್ತು ಮೋಹಕಗೊಳಿಸುವಿಕೆಯ ಜಾಣತನದಿಂದ ಆತ್ಮಜ್ಞಾನಿಗಳನ್ನು ಸಹ ಮೀರಿರುವರು. ಆದರೆ ಅವರು ಎಳ್ಳಷ್ಟೂ ಅಧ್ಯಾತ್ಮ ಜ್ಞಾನವನ್ನು ಹೊಂದಿರುವುದಿಲ್ಲ.

ಇವರು ಬರೇ ವ್ಯವಹಾರಿಕ ಜಾಗ್ರ, ಕನಸು ಮತ್ತು ಗಾಢನಿದ್ರೆ ಇವುಗಳ ಬಗ್ಗೆ ಅಷ್ಟೇ ಅಲ್ಲದೆ, ಅಧ್ಯಾತ್ಮಿಕ ಅವಸ್ಥೆಗಳಾದ ತುರಿಯ ಮತ್ತು ತುರಯಾತೀತಗಳ ಬಗ್ಗೆಯೂ ತಾಸುಗಟ್ಟಲೆ ವಾಗ್ವೈಖರಿಯಿಂದ ನಿರರ್ಗಳವಾಗಿ ಮಾತನಾಡಿ , ಜ್ಞಾನಸಮಾಧಿಯನ್ನು ಹೊಂದಿದ ಆತ್ಮಜ್ಞಾನಿಗಳನ್ನು ಸಹ ಮೀರಿರುವರು. ಕೆಲವು ಸಲ ಈ ಘಟಿಂಗರು ಮತ್ತು ವ್ಯಭಿಚಾರಿಗಳು ತಮ್ಮ ವಾಗ್ವೈಖರಿ ಮತ್ತು ಮಿತಿಮೀರಿದ ಮಾತನಾಡುವಿಕೆಯಿಂದ ಚರ್ಚೆಯಲ್ಲಿ ಆತ್ಮ ಜ್ಞಾನಿಗಳನ್ನು ಸಹ ಸೋಲಿಸುವರು.

ಸಚ್ಚಿದಾನಂದ ಸ್ವರೂಪರಾಗಿ ಉಳಿಯಲು ವಿವೇಕ, ವೈರಾಗ್ಯ,ಶಮದ ಮಾದಿಷಟ್ಕ, ಮುಮುಕ್ಷುತ್ವ ಮುಂತಾದ ಸಾಧನ ಸಾಮಗ್ರಿಗಳಿಂದ ಕೂಡಿ ಆತ್ಮಧ್ಯಾನದ ಮೂಲಕ ಆನಂದಿಸುತ್ತ ಜ್ಞಾನ ಸಮಾಧಿಯನ್ನು ಹೊಂದುವದು ಅತ್ಯವಶ್ಯಕವಿದೆ ಎಂಬ ತಿಳುವಳಿಕೆ ಇದ್ದರೆ ಸಾಕು.

ಅಧ್ಯಾತ್ಮಿಕ ಅನುಭವ ಜ್ಞಾನವನ್ನು ಹೊಂದಬೇಕಾದರೆ ಜ್ಞಾನಸಮಾಧಿಯನ್ನು ಹೊಂದುವದರ ಮೂಲಕ ಜಾಗ್ರ, ಕನಸು ಮತ್ತು ಗಾಢನಿದ್ರೆ ಈ ಮೂರು ಅವಸ್ಥೆಗಳಿಗೆ ಸಾಕ್ಷಿಯಾಗಬೇಕು. ಕಡೆಗೆ ಈ ಸಾಕ್ಷಿ ಭಾವವನ್ನೂ ಮೀರಿ, ಅಜ್ಞಾನ ಮತ್ತು ಅಜ್ಞಾನದ ಕಾರ್ಯಗಳಾದ  ವಿಶ್ವ, ನಾಮ, ರೂಪ ಮುಂತಾದವುಗಳನ್ನು ಬರೇ ತೋರಿಕೆ, ಚರಟ ಮತ್ತು ರಸಹೀನವೆಂದು ತಿಳಿದು ಕೈಬಿಟ್ಟು, ತಾನೇ ತಾನಾಗಿ ಉಳಿಯಬೇಕು.

ಗಾಢ ನಿದ್ರೆಗೆ ಹೋಗುವಾಗ ಅಥವಾ ಗಾಢನಿದ್ರೆಯಲ್ಲಿ ಕರ್ತೃತ್ವ ಭೋಕ್ತೃತ್ವ ಭಾವವು ನಾಶವಾಗಿರುವದಿಲ್ಲ. ಆದ್ದರಿಂದ ಜೀವನು ಗಾಢ ನಿದ್ರೆಯಿಂದ ಎಚ್ಚೆತ್ತು, ವ್ಯಾವಹಾರಿಕ ಜಾಗ್ರಕ್ಕೆ ಮರಳಿ, ಪುನಃ ಗಾಢನಿದ್ರೆಗೆ ಹೋಗುವುದಕ್ಕಿಂತ ಮೊದಲು ಮುಂಚಿನಂತೆ, ಜಾಗ್ರದ ವ್ಯವಹಾರವೇ ಸತ್ಯವು ಮತ್ತು ಸುಖದಾಯಕವು ಎಂದು ತಿಳಿದುಕೊಂಡು ಸುಖ ದುಃಖದ  ಕಳ್ಳುಸುಕಿನಲ್ಲಿ ಸಿಕ್ಕು ಬೀಳುತ್ತಾನೆ. ಆದರೆ ಅವನು ಮಹಾ ನಿದ್ರೆಗೆ ಅಥವಾ ವರಸುಪ್ತಿಗೆ ಹೋಗುವಾಗ ಮತ್ತು ಅದರಲ್ಲಿ ಸ್ವರೂಪ ಜ್ಞಾನವನ್ನು ಹೊಂದುವದರ ಮೂಲಕ ಅವನ ಕರ್ತೃತ್ವ ಭೋಕ್ತೃತ್ವಭಾವವು ನಾಶವಾಗುವದು. ಆದ್ದರಿಂದ



ವರಸುಪ್ತಿಯನ್ನು ಹೊಂದಿ ವ್ಯಾವಹಾರಿಕ ಎಚ್ಚರಿಕೆಗೆ ಬಂದವನು ಅದರಿಂದ ಬಾಧೆಯನ್ನು ಹೊಂದುವದಿಲ್ಲ. ಏಕೆಂದರೆ ಇಹಲೋಕ ಮತ್ತು ಪರಲೋಕ ಇವೆರಡೂ ತನ್ನ ನಿಜಸ್ವರೂಪದಲ್ಲಿ ಇಲ್ಲ. ಆದ್ದರಿಂದ ಅವುಗಳಿಗೆ ಯಾವ ಬೆಲೆಯೂ ಇಲ್ಲ ಮತ್ತು ಅವು ಸುಳ್ಳಿವೆ.

ಇಹ-ಪರದ ಭೋಗಗಳಲ್ಲಿ ತೊಡಗುವುದು ಮತ್ತು ಅವುಗಳಲ್ಲಿ ಆಸಕ್ತ ನಾಗುವುದು ಪಶುತ್ವವೇ. ತನ್ನ ನಿಜ ಸ್ವರೂಪವನ್ನು ಹೊಂದುವುದೇ ಬ್ರಾಹ್ಮಣ್ಯತ್ವವು. ಈ ಬ್ರಾಹ್ಮೀ ಸ್ಥಿತಿಯನ್ನು ಹೊಂದಿದವನೇ ಬ್ರಾಹ್ಮಣನು, ಮತ್ತಾರೂ ಅಲ್ಲ. ಸತ್ಯವು ಜಾಗ್ರ, ಕನಸು ಮತ್ತು ಗಾಢನಿದ್ರೆ ಎಂಬ ಮೂರೂ ಅವಸ್ಥೆಗಳಿಗಿಂತ ಮುಂಚೆ, ಅವುಗಳಲ್ಲಿ, ಅವುಗಳು ಹೋದ ನಂತರ ಇದ್ದೇ ಇರುತ್ತದೆ. ಆದರೆ ಈ ಅವಸ್ಥೆಗಳು ಒಂದರೊಳಗೆ ಇನ್ನೊಂದಿಲ್ಲ. ಅವು ಪರಸ್ಪರ ಭಿನ್ನವಾಗಿವೆ. ಆದ್ದರಿಂದ ಈ ಮೂರೂ ಅವಸ್ಥೆಗಳು ಸುಳ್ಳಿವೆ.

ಎಲ್ಲಿಯವರೆಗೆ ಎಲ್ಲದಕ್ಕೂ ಆಧಾರಭೂತವಾದ ಸತ್ಯವಸ್ತುವು ಅನುಭವಕ್ಕೆ ಬರುವುದಿಲ್ಲವೋ, ಅಲ್ಲಿಯವರೆಗೆ ಕಪ್ಪೆಯ ಚಿಪ್ಪಿನಲ್ಲಿ ಅಧ್ಯಾರೋಪವಾದ ಬೆಳ್ಳಿಯಂತೆ ಈ ಮೂರೂ ಅವಸ್ಥೆಗಳು ಸತ್ಯವಾಗಿಯೇ ತೋರುತ್ತವೆ.  ಈ ಮೂರೂ ಅವಸ್ಥೆಗಳು ತಮಗೆ ಆಧಾರವಾದ ಸ್ವರೂಪದ ಮೇಲೆ ತೋರಿ ಅಡಗುತ್ತವೆ.

तमोभिभूतः सुषुप्तिकाले सकले विलीने सुखरूपमेति । (कै 5.1-11)

ಅದರಂತೆ ಗಾಢನಿದ್ರೆಯಲ್ಲಿ ಅಜ್ಞಾನವಿದೆ ಎಂಬುದಕ್ಕೆ ಶ್ರುತಿ ಪ್ರಮಾಣಗಳಿವೆ. ಸತ್ಯದ ಜ್ಞಾನವನ್ನು ಯಾವನು ಹೊಂದಿರವನೋ ಅವನೇ ಬ್ರಾಹ್ಮಣನು. ಬರೇ ಆತ್ಮವಿದ್ಯೆಯನ್ನು ಯಾವನು ಅಭ್ಯಸಿಸುವನೋ ಅವನು ವಿಪ್ರನು. ಶ್ರುತಿಯಲ್ಲಿ ಹೇಳಿದ ಕರ್ಮಗಳನ್ನು ಮಾಡುವವನು ದ್ವಿಜನು.

ಕೆಲವರು ಕರ್ಮದ ಬಗೆಗೆ ಅತಿ ಹೆಚ್ಚಿನ ದಿಗ್ಭ್ರಮೆ ಅಥವಾ ಕೋಲಾಹಲವನ್ನೇ ಎಬ್ಬಿಸಿದ್ದಾರೆ. ಸಾಮಾನ್ಯವಾಗಿ ಬ್ರಹ್ಮಜ್ಞಾನಿಗೆ ಯಾವುದೇ ಪ್ರಕಾರದ ಕರ್ಮವಿಲ್ಲವೆಂದು ಹೇಳಿದ್ದಾಗಿದೆ. ಆದರೆ ಕೆಲವರು ಜ್ಞಾನಿಯು ನಿಷಿದ್ಧ ವ್ಯವಹಾರವನ್ನು ಮಾಡಿದರೂ ಅವುಗಳಿಂದ ಅವನು ಬಾಧೆಯನ್ನು ಹೊಂದುವದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಈ ರೀತಿಯ ಶ್ರುತಿಯ ಅರ್ಥವಿವರಣೆಯು ಪೂರ್ಣ ತಪ್ಪು ಮತ್ತು ಇದು ಅಸಂಖ್ಯ ಜೀವಿಗಳನ್ನು ತಪ್ಪು ದಾರಿಗೆ ಎಳೆಯುತ್ತದೆ. ಆದರೆ ಕೆಲವು ಘಟಿಂಗರು ಮತ್ತು ಪಾಪಿಷ್ಠರು ಈ ರೀತಿಯ ಶ್ರುತಿಯ ಅರ್ಥವಿವರಣೆಯ ದುರುಪಯೋಗ ಹೊಂದಿ ಅತಿ ಕೀಳು ದರ್ಜೆಯ ಜೀವನವನ್ನು ನಡೆಸುತ್ತಾರೆ ಮತ್ತು ಹಾಗೆ ಉಳಿದವರು ನಡೆಯುವಂತೆ ಮಾಡುತ್ತಾರೆ. ಮುಮುಕ್ಷುಗಳು ಸುಖದಾಯಕ ಫಲವನ್ನು ಕೊಡುವ ವಿಹಿತ ಕರ್ಮಗಳನ್ನೇ ಬಿಡುವರು.

ಅಂದ ಮೇಲೆ ಅವರು ನಿಷಿದ್ಧ ಕರ್ಮಗಳನ್ನು ಮಾಡುವುದು ಹೇಗೆ ಸಾಧ್ಯ. ವಿವೇಕ ಮತ್ತು ವೈರಾಗ್ಯ ಶೀಲರಿಗೆ ನಿಷಿದ್ಧ ಕರ್ಮಗಳಿಗೆ ಸ್ಥಾನವೇ ಇಲ್ಲ. ಆದ್ದರಿಂದ ಸಚ್ಚಿದಾನಂದ ಸ್ವರೂಪದಲ್ಲಿ ನೆಲೆನಿಂತ ಆತ್ಮಜ್ಞಾನಿಗಳಲ್ಲಿ ನಿಷಿದ್ಧ ಕರ್ಮಗಳು ಇಣಕಿ ಸಹ ಹಾಕಲಾರವು. ಮನಸ್ಸನ್ನು ಶುದ್ಧಗೊಳಿಸಬೇಕಾದರೆ ವಿವೇಕ ವೈರಾಗ್ಯರೂಪಿ ಕರ್ಮವೇ ಬೇಕು. ಇನ್ನುಳಿದ ಯಾವುದೇ ಕರ್ಮಗಳಿಂದ ಮನಸ್ಸು ಪರಿಶುದ್ಧವಾಗಲಾರದು. ಏಕೆಂದರೆ ದೋಷ ಅಥವಾ ಹೊಲಸು ಮನಸ್ಸಿನಲ್ಲಿದೆ, ಆದರೆ ಸಾಮಾನ್ಯವಾಗಿ ಕೆಲವರು ಹೇಳಿದಂತೆ ದೇಹೇಂದ್ರಿಯಗಳಲ್ಲಿಲ್ಲ. ಆದ್ದರಿಂದ ಮನಸ್ಸಿನ ಪರಿಶುದ್ಧತೆಗಾಗಿ ವಿವೇಕ ವೈರಾಗ್ಯಾದಿ ಒಳಗಿನ ಕರಣಗಳೇ ಪ್ರಯೋಜಕ ಮತ್ತು ಉಪಯುಕ್ತವಿರುವವು. ಇನ್ನುಳಿದ ಯಾವುದೇ ಸಾಧನೆಗಳು ಪ್ರಯೋಜಕ ಮತ್ತು ಉಪಯುಕ್ತವಿಲ್ಲ.

ಆತ್ಮ ಸಾಕ್ಷಾತ್ಕಾರವನ್ನು ಹೊಂದಲು, ತಾನು ಶಾಶ್ವತನು, ಅವಿದ್ಯೆ ಮತ್ತು ಅವಿದ್ಯೆಯ ಕಾರ್ಯಗಳಿಂದ ಮುಕ್ತನು, ನಿತ್ಯಾನಂದನು ಎಂಬ ತನ್ನ ನಿಜಸ್ವರೂಪದ ಜ್ಞಾನವೇ ಸಾಧನವು. ಆತ್ಮಸಾಕ್ಷಾತ್ಕಾರವನ್ನು ಹೊಂದಲು ಕರ್ಮ ಉಪಾಸನೆಗಳು ಸಾಧನೆಗಳೇ ಅಲ್ಲ. ಏಕೆಂದರೆ ಅವು ಅಜ್ಞಾನ ಮತ್ತು ಅಜ್ಞಾನದ ಕಾರ್ಯದೊಳಗಿನವುಗಳೇ ಇರುವವು. ಕರ್ಮ ಉಪಾಸನೆಗಳು ಅಜ್ಞಾನದಲ್ಲಿ ಕಲ್ಪಿಸಿದ ಕಲ್ಪನೆಗಳಾಗಿರುವುದರಿಂದ ಅವು ಅಜ್ಞಾನವನ್ನು ತೆಗೆದುಹಾಕಲಾರವು. ಆದ್ದರಿಂದ ಶಾಶ್ವತ ಸುಖವನ್ನು ಹೊಂದಬೇಕೆನ್ನುವವರು ಮತ್ತು ಅಜ್ಞಾನ ಬಂಧನದಿಂದ ಮುಕ್ತರಾಗಬೇಕೆನ್ನುವವರು ಎಲ್ಲ ಕರ್ಮ ಮತ್ತು ಉಪಾಸನೆಗಳನ್ನು ಕೈಬಿಡಬೇಕು. ಏಕೆಂದರೆ ಕರ್ಮ ಮತ್ತು ಉಪಾಸನೆಗಳು ದುಃಖದಲ್ಲಿಯೇ ಕೊನೆಗೊಳ್ಳುವವು ಮತ್ತು ಅವೆಲ್ಲವೂ ಅಜ್ಞಾನ ಮತ್ತು ಅದರ ಕಾರ್ಯಗಳ ಬಂಧನದಿಂದ ಮುಕ್ತಿಯನ್ನು ಪಡೆಯುವ ಸಾಧನದ ಅಜ್ಞಾನದಲ್ಲಿಯೇ ಮಾಡಲ್ಪಡುವವು.

ತನ್ನ ನಿಜಸ್ವರೂಪವನ್ನು ತಿಳಿದುಕೊಳ್ಳುವುದು ಇನ್ನಾವುದನ್ನೂ ತಿಳಿದು ಕೊಳ್ಳುವುದಕ್ಕಿಂತ ಸುಲಭವು. ಏಕೆಂದರೆ ಅದು ತನ್ನ ಸ್ವರೂಪವೇ ಇರುವದು. ಅದು ಸಮೀಪಕ್ಕಿಂತಲೂ ಸಮೀಪವು, ಅದು ತಾನೇ ಇರುವದು. ವಿಶ್ವ ಮತ್ತು ಅದರಲ್ಲಿಯ ವಸ್ತುಗಳ ಬಗೆಗಿನ ಚರ್ಚೆಯು ನಿರರ್ಥಕವೂ ಮತ್ತು ನಿಷ್ಫಲವೂ ಇರುವದು. ಇಂದ್ರಿಯಗಳ ವಿಷಯಗಳನ್ನು ಗಳಿಸುವದು ಮತ್ತು ಅವುಗಳನ್ನು ಭೋಗಿಸುವದು ದುಃಖಮಯವೂ ಮತ್ತು ಬೇಸರದಾಯಕವೂ ಇರುವದು. ಆ ವಿಷಯ ವಸ್ತುಗಳನ್ನು ಸಂರಕ್ಷಿಸುವದು ಸಹ ದುಃಖದಾಯಕವೂ ಮತ್ತು ಬೇಸರದಾಯಕವೂ ಇರುವದು. ವಿಷಯವಸ್ತುಗಳನ್ನು ಗಳಿಸುವುದನ್ನು ಮತ್ತು ಭೋಗಿಸುವುದನ್ನು ಬಿಟ್ಟು ತನ್ನ ನಿಜಸ್ವರೂಪದ ಅನುಭವ ಜ್ಞಾನವನ್ನು ಪಡೆಯಬೇಕು. ತನ್ನ ನಿಜಸ್ವರೂಪವೇ ಶಾಶ್ವತ ಸುಖವು. ಉಳಿದುದೆಲ್ಲವೂ ತೋರಿಕೆಯು. ವಿಷಯ ಸುಖವು ತೋರಿಕೆಯದೇ ಇರುವದು. ಕನಸಿನಲ್ಲಿದ್ದಾಗ ಕನಸು



ಸತ್ಯವೆನಿಸುವದು. ಜಾಗ್ರದಲ್ಲಿದ್ದಾಗ ಜಾಗ್ರವು ಸತ್ಯವೆನಿಸುವದು. ತನ್ನ ಸ್ವರೂಪದಲ್ಲಿ ಕನಸು ಜಾಗ್ರಗಳು ತೋರಿ ಅಡಗುವವು. ತನ್ನ ನಿಜಸ್ವರೂಪದಲ್ಲಿ ಕನಸು ಜಾಗ್ರಗಳಿಗೆ ಅಸ್ತಿತ್ವವೇ ಇಲ್ಲ. ತನ್ನ ನಿಜಸ್ವರೂಪದ ಧ್ಯಾನದಿಂದ ಜ್ಞಾನ ಸಮಾಧಿಯು ಪ್ರಾಪ್ತವಾಗುವದು. ಆಗ ಬುದ್ಧಿಯು ಸಮವಾಗುವದು (ಧೀ = ಬುದ್ಧಿ). ಬ್ರಹ್ಮವು ಸಮವಿರುವದು. ಬ್ರಹ್ಮವೇ ಶಾಶ್ವತ ಆನಂದವು. ವಿಷಯಗಳ ಧ್ಯಾನದಿಂದ ಬುದ್ಧಿಯು ವಿಷಮವಾಗುವದು ಮತ್ತು ಅದರಿಂದ ದುಃಖವುಂಟಾಗುವದು. ವಿಷಯಗಳ ಧ್ಯಾನವನ್ನು ಬಿಡಬೇಕೆಂಬುದನ್ನು ಹೇಳುವ ಅವಶ್ಯಕತೆಯೇ ಇಲ್ಲ.

ಮೊದಲಿಗೆ ತನ್ನ ನಿಜಸ್ವರೂಪದ ಬಗ್ಗೆ ಚೆನ್ನಾಗಿ ಕೇಳಬೇಕು. ನಂತರ ಎರಡು ಗಾಢನಿದ್ರೆಗಳ ನಡುವಿನ ಕಾಲದಲ್ಲಿ ತನ್ನ ನಿಜಸ್ವರೂಪದ ಬಗ್ಗೆ ಅನೇಕ ಯುಕ್ತಿಗಳ ನಿಯಮಿತವಾದ ವಿಚಾರದಿಂದ ತಾನೇ ಸಚ್ಚಿದಾನಂದನು ಎಂಬುದನ್ನು ದೃಢಗೊಳಿಸಬೇಕು. ನಂತರ ತನ್ನ ನಿಜಸ್ವರೂಪಕ್ಕನ್ಯವಾದದ್ದನ್ನು ಬಿಟ್ಟು ಸ್ವರೂಪಧ್ಯಾನದಲ್ಲಿ ತಲ್ಲೀನನಾಗಬೇಕು.

ಬ್ರಹ್ಮ ವೇದ ಬ್ರಹ್ಮ ಏವ ಭವತಿ ನ ಅನ್ಯತಃ
ಆದ್ದರಿಂದ ತಾನು ಬ್ರಾಹ್ಮಣನೇ ಇರುವನು.

# ಅವಿದ್ಯೆಯು ಅನಾದಿ ಅನಂತವಲ್ಲ ಅದು ಆದಿ ಅಂತವುಳ್ಳದ್ದು.

೧. ಅವಿದ್ಯೆಯು ಅನಾದಿ, ಅನಂತವಲ್ಲ. ಆದರೆ ಅದು ಆದಿ ಮತ್ತು ಅಂತವುಳ್ಳದ್ದಿದೆ.ಅದು ಅನಾದಿ, ಅನಂತವಾಗಿದ್ದರೆ, ಅದನ್ನು ಯಾವದೇ ಉಪಾಯ ಅಥವಾ ಜ್ಞಾನದಿಂದ ತೆಗೆದು ಹಾಕಲು ಅಥವಾ ನಾಶಮಾಡಲು ಬರುತ್ತಿರಲಿಲ್ಲ. ಅನಾದಿ, ಅನಂತವಾದದ್ದು ಯಾವಾಗಲೂ ಇರುವುದು. ಆದರೆ ಅವಿದ್ಯೆಯು ವಿವೇಕದಿಂದ ತೆಗೆದುಹಾಕಲ್ಪಡುತ್ತದೆ.

೨. ಜೀವನ ನಿಜಸ್ವರೂಪದ ಪ್ರಥಮಾನುಭೂತಿಯಲ್ಲಿ ಅವಿದ್ಯೆಯು ಇಲ್ಲವೇ ಇಲ್ಲ.

**ಬ್ರಹ್ಮೈವ ಇದಮಗ್ರೇ ಆಸೀತ್**

**ತದಹಮಸ್ಮಿ ಇತಿ ಅಗ್ರೇ ಏವ ವ್ಯಾಹರತ್**

ಅಥವಾ

**ಸತ್ ಏವ ಸೋಮ್ಯ ಇದಮಗ್ರೇ ಆಸೀತ್**

**ಸಃ ಅಹಮಸ್ಮಿ ಇತಿ ಅಗ್ರೇ ಏವ ವ್ಯಾಹರತ್**

(ಬ್ರಹ್ಮ ಅಥವಾ ಸತ್ಯವೇ ಆದಿಯಲ್ಲಿ ಇತ್ತು ಅದು ತನ್ನನ್ನು 'ನಾನು'ಎಂದು ಕೊಂಡಿತು.)

ಅವಿದ್ಯೆಯು ಸತ್ಯದ (ಸ್ವರೂಪದ ) ಆಧಾರದ ಮೇಲೆ ತೋರಿದ ತೋರಿಕೆಯು, ಅಧ್ಯಾಸವು, ಅವಿದ್ಯೆ ಅಥವಾ ಮಾಯೆಯ ನಂತರದ ತಪ್ಪು ಆರೋಪವು.

೩. ಮಾಯೆ ಅಥವಾ ಅವಿದ್ಯೆಯು ಸತ್ಯದ ಆಧಾರದ ಮೇಲೆ ತೋರಿದ ಹುಸಿ ತೋರಿಕೆಯು. ಆದ್ದರಿಂದ ಅದು ಅನಾದಿಯಲ್ಲ, ಅದು ಅನಾದಿಯಾಗಿದ್ದರೆ ಎಂದಿಗೂ ತೆಗೆದುಹಾಕಲ್ಪಡುತ್ತಿರಲಿಲ್ಲ. ಅಧ್ಯಾಸವು ಸತ್ಯಕ್ಕೆ ಅಥವಾ ಸತ್ಯದಲ್ಲಿ ನೈಸರ್ಗಿಕವಾಗಿಲ್ಲ. ಆದರೆ ಅದು ಮಾಯೆ ಅಥವಾ ಅವಿದ್ಯೆಯ ಕೃತ್ರಿಮ ಸೃಷ್ಟಿಯು.

೪. **''ಅನಾದಿ ಮಾಯಯಾ ಸುಪ್ತಃ ಜೀವಃ''**

ಎಂಬ ಹೇಳಿಕೆಯು ಅನುಭವಾನುಸಾರಿಯಲ್ಲ. ಏಕೆಂದರೆ ಜೀವನು ತನ್ನ ಮಾಯಾಸುಪ್ತಿಯನ್ನು ಮುಗಿಸುತ್ತಾನೆ ಮತ್ತು ಮಾಯಾ ಸುಪ್ತಿಗೆ ಆದಿಯಿದೆ.ಯಾವುದಕ್ಕೆ ಆದಿ ಇಲ್ಲವೋ ಅದಕ್ಕೆ ಅಂತವೂ ಇಲ್ಲ. ಜೀವನ ಮಾಯಾಸುಪ್ತಿಯು ಕೊನೆಗೊಳ್ಳುವುದು. ಆದ್ದರಿಂದ ಅದಕ್ಕೆ ಆದಿ ಇರಲಿಕ್ಕೇಬೇಕು.

೫. ಮಾಯೆ ಅಥವಾ ಶಕ್ತಿ ಅಥವಾ ಅವಿದ್ಯೆ ಅಥವಾ ಅಜ್ಞಾನ ಅಥವಾ ಪ್ರಕೃತಿಯು



ಅನಂತವಾದ ಸತ್ಯದೊಡನೆ, ನೀರು ಮತ್ತು ಹಾಲು ಮಿಶ್ರಿತವಾದಂತೆ ಮಿಶ್ರಿತವಾಗಿಲ್ಲ. ಸತ್ಯವು ಶಕ್ತಿಯೊಡನೆ ಮಿಶ್ರಿತವಾಗಿದ್ದರೆ ಶಕ್ತಿಯು ಅನೇಕ ರೂಪ, ಲಕ್ಷಣಗಳುಳ್ಳ ವಿಶ್ವವಾಗಿ ಬದಲಾವಣೆ ಹೊಂದುವಾಗ, ಸತ್ಯವೂ ಬದಲಾವಣೆಯನ್ನು ಹೊಂದಲೇಬೇಕಾಗಿತ್ತು. ವಿಶ್ವವು ಮಾಯೆಯ ಕಾರ್ಯವೆಂದು ಹೇಳಲಾಗಿದೆ, ಸತ್ಯದ ಕಾರ್ಯವೆಂದು ಹೇಳಿಲ್ಲ. ಸತ್ಯವು ಎಂದಿಗೂ ಯಾವುದೇ ನಾಮ,ರೂಪ, ಮತ್ತು ಲಕ್ಷಣವಾಗಿ ಬದಲಾವಣೆ ಹೊಂದುವದಿಲ್ಲ. ಸತ್ಯವು ನಾಮ, ರೂಪ,ಲಕ್ಷಣ ಮತ್ತು ಕ್ರಿಯೆರಹಿತವು.

೬. ಸತ್ಯವು ಪರಿವರ್ತನೆಯಾಗಿಲ್ಲ. ಅದು ಮಾಯೆ ಅಥವಾ ಪ್ರಕೃತಿಯ ಕಾರ್ಯಗಳಿಂದ ಬಾಧೆ ಹೊಂದಿಲ್ಲ. ಅದು ನಿರ್ಲಿಪ್ತ, ಸರ್ವವ್ಯಾಪಿ, ಪರಿಶುದ್ಧ ಮತ್ತು ಅತೀತವಿರುವದು. ಸತ್ಯವು ಪ್ರಕೃತಿ ಅಥವಾ ಮಾಯೆಯೊಡನೆ ಬದಲಾವಣೆಯನ್ನು ಹೊಂದಿದ್ದರೆ, ಸಚ್ಚಿದಾನಂದ ಸ್ವರೂಪವಾಗಿ ಉಳಿಯುತ್ತಿರಲಿಲ್ಲ.

೭. ಮಾಯೆ ಅಥವಾ ಪ್ರಕೃತಿಯು ಬದಲಾವಣೆಯನ್ನು ಹೊಂದುವ ವಿಶ್ವದ ಉಪಾದಾನ ಕಾರಣವೆಂದು ಹೇಳಲಾಗಿದೆ. ಆದರೆ ಸರ್ವಕ್ಕೂ ಆಧಾರವಾದ ಸತ್ಯವು, ಬದಲಾವಣೆಯನ್ನು ಹೊಂದುವ ವಿಶ್ವದ ಉಪಾದಾನ ಕಾರಣವೆಂದು ಹೇಳಿಲ್ಲ. ಆದ್ದರಿಂದ ಮಾಯೆ ಅಥವಾ ಪ್ರಕೃತಿಯು ಸತ್ಯದ ಆಧಾರದ ಮೇಲೆ ತೋರಿದ ಹುಸಿ ತೋರಿಕೆಯು, ಮಣ್ಣಿನ ಪಾತ್ರೆಯ ಉಪಾದಾನ ಕಾರಣವು ಮಣ್ಣು. ಮಣ್ಣು ಪಾತ್ರೆಯಾಗಿ ರೂಪಾಂತರ ಹೊಂದುತ್ತದೆ. ಆದರೆ ಸತ್ಯವು (ಸಚ್ಚಿದಾನಂದವು) ಬದಲಾವಣೆಯನ್ನು ಹೊಂದುವ ವಿಶ್ವದ ಉಪಾದಾನ ಕಾರಣವಲ್ಲ. ಮಾಯೆ ಅಥವಾ ಪ್ರಕೃತಿಯ ಕಾರ್ಯವಾದ ವಿಶ್ವವು ಬದಲಾವಣೆಯಾಗುತ್ತ ಹೋದಂತೆ ಸತ್ಯವು ಬದಲಾವಣೆಯಾಗುತ್ತ ಹೋಗುವದಿಲ್ಲ. ಸತ್ಯವು ಯಾವಾಗಲೂ ಅವಿಕಾರಿಯಾಗಿ ಇದೆ. ಬದಲಾವಣೆಯನ್ನು ಹೊಂದುವ ವಿಶ್ವವು ಸತ್ಯದ ಕಾರ್ಯವಲ್ಲ. ಸತ್ಯವು ಯಾವುದರ ಕಾರಣವೂ ಅಲ್ಲ, ಕಾರ್ಯವೂ ಅಲ್ಲ.

೮. ಮಣ್ಣಿನ ಪಾತ್ರೆಯ ಉಪಾದಾನಕಾರಣವಾದ ಮಣ್ಣು, ಮಣ್ಣಾಗಿ ಉಳಿಯುವದಿಲ್ಲ.ಆದರೆ ಪಾತ್ರೆಯಾಗಿ ರೂಪಾಂತರವಾಗುತ್ತದೆ. ಪಾತ್ರೆಯು ಮಣ್ಣಿನಿಂದ ಮಾಡಲ್ಪಟ್ಟಿದೆ. ಮಣ್ಣಿನಿಂದ ಪಾತ್ರೆಯಾದ ನಂತರ ಮಣ್ಣಿನ ಶೇಷವು ಉಳಿಯುವುದಿಲ್ಲ. ವಿಶ್ವವು ಸತ್ಯದಿಂದ ಮಾಡಲ್ಪಟ್ಟಿಲ್ಲ. ಸತ್ಯವು ಯಾವುದರ ಉಪಾದಾನ ಕಾರಣವೂ ಅಲ್ಲ. ವಿಶ್ವವು ವ್ಯಾವಹಾರಿಕ ಜಾಗ್ರ ಮತ್ತು ಕನಸುಗಳಲ್ಲಿ ತೋರಿದರೂ ಮತ್ತು ಗಾಢನಿದ್ರೆ, ಮೂರ್ಛೆಯಲ್ಲಿ ಅಡಗಿದರೂ, ಸತ್ಯವು ಯಾವುದೇ ಬದಲಾವಣೆಯನ್ನು ಹೊಂದದೆ ಇದ್ದಕ್ಕಿದ್ದಂತಿದೆ. ಜ್ಞಾನಸಮಾಧಿಯಲ್ಲಿ ವಿಶ್ವವು ಸಂಪೂರ್ಣ ಇಲ್ಲದಾಗಿ ಹೋಗುತ್ತದೆ. ಸತ್ಯವು ಯಾವಾಗಲೂ ಆನಂದವೇ ಇದೆ. ಸತ್ಯದ ಆಧಾರದ ಮೇಲೆ

ವಿಶ್ವವು ತೋರಿದರೂ, ಅಡಗಿದರೂ, ಅದು ಎಂದಿಗೂ, ಯಾವುದೇ ರೀತಿಯಿಂದ ಕಡಿಮೆಯಾಗುವದಿಲ್ಲ ಮತ್ತು ಹೆಚ್ಚಾಗುವದಿಲ್ಲ. ಸತ್ಯವು ಆದಿ ಅಂತ್ಯಗಳಿಲ್ಲದ.ಏಕೈಕ ಸಚ್ಚಿದಾನಂದವಾಗಿದೆ.

೯. ವಿಶ್ವವು ತೋರುವದೆಂಬ ದೃಷ್ಟಿಯಿಂದ ಮೇಲಿನಂತೆ ವಿವರಿಸಲಾಗಿದೆ. ಆದರೆ ಸತ್ಯದಲ್ಲಿ ವಿಶ್ವಕ್ಕೆ ಸ್ಥಾನವೇ ಇಲ್ಲ. ವಿಶ್ವವು ಸತ್ಯದ ವಿವರ್ತವಲ್ಲ, ಅದರ ಕಾರ್ಯವಲ್ಲ. ಅದು ಸತ್ಯದಲ್ಲಿ ಇಲ್ಲ. ಅದು ಸತ್ಯಕ್ಕೆ ಅನ್ಯವಾಗಿ ತನ್ನದೇ ಆದ ಲಕ್ಷಣಗಳುಳ್ಳದ್ದಾಗಿ ಯಾವದೇ ದೇಶ, ಕಾಲಗಳಲ್ಲಿ ಇಲ್ಲ.

೧೦. ಸತ್ಯವು ಸರ್ವವ್ಯಾಪಿಯು, ಪರಿಚ್ಛಿನ್ನವಲ್ಲ. ಸತ್ಯದ ಲಕ್ಷಣ ಅಥವಾ ಗುಣಗಳುಳ್ಳ ಇನ್ನೊಂದು ವಸ್ತುವು ಇರಲಾರದು. ಇದ್ದದ್ದಾದರೆ ಅದು ಸತ್ಯಸ್ವರೂಪವೇ ಇರಬೇಕು. ಎರಡನೆಯದಾಗಿ ಸತ್ಯದ ಲಕ್ಷಣಗಳಿಗಿಂತ ಭಿನ್ನವಾದ ಅಥವಾ ವಿರುದ್ಧವಾದ ಅನ್ಯವಸ್ತುವು ಸತ್ಯದಲ್ಲಿ ಇರಲು ಅವಕಾಶವೇ ಇಲ್ಲ. ಏಕೆಂದರೆ ಸತ್ಯವು ಸರ್ವವ್ಯಾಪಿ ಇದ್ದು ಅನ್ಯ ವಸ್ತುವಿಗೆ ಇರಲು ಅವಕಾಶವನ್ನು ಕೊಡುವದಿಲ್ಲ. ಒಂದು ವೇಳೆ ಸತ್ಯದಲ್ಲಿ ಅನ್ಯ ಏನಾದರೂ ಇರುವದೆಂದು ಗ್ರಹಿಸಿದರೆ, ಅದು ಮಾಯೆ ಅಥವಾ ಭ್ರಾಂತಿಯಿಂದ ಅಧ್ಯಾರೋಪಿತವಾಗಿರಲಿಕ್ಕೇಬೇಕು. ಮಾಯೆ ಅಥವಾ ಭ್ರಾಂತಿಯೇ ಅಧ್ಯಾರೋಪವು. ಭ್ರಾಂತಿಗೆ ತನ್ನದೇ ಆದ ಲಕ್ಷಣಗಳಿಲ್ಲ.

**ಯಾ ಮಾ ಸಾ ಮಾಯಾ**

(ಯಾವುದಕ್ಕೆ ಅಸ್ತಿತ್ವ ಇಲ್ಲವೋ ಅದು ಮಾಯೆಯು.)

ಭ್ರಾಂತಿಗೆ ತನ್ನದೇ ಆದ ಲಕ್ಷಣಗಳಿದ್ದರೆ ಅದು ಸತ್ಯಕ್ಕೆ ಭಿನ್ನವಸ್ತುವಾಗಿ ಉಳಿಯಬಹುದಾಗಿತ್ತು. ಮೂರನೆಯದಾಗಿ ಪ್ರಥಮ ಮತ್ತು ಕೊನೆಯ ಸತ್ಯದ ಅನುಭೂತಿಯ ಜ್ಞಾನದಲ್ಲಿ ಸತ್ಯಕ್ಕನ್ಯವಾದ ವಸ್ತುವಿಲ್ಲ.

'ಅಹಂ ಬ್ರಹ್ಮಾಸ್ಮಿ'(ನಾನು ಆನಂದ ಇರುತ್ತೇನೆ.) ಎಂಬುದು ಎಲ್ಲರ ಪ್ರಪ್ರಥಮ ಅನುಭವವಾಗಿದೆ.

**ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ ಇತ್ಯನುಶಾಸನಾತ್**

ಬೃಹದಾರಣ್ಯಕ ಉಪನಿಷತ್ತು

(ಈ ಆತ್ಮನೇ ಬ್ರಹ್ಮನಿರುತ್ತಾನೆ. ಇದು ಎಲ್ಲರ ಅನುಭವವು. ಈ ರೀತಿ ಅನುಶಾಸನವಿದೆ.)

ನಾನು ಆನಂದವೆಂಬುದು ದೇಶ, ಪ್ರದೇಶ, ಕಾಲ, ಭಾಷೆ, ಲಿಂಗ, ವಯಸ್ಸಿನ ನಿರ್ಬಂಧವಿಲ್ಲದ ಎಲ್ಲರ ಅನುಭವವು. 'ನಾನು, ನಾನು, ನಾನೊಬ್ಬನೇ, ನಾನು ಪೂರ್ಣಾನಂದನು, ಆನಂದ, ಆನಂದ, ಆನಂದವೊಂದೇ ಇರುವದು. ಸತ್ಯವು ಎಂದಿಗೂ



ಕ್ಷಯಿಸದ, ಹೆಚ್ಚು ಕಡಿಮೆಯಾಗದ, ಬೇರೊಂದು ಬೇಕೆನಿಸದ, ನಾಶಹೊಂದದ ಪೂರ್ಣಾನಂದವು, ತಿಳಿಯುವವ, ತಿಳಿಯಲ್ಪಟ್ಟದ್ದು, ತಿಳಿವಳಿಕೆ ಇವು ಪರಸ್ಪರ ಅವಲಂಬಿತವಿವೆ. ಅದರಂತೆ ನೋಡುವವ, ನೋಡಲ್ಪಟ್ಟದ್ದು, ನೋಡುವಿಕೆ ಇವು ಪರಸ್ಪರ ಅವಲಂಬಿತವಿವೆ. ಇವೆಲ್ಲವೂ ಆನಂದವೇ ತಾನೆಂಬ ಅನುಭೂತಿಯನ್ನು (ಸ್ವರೂಪಜ್ಞಾನ, ಆತ್ಮಜ್ಞಾನ) ಹೊಂದುವದಕ್ಕಿಂತ ಮುಂಚೆ ಸತ್ಯವಿರುತ್ತವೆ.

**ಪ್ರಾಕ್ ಬ್ರಹ್ಮಾತ್ಮತಾ ಪ್ರತಿಬೋಧಾತ್**

**ಸರ್ವೋ ಲೌಕಕೋ ವೈದಿಕಶ್ಚ ವ್ಯವಹಾರಃ**

- ಬ್ರಹ್ಮಸೂತ್ರ ಭಾಷ್ಯ.

(ಬ್ರಹ್ಮ ಮತ್ತು ಆತ್ಮರ ವಿಶೇಷ ಜ್ಞಾನವಾಗುವದಕ್ಕಿಂತ ಪೂರ್ವದಲ್ಲಿ ಎಲ್ಲ ಲೌಕಿಕ ಮತ್ತು ವೈದಿಕ ವ್ಯವಹಾರವು, ಜ್ಞಾನಾನಂತರವಿಲ್ಲ).

ಜೀವನು ಹೇಗೋ ತನ್ನ ಪ್ರಥಮಾನುಭೂತಿಯನ್ನು ಮರೆತಂತಾಗಿದೆ.

**ಮಾತೃ ಮಾನ ವಿಹೀನೋಸ್ಮಿ**

**ಮೇಯ ಹೀನಃ ಶಿವೋಸ್ಮಿ ಅಹಮ್**

(ಮಾತೃ, ಮಾನ, ಮೇಯಗಳಿಲ್ಲದ ಶಿವನೇ (ಸುಖವೇ) ನಾನಿದ್ದೇನೆ).

ಭ್ರಾಂತಿಯಲ್ಲಿ ಮಾತ್ರ ತ್ರಿಪುಟಿಯು ಸತ್ಯವೆನಿಸುವದು. ತ್ರಿಪುಟಿಯು ಗಾಢ ನಿದ್ರೆಯಲ್ಲಿ ಅಜ್ಞಾನದಲ್ಲಿ ಅಡಗಿದಾಗ ಮತ್ತು ತುರ್ಯದಲ್ಲಿ (ಸತ್ಯದಲ್ಲಿ) ಸ್ವರೂಪ ಜ್ಞಾನದಿಂದ ನಾಶವಾದಾಗ ಇಲ್ಲ.

**ವಸ್ತು ಸ್ವರೂಪಾವಧಾರಣಂ ವಿದ್ಯಾ**

(ವಸ್ತು ಸ್ವರೂಪದ ಅವಧಾರಣೆಯೇ ವಿದ್ಯೆಯು)

ಭ್ರಾಂತಿಯ ಕಾಲದಲ್ಲಿ ಮಾತ್ರ ತ್ರಿಪುಟಿಯು ಅಸ್ತಿತ್ವದಲ್ಲಿರುವಂತೆ ತೋರುವದು ಅಥವಾ ಅದು ಭ್ರಾಂತಿ ಇದ್ದಾಗ ಮಾತ್ರ ಇರುವದು.

**ಸತ್ಯಂ ಬ್ರಹ್ಮೇತಿ ಬ್ರಹ್ಮವಿಕಾರಾನ್ನಿವರ್ತಯತಿ**

- ತೈತ್ತರೀಯ ಉಪನಿಷದ್ಭಾಷ್ಯ.

(ಸತ್ಯವೇ ಬ್ರಹ್ಮವಿರುತ್ತದೆ. ಆದ್ದರಿಂದ ಬ್ರಹ್ಮನ ವಿಕಾರವು ನಿರಾಕರಿಸಲ್ಪಟ್ಟಿದೆ.)

**ಅವಿಕಾರಿ ಹಿ ತದ್ವಿದ್ಧಿ..................**

(ಬ್ರಹ್ಮವು ಅವಿಕಾರಿ ಇರುವದು.)

ಸತ್ಯದಲ್ಲಿ ವಿಕಾರವಾಗುವ ಅಂಶವೇ ಇಲ್ಲ. ಅದು ಒಂದು ಪೂರ್ಣ ವಸ್ತುವಿರುವದು. ಅದು ಮಿಶ್ರಿತ ವಸ್ತುವಲ್ಲ. ಸತ್ಯವು (ಆನಂದವು) ಸಂಯುಕ್ತ ಅಥವಾ ಮಿಶ್ರಿತ ವಸ್ತುವಲ್ಲ.

**ಓಂ ಪೂರ್ಣಂ ಇದಂ ಪೂರ್ಣಮದಃ**

**ಪೂರ್ಣಾತ್ ಪೂರ್ಣಂ ಉದಚ್ಯತೆ**

**ಪೂರ್ಣಸ್ಯ ಪೂರ್ಣಮಾದಾಯ**

**ಪೂರ್ಣಮೇವಾವಶಿಷ್ಯತೆ.**

(ಸಚ್ಚಿದಾನಂದವು ಪೂರ್ಣವಿದೆ. ವಿಶ್ವದ ತೋರಿಕೆಯ ಅಂಶವನ್ನು ಬಾಧಪಡಿಸಿದಾಗ ಅದೂ ಪೂರ್ಣವೇ. ಪೂರ್ಣದ ಆಧಾರದ ಮೇಲೆ ವಿಶ್ವವು ತೋರುವದು. ವಿಶ್ವವು ಪೂರ್ಣದ ಆಧಾರದ ಮೇಲೆ ತೋರಿದರೂ, ಅಡಗಿದರೂ, ಪೂರ್ಣವು ಪೂರ್ಣವೇ ಇರುವದು.)

ಬ್ರಹ್ಮ ಅಥವಾ ಆತ್ಮವನ್ನು (ಸತ್ಯ, ಆನಂದ) ಹೊಸದಾಗಿ ಹೊಂದಬೇಕಾಗಿಲ್ಲ. ಏಕೆಂದರೆ ಅದು ಸರ್ವವ್ಯಾಪಿ ಇರುವದು. ಪ್ರಥಮಾಭೂತಿಯನ್ನು ನೆನಪಿಸಿಕೊಂಡು 'ನಾನು ಆನಂದ' (ಸತ್ಯ) ಎಂಬ ಜ್ಞಾನದಿಂದ 'ನಾನು ದೇಹ ' ಎಂಬ ಅಧ್ಯಾಸವನ್ನು ತೆಗೆದುಹಾಕಬೇಕು. ಇದಕ್ಕೆ ವ್ಯಾವಹಾರಿಕ ಉದಾಹರಣೆಯನ್ನು ಕೊಡಬಹುದು. ಬಯಲನ್ನು ಹೊಂದಲು ಏನನ್ನೂ ಮಾಡಬೇಕಾಗಿಲ್ಲ. ವ್ಯಾವಹಾರಿಕವಾಗಿ ಬಯಲು ಸರ್ವವ್ಯಾಪಿ ಇದೆ. ಅದನ್ನು ನೋಡಲು ಅಥವಾ ಹೊಂದಲು ಯಾವದೇ ಪ್ರಯತ್ನ ಬೇಕಾಗಿಲ್ಲ. ಅರಿವು ಸಹಿತ ಮನಸ್ಸು ಸಮವಾದರೆ ಸಾಕು. ಸರ್ವವ್ಯಾಪಿಯಾದ, ಅನುಸ್ಯೂತವಾದ ಆನಂದವು ಇದ್ದಕ್ಕಿದ್ದಂತೆ ಅನುಭವಕ್ಕೆ ಬರುವದು.

**ಸತ್ಯಂ ಬ್ರಹ್ಮೇತಿ ಬ್ರಹ್ಮವಿಕಾರಾನ್ನಿವರ್ತಯತಿ**

**ತಸ್ಮಾತ್ ಬ್ರಹ್ಮಣಃ ರೂಪಪ್ರಪಂಚಂ ಪರಿಷೇಧತಿ ಪರಿಶಿನಷ್ಟಿ ಬ್ರಹ್ಮ**

- ಬ್ರಹ್ಮ ಸೂತ್ರ ಭಾಷ್ಯ.

(ಸತ್ಯವೇ ಬ್ರಹ್ಮವಿರುತ್ತದೆಂದು ಬ್ರಹ್ಮನ ವಿಕಾರವು ನಿರಾಕರಿಸಲ್ಪಟ್ಟಿದೆ. ಆದ್ದರಿಂದ ಬ್ರಹ್ಮನ ರೂಪಧಾರಣ ಮಾಡುವಿಕೆಯು ಅಲ್ಲಗಳೆಯಲ್ಪಟ್ಟಿದೆ. ಬ್ರಹ್ಮ ಒಂದೇ ಉಳಿಯುತ್ತದೆ).

ಸತ್ಯವು (ಬ್ರಹ್ಮವು) ಯಾವದರ ಕಾರ್ಯವಲ್ಲ. ತೋರಿಕೆಯ ರೂಪದ ಸತ್ಯವನ್ನು ಅಲ್ಲಗಳೆದಾಗ ಸತ್ಯವೇ (ಬ್ರಹ್ಮವೇ) ಉಳಿಯುವದು. ಆದ್ದರಿಂದ ತೋರಿಕೆಯ ರೂಪದ ಸತ್ಯವು ಅಧ್ಯಾರೋಪಿತವಾದುದು. ಸತ್ಯವೊಂದೇ ಉಳಿಯುವದು ಮತ್ತು ಇರುವದು.



**ಪ್ರಪಂಚಮೇವ ಬ್ರಹ್ಮಣಿ ಕಲ್ಪಿತಂ**

**-- ಪರಿಶಿನಷ್ಟಿ ಬ್ರಹ್ಮ** - ಬ್ರಹ್ಮ ಸೂತ್ರ ಭಾಷ್ಯ.

(ಪ್ರಪಂಚವು ಬ್ರಹ್ಮನಲ್ಲಿ ಕಲ್ಪಿತವಿದೆ. ಬ್ರಹ್ಮವೇ ಉಳಿಯುತ್ತದೆ).

ಸ್ವರೂಪಕ್ಕೆ ಸಂಬಂಧಿಸಿ ವಿಶ್ವಸೃಷ್ಟಿಯ ಬಗ್ಗೆ ಏನನ್ನೂ ಹೇಳಲು ಬರುವದಿಲ್ಲ. ಏಕೆಂದರೆ ಸತ್ಯವು ಸತ್ಯವೇ ಇದೆ.

**ಏಕರೂಪೇಣ ವ್ಯವಸ್ಥಿತೋಯೋರ್ಥಃ**

**ಸಃ ಪರಮಾರ್ಥಃ** - ಬ್ರಹ್ಮಸೂತ್ರ ಭಾಷ್ಯ.

(ಒಂದೇ ರೂಪದಿಂದ ಯಾವ ವಸ್ತುವು ಇರುತ್ತದೆಯೋ ಅದು ಪರಮಾರ್ಥವು.)

ಸೃಷ್ಟಿ ಅಥವಾ ವಿಶ್ವವು ಅನೇಕ ಪ್ರಕಾರದ ರೂಪ ಲಕ್ಷಣವುಳ್ಳದ್ದಾಗಿದೆ. ಅದು ವಿಕಾರಿ ಇರುವದು. ಆದರೆ ಸತ್ಯವು ಅವಿಕಾರಿ ಇರುವದು. ಸೃಷ್ಟಿ, ಸೃಷ್ಟಿಕ್ರಮ, ಸೃಷ್ಟಿಲಯ ಇವೆಲ್ಲವೂ ಅಧ್ಯಾಸದಲ್ಲಿಯೇ, ಇದೆಲ್ಲವೂ ಅಧ್ಯಾರೋಪಿತವಾದ ಮಾಯೆ ಅಥವಾ ಪ್ರಕೃತಿಯಲ್ಲಿಯೇ.

**ಅಧ್ಯಾಸ ಮೂಲೋಹಿ ವ್ಯವಹಾರಃ**

**ತಂ ಏತಂ ಅವಿದ್ಯಾಖ್ಯಂ ಆತ್ಮಾನಾತ್ಮನೋರಿತರೇತರಾಧ್ಯಾಸಂ**

**ಪುರಸ್ಕೃತ್ಯ ಸರ್ವೇ ವ್ಯವಹಾರಾಃ ಲೌಕಿಕಾಃ**

**ವೈದಿಕಶ್ಚ ಪ್ರವೃತ್ತಾಃ ಸರ್ವಾಣಿ ಚ ಶಾಸ್ತ್ರಾಣಿ**

**ವಿಧಿ ಪ್ರತಿಷೇಧ ಮೋಕ್ಷಪರಾಣಿ**

- ಬ್ರಹ್ಮಸೂತ್ರ ಭಾಷ್ಯ.

(ಅಧ್ಯಾಸವೇ ವ್ಯವಹಾರದ ಮೂಲವು. ಈ ಅವಿದ್ಯೆ ಎಂಬ ಹೆಸರಿನ ಆತ್ಮ ಮತ್ತು ಅನಾತ್ಮ ಇವೆರಡರ ಪರಸ್ಪರ ಅಧ್ಯಾಸವನ್ನು ಆಧಾರ ಮಾಡಿಕೊಂಡು ಲೌಕಿಕ ಮತ್ತು ವೈದಿಕ ಎಲ್ಲ ವ್ಯವಹಾರಗಳು ಮತ್ತು ವಿಧಿ ನಿಷೇಧಪರವಾದ ಎಲ್ಲ ಶಾಸ್ತ್ರಗಳು ಪ್ರವೃತ್ತವಾಗಿರುತ್ತವೆ.) ಆದ್ದರಿಂದ ಮಾನವನು 'ಅಹಂ ಬ್ರಹ್ಮಾಸ್ಮಿ' (ನಾನು ಬ್ರಹ್ಮ ಇರುತ್ತೇನೆ.) ಎಂಬ ಭಾವದ ನಂತರ ಉದಯವಾದ ಅಧ್ಯಾಸವನ್ನು ತೆಗೆದುಹಾಕಲು ತನ್ನ ನಿಜವೇ ಇರಬೇಕು ಅಥವಾ ಕೇವಲ ಆನಂದವೇ ಉಳಿಯಬೇಕು.

೧೧. **ಶಾಸ್ತ್ರಾಣಿ ಜ್ಞಾಪಕಾನಿ ನ ತು ಕಾರಕಾನಿ**

**ವಸ್ತು ಸ್ವರೂಪ ಜ್ಞಾಪಕಾನಿ**

(ಶಾಸ್ತ್ರಗಳು ಸದ್ವಸ್ತುವಿನ ಸ್ವರೂಪವನ್ನು ನೆನಪು ಮಾಡಿಕೊಡುವವು, ಹೊರತಾಗಿ ಅದನ್ನು ಹೊಸದಾಗಿ ತಯಾರುಮಾಡಿಕೊಡುವಂತಹವುಗಳಲ್ಲ.)

**ಪಲಾಲಂ ಇವ ಧಾನ್ಯಾರ್ಥಿ ತ್ಯಜೇತ್ ಗ್ರಂಥಂ ಅಶೇಷತಃ**

(ಕಾಳನ್ನು ಇಚ್ಛಿಸುವವನು ಚಿರಟವನ್ನು ಹೇಗೆ ಬಿಡುತ್ತಾನೆಯೋ ಹಾಗೆ ಸುಖವನ್ನು ಇಚ್ಛಿಸುವವನು ಗ್ರಂಥವನ್ನು ಪೂರ್ಣ ಬಿಡತಕ್ಕದ್ದು.)

ಶಾಸ್ತ್ರವು ಸತ್ಯದಲ್ಲಿ ಇಲ್ಲದ ಅಜ್ಞಾನವನ್ನು ತೆಗೆದುಹಾಕಿ, ಮೂಲ ಸತ್ಯವನ್ನು (ಸಚ್ಚಿದಾನಂದ) ನೆನಪಿಗೆ ಮಾತ್ರ ತಂದು ಕೊಡುತ್ತದೆ. 'ಶಾಸ್ತ್ರಾಣಿ ಜ್ಞಾಪಕಾನಿ ನ ತು ಕಾರಕಾನಿ' ಎಂಬ ಹೇಳಿಕೆಯು, ಸತ್ಯದಲ್ಲಿ ಅವಿದ್ಯೆಯು ಇಲ್ಲವೇ ಇಲ್ಲ, ಅವಿದ್ಯೆಗೆ ಆದಿ, ಅಂತವಿದೆ, ಅದು ಅನಾದಿ, ಅನಂತವಲ್ಲ, ಮತ್ತು ನೈಸರ್ಗಿಕವಲ್ಲ ಎಂಬುದನ್ನು ಸ್ಪಷ್ಟೀಕರಿಸುತ್ತದೆ ಅಥವಾ ಸಿದ್ಧಮಾಡುತ್ತದೆ. ಪ್ರಥಮಾನುಭೂತಿಯಲ್ಲಿ 'ನಾನು ಚಿದ್ಘನಾನಂದನು'(ಬ್ರಹ್ಮನು) ಎಂಬ ಭಾವ ಅಥವಾ ಕಲ್ಪನೆಯ ಹೊರತು, ಇನ್ನಾವುದೇ ಭಾವ ಅಥವಾ ಕಲ್ಪನೆಯು ಇರಲಿಲ್ಲ. ಜೀವನು ಬಹಿರ್ಮುಖವೃತ್ತಿಯನ್ನು ಹೊಂದಿದಾಗ, ಅನ್ಯ ಕಲ್ಪನೆಗಳು ಉದಯವಾಗುತ್ತವೆ ಮತ್ತು ನಾನು ಆನಂದ ಎಂಬ ಪ್ರಪ್ರಥಮ ಭಾವವು ಅಪೂರ್ಣ ಮರೆತಂತಾಗುತ್ತದೆ ಮತ್ತು ಮಂದವಾಗುತ್ತದೆ. ಮೂಲಾವಿದ್ಯೆಯು ತನ್ನ ಕಾರ್ಯಗಳನ್ನೊಳಗೊಂಡು ತೋರುತ್ತದೆ. ಈಗ ಮೂಲಾವಿದ್ಯೆಗೆ ಆದಿಯುಂಟಾಯಿತು. ಜೀವನು ಎಂದೂ ಕಳೆದು ಹೋಗದ ಮೂಲ ಸತ್ಯವನ್ನು ಹೊಂದಿದಂತಾದಾಗ ಮೂಲಾವಿದ್ಯೆಯು ಇಲ್ಲದಂತಾಗುವುದು. ಮೂಲಾವಿದ್ಯೆ ಮತ್ತು ಅದರ ಕಾರ್ಯಗಳ ತೋರಿಕೆಯು ಸಚ್ಚಿದಾನಂದವನ್ನು ಎಂದಿಗೂ ದೂಷಿತ ಗೊಳಿಸಲಾರದು. ಏಕೆಂದರೆ ಮೂಲಾವಿದ್ಯೆಯು ಕೇವಲ ತೋರಿಕೆಯು, ಇರುವಿಕೆಯಲ್ಲ.

೧೨. ಜೀವನದ ಎಲ್ಲ ವ್ಯವಹಾರಗಳು ಮತ್ತು ವ್ಯಾವಹಾರಿಕ ಜಾಗ್ರ, ಕನಸು, ಗಾಢನಿದ್ರೆ ಎಂಬ ಅವಸ್ಥೆಗಳು, ತಾನು ಸಚ್ಚಿದಾನಂದನು (ಬ್ರಹ್ಮನು) ಎಂಬ ಜ್ಞಾನವಾಗುವದಕ್ಕಿಂತ ಮುಂಚೆ ಸತ್ಯವೆಂದು ತೋರುತ್ತವೆ.

**ಸರ್ವ ವ್ಯವಹಾರಾಣಾಮೇವ ಪ್ರಾಕ್**

**ಬ್ರಹ್ಮಾತ್ಮತಾ ವಿಜ್ಞಾನಾತ್ ಸತ್ಯತ್ವೋಪಪತ್ತೇಃ** - ಬ್ರಹ್ಮ ಸೂತ್ರ ಭಾಷ್ಯ.

(ಎಲ್ಲ ವ್ಯವಹಾರಗಳಿಗಿಂತ ಪೂರ್ವದಲ್ಲಿಯೇ ಬ್ರಹ್ಮ ಮತ್ತು ಆತ್ಮರ ವಿಶೇಷ ಜ್ಞಾನವಿರುತ್ತದೆ) ತಾನು ಆನಂದ ಎಂಬ ಅನುಭವವಾಗುವವರೆಗೆ ಅವಿದ್ಯೆಯ ಮೂಲಕ ಅಧ್ಯಾಸದ ವ್ಯವಹಾರವು ಸತ್ಯವೆನಿಸುತ್ತದೆ. ಆದ್ದರಿಂದ ಅವಿದ್ಯೆಗೆ ಅಂತವಿದೆ. ಅದು ಸಾಮಾನ್ಯವಾಗಿ ಹೇಳಿದಂತೆ ಅನಂತವಲ್ಲ.

**ಯತ್ರ ತ್ವಸ್ಯ ಸರ್ವ ಮಾತ್ಮೈ ವಾಭೂತ್**

(ಯಾವ ಸ್ಥಿತಿಯಲ್ಲಿ ಇವನಿಗೆ ಎಲ್ಲವೂ ಆತ್ಮವೇ ಇರುತ್ತದೆ (ಇತ್ತು).



ಎಲ್ಲಿ ಅಥವಾ ಯಾವಾಗ ಜೀವನು ಆತ್ಮನಾಗಿಯೇ (ಆನಂದ) ಉಳಿಯುವನೋ ಆಗ ಅಧ್ಯಾಸವಿಲ್ಲ. ಮಾಯೆ ಅಥವಾ ಅವಿದ್ಯೆ ಅಥವಾ ಪ್ರಕೃತಿ ಅಥವಾ ಶಕ್ತಿ ಇಲ್ಲ. ಅಲ್ಲಿ ತನಗನ್ಯವಾಗಿ ಏನೂ ಇಲ್ಲ. ಆದ್ದರಿಂದ ಪ್ರಥಮಾನುಭೂತಿಯ ದೃಷ್ಟಿಯಿಂದ ವಿಚಾರಮಾಡಿ ನೋಡಿದಾಗ, ಜೀವನ ನಿಜಸ್ವರೂಪದಲ್ಲಿ ಅನ್ಯವೇನೂ ಮಿಶ್ರಿತವಾಗಿಲ್ಲವೆಂಬುದು ತಿಳಿಯುವದು. ಸತ್ಯವು ಬದಲಾವಣೆಯಾಗುವಂತಹ ಶಕ್ತಿ ಅಥವಾ ಮಾಯೆ ಮುಂತಾದ ಯಾವುದರಿಂದಲೂ ಮಿಶ್ರಿತವಾಗಿಲ್ಲ. ಮಾನವನು ಅಜ್ಞಾನ, ಅಧ್ಯಾಸ ಮುಂತಾದವುಗಳಿಂದುಂಟಾದ ಪೂರ್ವದೂಷಿತ ವಿಚಾರಗಳಿಗೆ ಒಳಗಾಗದೆ ನೇರವಾಗಿ ಸತ್ಯಕ್ಕೆ ತನ್ನ ಲಕ್ಷ್ಯವನ್ನು ಕೊಡಬೇಕು.

೧೩. ಸ್ವರೂಪಾನುಭವವು (ಆತ್ಮಾನುಭವವು) ತರ್ಕದಿಂದ ಉಂಟಾಗುವದಿಲ್ಲ. ಅದು ಬೇರೆ ಸಾಮಾನ್ಯ ನಿಯಮದಿಂದ ಅನುಮಾನಿಸಿದ್ದಲ್ಲ. ಯಾವುದೇ ಶಕ್ತಿಯು ಮಾನವನು ಸ್ವರೂಪಾನು ಭವವನ್ನು ಹೊಂದಲು ಕಾರಣವಾಗಿಲ್ಲ. ಅದು ಸಾಕ್ಷಾತ್ ಅನುಭವವು.

**ಶಾಂತೋ ದಾಂತಃ ಉಪರತಃ ತಿತಿಕ್ಷುಃ**

**ಸಮಾಹಿತೋ ಭೂತ್ವಾ ಆತ್ಮನ್ಯೇವ ಆತ್ಮಾಂ ಪಶ್ಯತಿ**

- ಬೃಹದಾರಣ್ಯಕೋಪನಿಷತ್ತು.

(ಶಾಂತನು, ದಾಂತನು, ಉಪರತನು, ತಿತಿಕ್ಷುವಾದವನು, ಸಮಾಹಿತನಾಗಿ ತನ್ನಲ್ಲಿಯೇ ತನ್ನನ್ನು ಕಂಡುಕೊಳ್ಳುತ್ತಾನೆ.)

ಅದು ತರ್ಕವಿಲ್ಲದ ಸಾಕ್ಷಾತ್ ಅನುಭವವು.

**ನ ಏಷಾ ತರ್ಕೇಣ ಮತಿರಾಪನೇಯಾ.**

- ಕಾಠಕೋಪನಿಷತ್ತು.

(ಈ ತಿಳುವಳಿಕೆಯು ತರ್ಕದಿಂದ ಪ್ರಾಪ್ತವಾಗಲಾರದು.)

ಅನುಭವದಲ್ಲಿ ತರ್ಕಕ್ಕೆ ಸ್ಥಾನವೇ ಇಲ್ಲ.

ಸ್ವರೂಪ ಜ್ಞಾನವು ಶಾಸ್ತ್ರವನ್ನು ಅವಲಂಬಿಸಿಲ್ಲ ಅಥವಾ ಶಾಸ್ತ್ರದಿಂದ ಉಂಟಾಗಿಲ್ಲ. ಏಕೆಂದರೆ ಅಲ್ಲಿ ಸ್ವರೂಪಕ್ಕನ್ಯವಾಗಿ ಏನೂ ಇಲ್ಲ.ಶಾಸ್ತ್ರವು ಬಹಿರ್ಮುಖವೃತ್ತಿಯಿಂದ ಉಂಟಾದುದು. ಆತ್ಮನು ಚಿದ್ಘನಾನಂದನನು, ಮತ್ತೇನೂ ಅಲ್ಲ.

ಸತ್ಯವೇ ತನ್ನ ನಿಜವು ಎಂಬ ಅನುಭವವುಂಟಾಗುವುದಕ್ಕಿಂತ ಮುಂಚೆ ಎಲ್ಲ ಲೌಕಿಕ ಮತ್ತು ವೈದಿಕ ವ್ಯವಹಾರಗಳು ಸತ್ಯವೆನಿಸುವವು. ಸತ್ಯವೇ ತನ್ನ ನಿಜವು ಎಂಬ ಅನುಭವವಾದ ಮೇಲೆ, ಎಲ್ಲ ಲೌಕಿಕ ಮತ್ತು ವೈದಿಕ ವ್ಯವಹಾರಗಳು ಸುಳ್ಳೆನಿಸುವವು. ಆದ್ದರಿಂದ ಅವಿದ್ಯೆಗೆ

ಅಂತವಿದೆ. ಸತ್ಯ ಮತ್ತು ಅಸತ್ಯ ಮಿಶ್ರಿತವಾದಂತಾಗಿರುವವು ಎಂಬ ತಿಳುವಳಿಕೆ ಇದ್ದಾಗ ಮಾತ್ರ, ಅವಿದ್ಯೆಯು ಸತ್ಯದಲ್ಲಿ ನೈಸಗಿಕವೆನಿಸುವದು. ಸತ್ಯ ಮತ್ತು ಅಸತ್ಯ ಮಿಶ್ರಿತವಾಗಿಲ್ಲವೆಂಬ ತಿಳಿವಳಿಕೆ ಇದ್ದಾಗ ಅವಿದ್ಯೆಯು ನೈಸರ್ಗಿಕವೆನಿಸುವುದಿಲ್ಲ.

**ಸತ್ಯಾನೃತೆ ಮಿಥುನೀಕೃತ್ಯ ಅಹಮಿದಮ್**

**ಮಮೇದಮ್ ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ**

- ಅಧ್ಯಾಸ ಭಾಷ್ಯ

(ಸತ್ಯ ಮತ್ತು ಅಸತ್ಯವನ್ನು ಮಿಥುನೀಕರಿಸಿ ಇದು ನಾನು, ಇದು ನನ್ನದು, ಎಂಬ ನೈಸರ್ಗಿಕವಾದ ಲೋಕವ್ಯವಹಾರವು.)

ಹೀಗೆ ಅವಿದ್ಯೆಗೆ ಆದಿ ಮತ್ತು ಅಂತವಿದೆಯೆಂದು ಸ್ಪಷ್ಟವಿದೆ. ಅಸತ್ಯ ಅಥವಾ ಮಾಯೆ ಅಥವಾ ಶಕ್ತಿಯು ಸ್ವರೂಪದ ಆಧಾರದ ಮೇಲೆ ಹೇಗೋ ತೋರಿದ ತೋರಿಕೆಯು.

೧೪. ಸತ್ಯವು ಮಾತ್ರ ಅನಾದಿ ಅನಂತವಾದದು. ಅನಾತ್ಮವೆಲ್ಲವೂ ಸ್ವರೂಪದ ಆಧಾರದ ಮೇಲೆ ತೋರಿದ ತೋರಿಕೆ ಮಾತ್ರ. ಅಧ್ಯಾರೋಪಿತವಾದವುಗಳು ಅಥವಾ ತೋರಿಕೆಯವುಗಳು, ಹಗ್ಗದ ಮೇಲೆ ತೋರಿದ ಅಥವಾ ಅಧ್ಯಾರೋಪಿತವಾದ ಹಾವು ಹಗ್ಗವನ್ನು ವಿಷಮಯ ಮಾಡದಂತೆ ಅಥವಾ ಬದಲಾಯಿಸದಂತೆ, ತಮಗೆ ಆಧಾರವಾದ ಸತ್ಯವನ್ನು ಯಾವದೇ ರೀತಿಯಿಂದ ದೂಷಿತಗೊಳಿಸಲಾರವು. ಹಾವು ಹಗ್ಗದೊಡನೆ ಮಿಶ್ರಣವಾಗದು. ಅದರಂತೆ ಶಕ್ತಿಯು ಸತ್ಯದಲ್ಲಿ ಮಿಶ್ರಿತವಾಗಲಾರದು. ಮತ್ತು ಯಾವದೇ ರೀತಿಯಿಂದ ಅದರ ಲಕ್ಷಣ ಅಥವಾ ಸರ್ವವ್ಯಾಪಕತ್ವವನ್ನು ಪರಿವರ್ತಿಸಲಾರದು.

**ತ್ವಂ ನಃ ಪಿತಾ ಯೋಽಸ್ಮಾಕಮವಿದ್ಯಾಯಾಃ**

**ಪರಂ ಪಾರಂ ತಾರಯತಿ** - ಪ್ರಶ್ನೋಪನಿಷತ್ತು.

**ತಸ್ಮೈ ಮೃದಿತ ಕಷಾಯಾಯ ತಮಸಃ**

**ಪಾರಂ ದರ್ಶಯತಿ ಭಗವಾನ್ ಸನತ್ಕುಮಾರಃ** - ಛಾಂದೋಗ್ಯೋಪನಿಷತ್ತು.

(ನಮ್ಮ ತಂದೆಯು ನಮ್ಮ ಅವಿದ್ಯೆಯ ಆಚೆಯ ದಂಡೆಯನ್ನು ದಾಟಿಸುತ್ತಾನೆ. ಮನಸ್ಸಿನ ದೋಷವನ್ನು ಪೂರ್ಣವಾಗಿ ನಾಶಮಾಡಿಕೊಂಡವನಿಗೆ ಮಾತ್ರ,ಅಜ್ಞಾನದ ಆಚೆಯನ್ನು ಭಗವಾನ್ ಸನತ್ಕುಮಾರನು ತೋರಿಸುತ್ತಾನೆ.)

ಒಂದು ವೇಳೆ ಅವಿದ್ಯೆ ಅಥವಾ ಶಕ್ತಿ ಅಥವಾ ತಮಸ್ಸು ಸತ್ಯದೊಡನೆ ಮಿಶ್ರಿತವಾಗಿದ್ದರೆ ಅಥವಾ ಅದನ್ನು ಪೂರ್ಣ ತುಂಬಿದ್ದರೆ, ಯಾವದೂ,ಎಷ್ಟೇ ಪ್ರಮಾಣದ, ಯಾವದೇ ಪ್ರಕಾರದ ಜ್ಞಾನವು ಜೀವನು ತಮಸ್ಸು ಅಥವಾ ಅವಿದ್ಯೆಯನ್ನು ದಾಟುವಂತೆ ಮಾಡಲು ಆಗುತ್ತಿರಲಿಲ್ಲ.ಆದರೆ ಸ್ವರೂಪ ಜ್ಞಾನದಿಂದ ತಮಸ್ಸು ಅಥವಾ ಅವಿದ್ಯೆ ಅಥವಾ



ಶಕ್ತಿಯು ದಾಟಲ್ಪಡುತ್ತದೆ. ಆದ್ದರಿಂದ ಅವಿದ್ಯೆಯು ಅನಾದಿ, ಅನಂತವಲ್ಲ. ಅದು ಅನಾದಿ ಅನಂತವಾಗಿದ್ದರೆ, ಅವಿದ್ಯೆಯಿಂದ ಬಿಡುಗಡೆ ಹೊಂದುವ ಅಥವಾ ಸಚ್ಚಿದಾನಂದವನ್ನು ಹೊಂದುವ ಸಾಧನ ಕ್ರಮವೇ ಇರುತ್ತಿರಲಿಲ್ಲ. ಆತ್ಮ ಅಥವಾ ಸತ್ಯವು ಯಾವಾಗಲೂ ಶುದ್ಧ ಮತ್ತು ದೂಷಿತವಾಗಲಾರದಂತಹದ್ದು ಇದೆ. ಅದನ್ನು ನೆನಪಿಗೆ ತಂದು ಕೊಳ್ಳಲು ಅದು ಪರಿಶುದ್ಧ, ಶಾಶ್ವತ, ಮುಕ್ತ, ಸರ್ವವ್ಯಾಪಿ, ಅತೀತ ಮತ್ತು ಯಾವಾಗಲೂ ಆನಂದಮಯ ಎಂದು ತಿಳಿದುಕೊಳ್ಳಬೇಕು. ಸುಮ್ಮನೆ ಸ್ವರೂಪದಿಂದ ಬಹಿರ್ಮುಖಿಗೊಳಿಸುವ ಕಲ್ಪನೆಗಳ ಗೊಡವೆಯೇತಕೆ. ಸದಾನಂದ ಅಥವಾ ಕೃಷ್ಣನು ವ್ಯಾವಹಾರಿಕ ಜಾಗ್ರ ಮತ್ತು ಕನಸುಗಳಿಂದ ಬಾಧೆ ಹೊಂದಿಲ್ಲವೆಂಬುದನ್ನು ವಿವರಿಸಲು ಕೇವಲ ನಿದ್ರೆಯ ಉದಾಹರಣೆಯೊಂದು ಸಾಕು. ಪ್ರತಿಯೊಂದು ಗಾಢನಿದ್ರೆಯಲ್ಲಿ ಜೀವನು ವ್ಯಾವಹಾರಿಕ ಜಾಗ್ರ ಮತ್ತು ಕನಸುಗಳಿಂದ ಯಾವದೇ ರೀತಿಯಿಂದ ಬಾಧೆ ಹೊಂದದ ಆನಂದವನ್ನು ಅನುಭವಿಸುತ್ತಾನೆ.ಆದ್ದರಿಂದ ಈ ಅವಿಕಾರಿ ಸತ್ಯವನ್ನು ನೆನಪಿಸಿಕೊಂಡು ಅದರಲ್ಲಿ ಏಕೆ ನೆಲೆಯಾಗಿ ನಿಲ್ಲಬಾರದು.ಅದರಂತೆ ಎರಡು ಕಲ್ಪನೆಗಳ ನಡುವಿನ ಕಲ್ಪನಾರಹಿತ, ಅರಿವು ಸಹಿತ ಸ್ಥಿತಿಯಲ್ಲಿಯ ನಿರ್ವಿಕಲ್ಪ ಚೈತನ್ಯವು, ಅದನ್ನು ಅನುಭವಿಸಬೇಕೆಂದಾಗಲೆಲ್ಲಾ ಸುಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ಇದನ್ನು ಖಾತ್ರಿ ಮಾಡಿಕೊಂಡು ಅತಿ ಪರಿಶುದ್ಧ ಮನಸ್ಸಿನ ಸ್ಥಿತಿಯಲ್ಲಿ (ಮನಸ್ಸಿನ ಸಮಸ್ಥಿತಿ) ನೆಲೆಯಾಗಿ ನಿಲ್ಲಬೇಕು.

೧೫. ಶಾಸ್ತ್ರಾದಿಗಳು ಅಜ್ಞಾನಾವೃತ ಜೀವಿಗಳಿಗೆ ಮಾತ್ರ. ಆದರೆ ಅವು ಪರಮಾರ್ಥ ಪಂಡಿತರಿಗಲ್ಲ. ಅವಿದ್ಯೆ ಅಥವಾ ಶಕ್ತಿ ಅಥವಾ ಮಾಯೆ ಅಥವಾ ಪ್ರಕೃತಿ ಇಲ್ಲದ ಸತ್ಯದಲ್ಲಿ ನೆಲೆ ನಿಂತವರಿಗಲ್ಲ.

**ತಸ್ಮಾತ್ ಅವಿದ್ಯಾವದ್ವಿಷಯಾಣಿ, ಪ್ರತ್ಯಕ್ಷಾದೀನಿ**

**ಪ್ರಮಾಣಾನಿ ಶಾಸ್ತ್ರಾಣಿ ಚ**

- ಅಧ್ಯಾಸ ಭಾಷ್ಯ

**ಯೇನ ಮುನಿನಾ ದೃಷ್ಟೋ ಜ್ಞಾತಃ ವೇದಾಂತೇಷು**

**ಔಪನಿಷದಃ ಪುರುಷಃ ಸ ಸರ್ವಿದೃಕ್ ಸರ್ವಜ್ಞಃ**

**ಪರಮಾರ್ಥ ಪಂಡಿತಃ**

- ಗೌಡಪಾದ ಕಾರಿಕಾ

(ಶಾಸ್ತ್ರಾದಿಗಳು ಅಜ್ಞಾನದಿಂದ ಪ್ರಭಾವಿತರಾದವರಿಗೆ ಮಾತ್ರ ಇರುತ್ತವೆ. ಯಾವ ಮುನಿಯು ವೇದಾಂತ, ಉಪನಿಷತ್ತುಗಳಲ್ಲಿ ವಿವರಿಸಿದ ಪುರುಷನನ್ನು

ತಿಳಿದುಕೊಂಡಿರುವವನೋ ಅವನೇ ಎಲ್ಲವನ್ನು ತಿಳಿದುಕೊಂಡವನು. ಅವನೇ ಪರಮಾರ್ಥ ಪಂಡಿತನು.)

**ಅಪಿ ಚ ನ ಕದಾಚಿಜ್ಜೀವಸ್ಯ ಬ್ರಹ್ಮಣಾ ಸಂಪತ್ತಿರ್ನಾಸ್ತಿ**

**ಸ್ವರೂಪಸ್ಯಾನಪಾಯಿತ್ವಾತ್** - ಬ್ರಹ್ಮಸೂತ್ರ ಭಾಷ್ಯ

(ಬ್ರಹ್ಮ ಜೀವರ ಏಕತ್ವವು ಯಾವಾಗಲೂ ಇದೆ. ಯಾಕೆಂದರೆ ಸ್ವರೂಪವು ಅವಿನಾಶಿ ಇರುವದು.)

ಯಾರೂ ಆನಂದ ಸ್ವರೂಪವನ್ನು ನಾಶ ಮಾಡಲಾರರು. ಉಪಾಧಿಯ ದೃಷ್ಟಿಕೋನದಿಂದ ಜೀವನು ಬ್ರಹ್ಮನಾಗುವನೆಂದು ಹೇಳಿದೆ. ಜೀವನು ಯಾವಾಗಲೂ ಬ್ರಹ್ಮನೊಡನೆ ಒಂದಾಗಿಯೇ ಇದ್ದಾನೆ, ಹೊರತಾಗಿ, ಯಾವದೇ ದೇಶ ಕಾಲದಲ್ಲಿ ಬ್ರಹ್ಮನೊಡನೆ ಒಂದಾಗಬೇಕಾಗಿಲ್ಲ, ಅಮೃತತ್ವವನ್ನು ಹೊಂದಬೇಕೆನ್ನುವವನು ಮನಸ್ಸಿನ ಬಹಿರ್ಮುಖವೃತ್ತಿಯನ್ನು ಹಿಂದಿರುಗಿಸಿ, ತನ್ನ ನಿಜಸ್ವರೂಪದಲ್ಲಿ ಲಕ್ಷ್ಯವಿಟ್ಟು, ಅದು ಯಾವಾಗಲೂ ಅಮೃತಮಯವೇ (ಬ್ರಹ್ಮ) ಇರುವದೆಂಬುದನ್ನು ಅನುಭವಿಸುವನು, ಅವಿದ್ಯೆಯ ಉಪಾಧಿ ಮತ್ತು ಅದರ ಅನೇಕ ಪ್ರಕಾರಗಳು (ವ್ಯಾವಹಾರಿಕ ಜಾಗ್ರ, ಕನಸು, ಗಾಢನಿದ್ರೆ) ಸ್ವರೂಪದ ಆಧಾರದ ಮೇಲೆ ತೋರಿ ಅಡಗುತ್ತಿದ್ದರೂ, ತಾನು ಯಾವಾಗಲೂ ಬ್ರಹ್ಮನೇ ಮತ್ತೇನೂ ಅಲ್ಲವೆಂಬುದು ಪೂರ್ಣ ನಿಶ್ಚಯವಾಗುವದು.

**ದೃಶ್ಯತೆ ತ್ವಗ್ರ್ಯಯಾ ಬುದ್ಧ್ಯಾ**

**ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ** - ಕಾಠಕೋಪನಿಷತ್ತು.

**ಯತೋ ವಾಚೋ ನಿವರ್ತಂತೆ**

**ಅಪ್ರಾಪ್ಯ ಮನಸಾ ಸಹ**

**ಆನಂದಂ ಬ್ರಹ್ಮಣೊ ವಿದ್ವಾನ್**

**ನ ಬಿಭೈತಿ ಕುತಶ್ಚನ** - ತೈತ್ತರಿಯೋಪನಿಷತ್ತು.

(ವಾಣಿಯು ಸ್ವರೂಪವನ್ನು ಮುಟ್ಟಲಾರದೆ ಮನಸ್ಸಿನೊಡನೆ ಹಿಂತಿರುಗುತ್ತದೆ. ಬ್ರಹ್ಮನ ಆನಂದಮಯ ಇರುವನ್ನು ತಿಳಿದುಕೊಂಡವನು ಯಾವದಕ್ಕೂ ಹೆದರುವದಿಲ್ಲ.)

ಆದ್ದರಿಂದಲೇ ರಜ, ತಮ ಕಶ್ಮಲವನ್ನು ಕಳೆದುಕೊಂಡ, ಸೂಕ್ಷ್ಮಾತಿಸೂಕ್ಷ್ಮ ಮನಸ್ಸಿಗೆ ಮಾತ್ರ ಸತ್ಯವು ಅನುಭವಕ್ಕೆ ಬರುವದು.

**ಯನ್ಮನಸಾ ನ ಮನುತೆ ಯೇನಾಹುರ್ಮನೋಮತಮ್**

**ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೆ.** - ಕೇನೋಪನಿಷತ್ತು.



(ಯಾವದನ್ನು ಮನಸ್ಸಿನಿಂದ ತಿಳಿಯಲಿಕ್ಕೆ ಬರುವದಿಲ್ಲವೋ, ಯಾವದು ಮನಸ್ಸನ್ನು ತಿಳಿಯುತ್ತದೆಯೋ, ಅದನ್ನೇ ನೀನು ಬ್ರಹ್ಮವೆಂದು ತಿಳಿ).

ಯಾವದು ಧ್ಯಾನಿಸಲ್ಪಡುವದೋ ಅಥವಾ ಅದು, ಇದು ಎಂದು ಪೂಜಿಸಲ್ಪಡುವದೋ, ಅದು ಬ್ರಹ್ಮ(ಸತ್ಯ) ವಲ್ಲ. ಆದ್ದರಿಂದ ಅಜ್ಞಾನದ ಉಪಾಧಿಯನ್ನು ತೆಗೆದುಹಾಕಿ ನಿನ್ನ ನಿಜವೇ ಉಳಿ.

**ಸತ್ಯಂ ಜ್ಞಾನಂ ಅನಂತಂ ಬ್ರಹ್ಮ**

(ಬ್ರಹ್ಮವು ಇರುವು, ಅರುವು, ಅನಂತವು)

ಬ್ರಹ್ಮವು ನಾಮ, ರೂಪ, ಕ್ರಿಯಾರಹಿತವು. ಅದು ಅಸ್ತಿ, ಭಾತಿ, ಪ್ರಿಯವು, ಇಂದ್ರಿಯಗಳ ಅಥವಾ ಮನಸ್ಸಿನ ವಿಷಯಗಳು ದೃಶ್ಯವಾದಂತೆ ಆನಂದವು ದೃಶ್ಯವಾಗಲಾರದು. ಮಾನವನು, ಸೂಕ್ಷ್ಮಾತಿಸೂಕ್ಷ್ಮ ಸತ್ಯದಲ್ಲಿ ಅಸ್ತಿತ್ವವಿಲ್ಲದೆ ಅದರ ಮೇಲೆ ಹೇಗೋ ತೋರಿದ, ಅವಿದ್ಯೆ ಅಥವಾ ಶಕ್ತಿಯಿಂದುಂಟಾದ ಕೃತ್ರಿಮ ಭೇದವನ್ನು ತೆಗೆದುಹಾಕಿ ಸ್ವರೂಪವೇ ಇರಬೇಕು.

(ಸೂಕ್ಷ್ಮಾತಿಸೂಕ್ಷ್ಮ ಏಕಾಗ್ರವಾದ ಬುದ್ಧಿಯಿಂದ ಸೂಕ್ಷ್ಮದರ್ಶಿಗಳು ಬ್ರಹ್ಮ (ಆನಂದ) ವನ್ನು ತಿಳಿದುಕೊಳ್ಳುತ್ತಾರೆ.)

ಸತ್ಯವು ಸೂಕ್ಷ್ಮಾತಿಸೂಕ್ಷ್ಮ ಮನಸ್ಸಿಗೆ ಮಾತ್ರ ಗ್ರಾಹ್ಯವಾಗುತ್ತದೆ. ಅದು ಸಾಮಾನ್ಯ ಮನಸ್ಸು ಮತ್ತು ಗಾಢನಿದ್ರೆಯನ್ನು ಮೀರಿದೆ.

**ತಂದುರ್ದರ್ಶಂ ಗೂಢಂ ಮನುಪ್ರವಿಷ್ಟಂ**

**ಗುಹಾಹಿತಂ ಗಹ್ವರೇಷ್ಠಂ ಪುರಾಣಮ್**

**ಅಧ್ಯಾತ್ಮಯೋಗಾಧಿಗಮೇನ ದೇವಂ ಮತ್ವಾ**

**ಧೀರೋಹರ್ಷ ಶೋಕೌ ಜಹಾತಿ** - ಕಾಠಕೋಪನಿಷತ್ತು.

(ಕಾಣಲಿಕ್ಕೆ ಕಠಿಣವಾದ, ಗೂಢವಾದ, ಗುಹೆಯಲ್ಲಿರುವ, ಸನಾತನವಾದ ಸತ್ಯವನ್ನು ಅಧ್ಯಾತ್ಮಯೋಗದಿಂದ ಅನುಭವಿಸಿದ ಧೀರನು ಹರ್ಷ, ಶೋಕಗಳೆರಡನ್ನೂ ಬಿಡುತ್ತಾನೆ.)

೧೬. ಬ್ರಹ್ಮವು ದೃಶ್ಯವಾಗಲಾರದು ಮತ್ತು ಅದನ್ನು ಅಲ್ಲಗಳೆಯಲು ಬರುವದಿಲ್ಲ. ಎಲ್ಲದಕ್ಕೂ ಆಧಾರವಾದ ಬ್ರಹ್ಮವನ್ನು ಎಂದಿಗೂ ಅಲ್ಲಗಳೆಯಲು ಅಥವಾ ಇಲ್ಲದಂತೆ ಮಾಡಲು ಬರುವದಿಲ್ಲ. ಸತ್ಯದ ಆಧಾರದ ಮೇಲೆ ತೋರಿದ ತೋರಿಕೆಗಳು ಮಾತ್ರ ಅಲ್ಲಗಳೆಯಲ್ಪಡುತ್ತವೆ. ಅವಿದ್ಯೆ ಅಥವಾ ಶಕ್ತಿಯ ಹುಸಿ ತೋರಿಕೆಗಳು ತೆಗೆದುಹಾಕಲ್ಪಟ್ಟಾಗ, ಆಧಾರವಾದ ಸತ್ಯವೇ ಉಳಿಯುವದು. ತೋರಿಕೆಯ ಶಕ್ತಿಯಿಂದ, ಸತ್ಯದ ಮೇಲೆ ಅಧ್ಯಾ

ರೋಪಿತವಾದವುಗಳು ತೆಗೆದು ಹಾಕಲ್ಪಡುತ್ತವೆ. ಸ್ವರೂಪ ಜ್ಞಾನದ ವಿದ್ಯೆಯಿಂದ ವ್ಯಾವಹಾರಿಕ ಜಾಗ್ರ, ಕನಸು, ಗಾಢನಿದ್ರೆಗಳ ರೂಪದ ಪ್ರಪಂಚವು ತೆಗೆದು ಹಾಕಲ್ಪಡುತ್ತದೆ. ಸತ್ಯವು ಇದ್ದಕ್ಕಿದ್ದಂತೆಯೇ ಇರುವದು. ಏಕೆಂದರೆ ಅದನ್ನು ಇಲ್ಲದಂತೆ ಮಾಡುವದು ಅಸಾಧ್ಯವು. ಇದೇ ಮುಕ್ತಿ ಅಥವಾ ಬಿಡುಗಡೆಯು.

**ಸ್ವರೂಪಾವಸ್ಥಿತಿ ಮುಕ್ತಿರಿತ್ಯಭಿಧೀಯತೆ**

(ಸ್ವರೂಪಾವ ಸ್ಥಿತಿಯೇ ಮುಕ್ತಿಯೆನಿಸುವದು)

ಇಲ್ಲಿ ಶೂನ್ಯವೆಂಬುದರ ಪ್ರಶ್ನೆಯೇ ಇಲ್ಲ. ಬಿಡಲು ಸಾಧ್ಯವಿದ್ದ ತೋರಿಕೆಯನ್ನು (ಅವಿದ್ಯೆ ಮತ್ತು ಅದರ ಕಾರ್ಯ) ಬಿಟ್ಟಿದ್ದಾಯಿತು. ಆದರೆ ತನ್ನ ನಿಜವನ್ನು ಯಾವದೇ ಸಾಧನದಿಂದಲೂ ಬಿಡಲು ಬರುವದಿಲ್ಲ. ನಿಜಸ್ವರೂಪದ ಹೊರಗೆ ಇದ್ದ ಶಕ್ತಿಯ ಅಧ್ಯಾರೋಪಗಳನ್ನು ಬಿಟ್ಟಾಗ, ಜೀವನು ತನ್ನ ನಿಜ ಸ್ವರೂಪವನ್ನು ಹೊಂದುತ್ತಾನೆ.

**ಅವಿವೇಕೇನ ಕೃತೋ ಬಂಧಃ**

**ವಿವೇಕೇನ ನಿವಾರ್ಯತೆ**

(ಅವಿವೇಕದಿಂದಲೇ ಎಲ್ಲ ದುಃಖವು ಬಂದಿರುವದು. ವಿವೇಕದಿಂದ ಎಲ್ಲ ದುಃಖದ ನಿವಾರಣೆಯಾಗುವದು.)

ನಾದ,ಬಿಂದು, ಕಲಾತೀತವಾದ, ಕಾಲ, ದೇಶ, ಕಾರಣಗಳಿಗತೀತವಾದ ಸಚ್ಚಿದಾನಂದ ಸ್ವರೂಪವೇ ಉಳಿಯುವದು.

### The Publications of

# Shree Atmananda Adhyatma Prakashan Hangaraki

Po : Garag                Tq. & Dist. Dharwad

| | | |
|---|---|---|
| 1. | Self Realisation | 3-00 |
| 2. | First Intuition | 3-00 |
| 3. | Eternal Peace | 6-00 |
| 4. | The Goal is one & the Path is one | 6-00 |
| 5. | Who am I Really ? | 15-00 |
| 6. | The Life & Teachings of Shri Swami Shivananda of Naganur-Gadag | 10-00 |
| 7. | The Science of Happiness | 5-00 |
| 8. | Deep Sleep & Samadhi | 3-00 |
| 9. | ಅಧ್ಯಾತ್ಮಪ್ರವಚನ ಸಂಗ್ರಹ | 15-00 |
| 10. | ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳ ಜೀವನ ಬೋಧಾಮೃತ | 10-00 |
| 11. | ಕಾಮದಹನ | 6-00 |
| 12. | ನಿಜಸುಖ ಮಾರ್ಗ ಪ್ರದೀಪ | 5-00 |
| 13. | ಸ್ವರೂಪ ಮಾರ್ಗದರ್ಶಕ | 10-00 |
| 14. | ನಿಜವಾದ ನಾನು ಯಾರು ? | 15-00 |
| 15. | ಅಧ್ಯಾತ್ಮವಚನಾಮೃತ | 15-00 |
| 16. | ಆತ್ಮಸಂಶೋಧನೆ | 5-00 |
| 17. | ಶ್ರೀ ಸದ್ಗುರು ಶಿವಾನಂದರ ಪ್ರವಚನ ಸಾರ | 15-00 |
| 18. | ಶ್ರೀ ಸದ್ಗುರು ಆತ್ಮಾನಂದರ ಪ್ರವಚನ ಸಾರ | 15-00 |
| 19. | ಪುನರ್ಜನ್ಮ | 25-00 |
| 20. | ಪೂಜ್ಯ ಶ್ರೀ ಸದ್ಗುರು ಆತ್ಮಾನಂದ ಸ್ವಾಮಿಗಳವರ ಪ್ರವಚನ ಸಂಗ್ರಹ | 15-00 |
| 21. | ಓಂ ನಮಃ ಸುಖಾಯ ಈ ದಿವ್ಯ ಮಹಾಮಂತ್ರದ ಬೆಳ್ಳಿ ಹಬ್ಬ ಮತ್ತು ಪೂಜ್ಯಶ್ರೀ ಆತ್ಮಾನಂದ ಸ್ವಾಮಿಗಳವರ 74ನೆಯ ಹುಟ್ಟು ಹಬ್ಬದ ದಿನಾಚರಣೆಯ ಸ್ಮರಣ ಸಂಚಿಕೆ. | 10-00 |
| 22. | ಪೂಜ್ಯಶ್ರೀ ಗುರುದೇವ ಆತ್ಮಾನಂದ ಸ್ವಾಮಿಗಳು, ಮನಿಹಾಳ ಸುರೇಬಾನ ಇವರ ಇಂಗ್ಲೀಷ ಬಿಡಿ ಟಿಪ್ಪಣಿಗಳ ಕನ್ನಡ ಅನುವಾದದ ಗ್ರಂಥಗಳು | 10-00 |